# ಮುಗುದೆಯರ ಪತ್ರಗಳು

198360

ಸಿ. ಕೃಷ್ಣ

ಪ್ರಕಾಶಕರು

ಕಾವ್ಯಾಲಯ

ಮೈಸೂರು

UNIVERSAL LIBRARY
OU_198360
UNIVERSAL LIBRARY

ಕನ್ನಡ ಕಾವ್ಯಮಾಲೆ—೩೪

# ಮುಗುದೆಯರ ಪತ್ರಗಳು

ಸಿ. ಕೃಷ್ಣ

ಪ್ರಕಾಶಕರು

ಕಾವ್ಯಾಲಯ

ಮೈಸೂರು

ಮೊದಲನೆಯ ಮುದ್ರಣ—೧೯೫೫

*All Rights Reserved*
ಎಲ್ಲ ಹಕ್ಕುಗಳನ್ನು ಕಾದಿಡಲಾಗಿದೆ

ಬೆಲೆ : ರೂ. ೧-೮-೦

ಮುದ್ರಣಕಾರರು :
ಜಿ. ಎಚ್. ರಾಮರಾವ್, ಬಿ.ಎಸ್ಸಿ.
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು

# ಮುನ್ನುಡಿ

ಈ ಪುಸ್ತಕದಲ್ಲಿರುವ ಮೂರು ಕಟ್ಟು ಕಾಗದಗಳಲ್ಲಿ ಮೊದಲಿನೆರಡು ಕಟ್ಟುಗಳು ಕೆಲವು ವರ್ಷಗಳ ಹಿಂದೆ "ಪ್ರಬುದ್ಧಕರ್ಣಾಟಕ"ದಲ್ಲಿ ಪ್ರಕಟವಾಗಿದ್ದುವು. ಮೂರನೆಯ ಕಟ್ಟು ಮಾತ್ರ ಹೊಸದು.

ಇವುಗಳನ್ನು ಹುಟ್ಟಿದ ಕ್ರಮದಲ್ಲೇ ಪ್ರಕಟಿಸಲಾಗಿದೆ. ಮೊದಲನೆ ಎರಡನೆ ಕಟ್ಟುಗಳಿಗೆ ಬಹಳ ಅಂತರವಿರಲಿಲ್ಲ. ಆದರೆ ಎರಡನೆಯದಕ್ಕೂ ಮೂರನೆಯದಕ್ಕೂ ಸುಮಾರು ಐದಾರು ವರ್ಷಗಳ ಅಂತರವಿದೆ. ಏಕೆ ಒಟ್ಟಿಗೆ ಬರೆಯಲಿಲ್ಲವೆಂಬ ಪ್ರಶ್ನೆಗೆ ನಾನು ಉತ್ತರ ಕೊಡಲು ಸಮರ್ಥನಲ್ಲ.

ಸರ್ವಾಂಗಸುಂದರವಾದ ಕೃತಿಯನ್ನು ಹೊರಗೆಡವಿರುವೆನೆಂಬ ಧೈರ್ಯ ನನಗಿಲ್ಲ. ಬರೆದುದೆಲ್ಲ, ಎಲ್ಲ ಕಾಲಕ್ಕೂ ಎಲ್ಲರಿಗೂ ಪ್ರಿಯವಾಗಿರುವುದೆಂದು ಯಾರೂ ಹೇಳಲಾರರೆಂದು ನನ್ನ ನಂಬಿಕೆ. ಈ ಪುಸ್ತಕದಲ್ಲಿ ಸ್ವಲ್ಪ ಭಾಗವಾದರೂ ಸ್ವಲ್ಪ ಮಂದಿಗೆ ರುಚಿಸಿದರೆ ನಾನು ಕೃತ ಕೃತ್ಯ.

ಈ ಗ್ರಂಥ ಪ್ರಕಟವಾಗಲು ಶ್ರೀ ಚಿದಂಬರಂರವರ ಸತತ ಶ್ರಮವೇ ಕಾರಣ. ಅದಕ್ಕೂ ಮುಂಚೆ, ಇವುಗಳನ್ನು ಬರೆಯಲು ನನ್ನ ಕೆಲವು ಮಿತ್ರರ ಪ್ರೋತ್ಸಾಹ ಕಾರಣ. ಈ ರೂಪು ಇನ್ನು ಕೆಲವು ಮಿತ್ರರ ಸಲಹೆಗಳ ಪರಿಣಾಮ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಸಿ. ಕೃಷ್ಣ.

# ಪ್ರಕಾಶಕರ ಅರಿಕೆ

ಶ್ರೀಯುತ ಕೃಷ್ಣರ 'ನನ್ನ ಅಪ್ಸರೆ'ಯನ್ನು ಓದುತ್ತ ಮಿತ್ರರೊಬ್ಬರು "ಹೂವುಗಳಲ್ಲಿ ಪಾರಿಜಾತ ಹೇಗೋ ಹೊತ್ತಗೆಗಳಲ್ಲಿ 'ನನ್ನ ಅಪ್ಸರೆ' ಹಾಗೆ" ಎಂದಿದಾರೆ. ಆ ಚಿಕ್ಕ ಕೃತಿಯಲ್ಲಿ ಕಂಡುಬರುವ ಸರಸಯುಕ್ತವಾದ ಸ್ವಾಭಾವಿಕತೆ, ಆಡಂಬರವಿಲ್ಲದ ವಿಲಾಸ, ನವುರಾದ ಪರಿಮಳ ಇವುಗಳನ್ನು ಓದುಗರು ಈ ವಿಸ್ತಾರವಾದ ಕೃತಿಯಲ್ಲಿ, ವಿಶಾಲಾವಕಾಶದಲ್ಲಿ ಅನುಭವಿಸಬಹುದು.

ಈ ಪುಸ್ತಕದಲ್ಲಿ ಮೂರುಕಟ್ಟು ಕಾಗದಗಳನ್ನು ತರಲಾಗಿದೆ: ವಿಶಾಲಾಕ್ಷಿಗೆ ಆಕೆಯ ಗಂಡ ಮದುವೆಯಾದ ತರುಣದಲ್ಲಿ ಬರೆದ ಕಾಗದಗಳು; ವಿಶಾಲಾಕ್ಷಿ ಗಂಡನ ಮನೆಗೆ ಬಂದಮೇಲೆ ತನ್ನ ಸಂಸಾರದ ಸುಖಗಳನ್ನುಕುರಿತು ಗೆಳತಿ ವೆಂಕೂಗೆ ಬರೆಯುವ ಪತ್ರಗಳು; ಮತ್ತು ಕಾಲೇಜಿನ ವಿದ್ಯೆಯನ್ನು ಮುಗಿಸಿಕೊಂಡು ಹಳ್ಳಿಯನ್ನು ಸೇರಿರುವ ಇಂದಿರೆ, ತನಗೆ ಮದುವೆಯಾದ ಬಗೆಯನ್ನೂ ತನ್ನ ಪ್ರಣಯಯಾತ್ರೆ (Honey-moon)ಯನ್ನೂ ಗೆಳತಿ ಕಮಲೂಗೆ ವಿವರಿಸುವ ಪತ್ರಗಳು. ಗಂಡ ಹೆಂಡಿರ ಪ್ರಣಯಸಂಬಂಧವಾದ ಕಾಗದಗಳು ಯಾವ ಓದುಗನ ಕುತೂಹಲವನ್ನು ತಾನೆ ಕೆರಳಿಸಲಾರವು? ಹೀಗೆ ಸಹಜವಾಗಿಯೇ ಆಕರ್ಷಕವಾದ ಈ ಪ್ರಣಯ ಪತ್ರಗಳು ಇಲ್ಲಿನ ಮುಖ್ಯವ್ಯಕ್ತಿಗಳ ಸರಸತೆ ಸ್ವಾಭಾವಿಕತೆ ಸಹೃದಯತೆಗಳಿಂದ ಮನಸ್ಸನ್ನು ವಿಶೇಷವಾಗಿ ಸೆರೆಗೊಳ್ಳುತ್ತವೆ. ವಿಶಾಲಾಕ್ಷಿ, ವಿಶಾಲಾಕ್ಷಿಯ ಗಂಡ, ಇಂದಿರೆ, ಇವರ ಗೆಳೆಯ ಗೆಳತಿಯರು ವಿಶ್ವಾಸಯುತರು, ಶುದ್ಧಾಂತಃಕರಣಪೂರ್ಣರು. ಇವರಿಗೆ ಪ್ರೇಮವೆಂದರೆ ಗಂಡ ಹೆಂಡಿರಿಬ್ಬರೇ ಸಂತೋಷವಾಗಿರುವುದಲ್ಲ, ತಮ್ಮ ಸುತ್ತಮುತ್ತ ಇರುವವರಿಗೂ ಸಂತೋಷದ ಬೆಳಕನ್ನು ನೀಡುವುದು—ಎಂಬ ದೇಶೋವಿಶಾಲವಾದ ರೀತಿಯ ತಿಳಿವಿದೆ.

ಇಲ್ಲಿನ ಪ್ರಣಯ ಪ್ರಸಂಗಗಳಲ್ಲಿ ಹುಡುಗಾಟವಿಲ್ಲದೆ ಇಲ್ಲ. ಆದರೆ ಯಾವುದೂ ಮಿತಿಮೀರದಿದೆ. ಎಷ್ಟಿರ ಬೇಕೋ ಹೇಗಿರಬೇಕೋ ಅಷ್ಟೆ ಇರುವಂತಿದೆ. ಪ್ರೇಮ ಗಾಂಭೀರ್ಯವನ್ನು ಕಳೆದುಕೊಂಡು ಎಲ್ಲೂ ಹುಚ್ಚೆದ್ದಿಲ್ಲ. ಉದ್ದಕೂ ಸದ್ದಿಲ್ಲದ ಸಂತೋಷ. ಕಲೆಗಾರನ ಕಲ್ಪವಸ್ತುವಾದ ಮಿತಿ ಕೃಷ್ಣರ ವಶವಾಗಿದೆ. ಸಂಸಾರದ ದಿನ ದಿನದ ಸಂಗತಿಗಳೂ ಮಾತುಗಳೂ ಇಲ್ಲಿ ಚಿನ್ನದ ಮೆರುಗನ್ನು ಪಡೆದಿವೆ.

ಸರ್ವಾಂಗ ಸುಂದರವಾದ ಈ ಕೃತಿ ಪತ್ರರೂಪದ ರಚನಾ ಕೌಶಲದ ಹೊಸಬಗೆಯಿಂದಲೂ ಮನೋಹಾರಿಯಾಗಿದೆ. ಅಲ್ಲದೆ ಸಾಮಾನ್ಯವಾಗಿ ಪದ್ಯಬಂಧಗಳಲ್ಲಿ ಮಾತ್ರ ವಿಶೇಷವಾಗಿ ಕಂಡುಬರುವ ಒಂದು ಬಗೆಯ ನವುರೂ ಸೊಬಗೂ ಇಲ್ಲಿನ ಗದ್ಯಚಿತ್ರಗಳಲ್ಲಿ ಒಡಮೂಡಿವೆ.

ಹಿತಸೌರಭಯುತವಾದ ಕುಸುಮಚಯದಂತಿರುವ ಮುಗುದೆಯರ ಈ ಪತ್ರರೂಪದ ಸಂಸಾರಸಂಹಿತೆಯನ್ನು ಕನ್ನಡಿಗರ ಮುಂದಿಡಲು ಅವಕಾಶವಿತ್ತ ಶ್ರೀಕೃಷ್ಣ ಅವರು ವಂದನಾರ್ಹರು.

ಕೂಡಲಿ ಚಿದಂಬರಂ.

# ಮುಗುದೆಯರ ಪತ್ರಗಳು

# ವಿವರ

ಪುಟ


೧. ನನ್ನ ಕಾಗದಗಳು—ವಿಶಾಲಾಕ್ಷಿಗೆ . . . . . . . . ೧

೨. ವಿಶಾಲಾಕ್ಷಿಯ ಕಾಗದಗಳು . . . . . . . . . ೩೭

೩. ಇಂದಿರೆಯ ಕಾಗದಗಳು . . . . . . . . . ೬೫

# ನನ್ನ ಕಾಗದಗಳು—ವಿಶಾಲಾಕ್ಷಿಗೆ

## ೧

ವಿಶಾಲಾಕ್ಷೀ—

ನಾನು ನಿನ್ನನ್ನು ನೋಡಿರುವುದು ಎರಡೇಸಲ; ಮೊದಲು ಮದುವೆಗೆ ಮುಂಚೆ, ನಮ್ಮ ತಂದೆಯವರೊಡನೆ ಬಂದಾಗ; ಎರಡನೆಯಸಲ ಮದುವೆಯಲ್ಲಿ, ನಾಲ್ಕು ದಿನ ನಿಮ್ಮ ಮನೆಯಲ್ಲಿದ್ದಾಗ. ಆದರೂ ನಿಮ್ಮ ಮನೆಯನ್ನು ಬಿಟ್ಟು ಹೊರಟಮೇಲೆ ನನಗೆ ಏನೋ ಬಿಟ್ಟುಬಂದಂತೆ ಕಂಡುಬಂತು.

ಇದು ಹಾಗಿರಲಿ; ಇಷ್ಟಾದರೂ "ನಿನ್ನನ್ನು ನಾನು ಸರಿಯಾಗಿ ನೋಡಲಿಲ್ಲವಲ್ಲ; ಒಂದುಬಾರಿ ಹತ್ತಿರ ನಿಂತು ನೋಡಿ, ಮನಬಿಚ್ಚಿ ಎರಡು ಮಾತನಾಡಿ ಸಲಿಗೆಯಿಂದ ಒಂದು ಕಡೆ ಇಬ್ಬರೂ ಕುಳಿತುಕೊಳ್ಳಲಿಲ್ಲವಲ್ಲ" ಎನ್ನಿಸುತ್ತದೆ. ಅದು ಯಾರೊಬ್ಬರ ತಪ್ಪೂ ಅಲ್ಲ.

ನಾನು ನಿನ್ನನ್ನು ನೋಡುವುದಕ್ಕೆ ಬಂದಾಗ, ನಿನಗೆ ಜ್ಞಾಪಕವಿರಬಹುದು, ನಾನು ಒಂದುಕಡೆ ಗೋಡೆಯನ್ನೊರಗಿಕೊಂಡು ಚಾಪೆಯ ಮೇಲೆ ಕುಳಿತಿದ್ದೆ. ನಿಮ್ಮ ತಂದೆ ನಿಮ್ಮ ತಾಯಿಗೆ, "ವಿಶಾಲಿಯನ್ನು ಕಳುಹಿಸು" ಎಂದರು. ನಾನೂ ಆಸೆಯಿಂದ ನಡುಮನೆಯ ಬಾಗಿಲ ಕಡೆ ಅರ್ಧ ಎತ್ತಿದ ಕತ್ತಿನಿಂದ ನೋಡಿಯೂ ನೋಡದಂತೆ ನೋಡುತ್ತಿದ್ದೆ. ಸ್ವಲ್ಪ ಹೊತ್ತಿನ ಮೇಲೆ ನೀನು ಕಷ್ಟದಿಂದ ಬಂದೆ. ನಿನ್ನ ಬಳೆಯ ಸದ್ದು, ನಿನ್ನ ಹೊಸ ಸೀರೆಯ ಸರಸರ ಶಬ್ದ ಇವೆಲ್ಲ ನೀನು ಬಂದೆಯೆಂದು ತಿಳಿಸಿದವು. ಆದರೂ ನಾನು ಕತ್ತೆತ್ತಿ ನೋಡಲಾಗಲಿಲ್ಲ. ನಿಮ್ಮ ತಾಯಿ ಎಷ್ಟು ಕಷ್ಟಪಟ್ಟು ಅಲಂಕಾರ ಮಾಡಿದ್ದರೋ ಏನೋ ಪಾಪ! ನನ್ನ ಮನಸ್ಸಿನಲ್ಲಿ ನಿನಗೆ ನಾನು ಅನ್ಯಾಯವಾಗಿ ತೊಂದರೆ ಕೊಡುತ್ತಿದ್ದೇನಲ್ಲಾ ಎಂದೂ, ಮನೆಯವರು ಹುಡುಗಿ ಚೆನ್ನಾಗಿದೆಯೆಂದು ಹೇಳಿದರೂ ಅವರ ಮಾತನ್ನು ನಂಬಲಿಲ್ಲವಲ್ಲ ಎಂದೂ, ಎರಡೂ ತೋರಿದುದರಿಂದ ಹಾಗೆ ಆಯಿತು.

ಮದುವೆಯಲ್ಲಂತು ನೀನು ಬಗ್ಗಿಸಿದ ಕತ್ತು ಎತ್ತಲೇ ಇಲ್ಲ.

ಹೋಮದ ಬೆಂಕಿಗೂ ನನ್ನ ಮೇಲೆ ಕೋಪ ; ನಿನ್ನನ್ನು ನೋಡಬೇಕೆಂದು ಬಯಸಿದಾಗ ಕಣ್ಣುತುಂಬ ಹೊಗೆ. ಆಮೇಲೆ ನೀನು ಅಡಿಗೆ ಮನೆಯಲ್ಲಿ, ನಾನು ರೂಮಿನಲ್ಲಿ ; ಆದರೂ ನೀನು ನನ್ನವಳು.

ಇನ್ನು ಮುಂದೆ ನಾವಿಬ್ಬರೂ ಒಂದೆ. ಎಂಟು ದಿನಗಳ ಹಿಂದೆ ನೀನು ನನಗೆ ಯಾರೋ! ನಾನು ನಿನಗೆ ಯಾರೋ! ಆದರೆ ಈಗ ನಾವು ಇಬ್ಬರೂ ಒಂದೆ. ನಮಗೆ ಮದುವೆಯ ಮಂತ್ರಗಳು ಅರ್ಥವಾಗದೆ ಇರಬಹುದು ; ಇಲ್ಲವೇ ಜೋಯಿಸರು ತಪ್ಪು ಹೇಳಿಸಿರಬಹುದು ; ಅಥವಾ ಬಿಟ್ಟಿರಬಹುದು. ಆ ಮಂತ್ರಗಳು ತಿಳಿಯದೆಯೂ ನಮ್ಮೆರಡು ಹೃದಯಗಳೂ ಅವುಗಳನ್ನು ಅರ್ಥಮಾಡಿಕೊಂಡಿವೆಯೆಂದು ನನಗೆ ಅನ್ನಿಸುತ್ತದೆ. ಸ್ವಲ್ಪ ದಿನಗಳ ಮೇಲೆ ನಾವಿಬ್ಬರೂ ಕಲೆತು ಸಂಸಾರವನ್ನು ನಡೆಸಬೇಕಾಗುತ್ತದೆ. ಇಬ್ಬರ ಮನಸ್ಸೂ ಒಂದಾದರೆ ಇಬ್ಬರಿಗೂ ಆನಂದವೂ ಸುಖವೂ ಉಂಟು. ಹಾಗಾಗಬೇಕಾದರೆ ಒಬ್ಬರನ್ನೊಬ್ಬರು ತಿಳಿದುಕೊಳ್ಳಬೇಕು. ಸಲಿಗೆ ಹೆಚ್ಚಬೇಕು.

ಅದಕ್ಕೋಸ್ಕರವೇ, ನೀನು ಕಾಗದ ಬರೆಯಬೇಕೆಂದು ನಾನು ಬರುವಾಗ ನಿನಗೆ ತಿಳಿಸಿದುದು ; ನಾನು ಬರೆಯಲು ಪ್ರಾರಂಭಿಸಿರುವುದು. ಪ್ರತಿ ಗುರುವಾರವೂ ಒಂದೊಂದು ಕಾಗದ ಬರೆಯುತ್ತೇನೆ. ನೀನು ಅದಕ್ಕೆ ಆದಷ್ಟು ಬೇಗ, ಕೊನೆಯಪಕ್ಷ ಬುಧವಾರವಾದರೂ ಇಲ್ಲಿಗೆ ಬರುವಂತೆ, ಕಾಗದಗಳನ್ನು ಬರೆಯಬೇಕು.

ಇದರೊಳಗೆ ನನ್ನ ವಿಳಾಸವನ್ನು ಬರೆದಿರುವ ಒಂದು ಕವರು ಇಟ್ಟಿದ್ದೇನೆ. ಇದು ನಿನ್ನ ತೊಂದರೆ ಕಡಮೆಮಾಡುವುಕ್ಕಾಗಿ.

ಇತಿ ನಿನ್ನ ಪ್ರಿಯ ಪತಿ.

## ೨

ಮುದ್ದು ವಿಶಾಲೀ—

ನಿನ್ನ ಕಾಗದ ಬರುವುದೆಂದು ನೆನ್ನೆ ಅಂಚೆಯ ಮನೆಗೆ ಹೋಗಿದ್ದೆ ; ಕಾಗದ ಬರಲಿಲ್ಲ. ಬಹಳ ಕೋಪ ಬಂತು. ಕೂಡಲೆ ಈ ಕಾಗದ ಬರೆದಿದ್ದೇನೆ. ಇದಕ್ಕೂ ಉತ್ತರ ಬರದಿದ್ದರೆ ಕಾಗದ ಬರೆಯುವುದನ್ನು ನಿಲ್ಲಿಸುತ್ತೇನೆ. ವಿಳಾಸ ಬರೆದಿದ್ದ ಒಂದು ಕವರನ್ನಿಟ್ಟು ಕಳುಹಿಸಿದರೂ ಒಂದು

ಕಾಗದ ಬರೆಯುವುದಕ್ಕಾಗಲಿಲ್ಲವೇ ?

ಪಾಪ ! ಬಹಳ ಕೆಲಸವೇನೋ ? ಅಡಿಗೆ ಮಾಡಬೇಕೆ ? ಮಕ್ಕಳನ್ನು ನೋಡಿಕೊಳ್ಳಬೇಕೆ ? ಈಗಲೇ ಹೀಗಾದರೆ ಮುಂದೆ ಹೇಗೋ ? ಏನಾದರೂ ಆಗಲಿ, ಬೇಗ ಕಾಗದ ಬರೆಯುತ್ತೀ ಎಂದು ತಿಳಿದುಕೊಂಡಿರುವ

ನಿನ್ನನ್ನು ಪ್ರೀತಿಸುವವ.

೩

ಎನ್ನೊಲವಿನ ವಿಶಾಲೀ—

ನಿನ್ನ ಕಾಗದ ಬಂದು ತಲಪಿತು. ಇಷ್ಟು ಬೇಗ ಬರುವುದೆಂದು ತಿಳಿದಿರಲಿಲ್ಲ. ಉತ್ತರ ತರಿಸಿಕೊಳ್ಳುವುದಕ್ಕೆ ಕಡೆಯಪಕ್ಷ ಇನ್ನು ಎರಡು ಆಣೆಗಳನ್ನಾದರೂ ಸ್ಟಾಂಪಿಗೆ ಖರ್ಚುಮಾಡಬೇಕಾಗಬಹುದೆಂದು ತಿಳಿದುಕೊಂಡಿದ್ದೆ. ಏಕೆಂದರೆ ಹೆಂಗಸರಿಗೆ "ಮಂದಗಮನೆಯರು" ಎಂಬ ಇನ್ನೊಂದು ಹೆಸರಿದೆ. ಅಂದರೆ ಬಹಳ ನಿದಾನ ಅಂತ—ಹಾಗೆ ನೀನೂ ಕೂಡ ಎನ್ನುತ್ತಿದ್ದೆ ; ಪರವಾಗಿಲ್ಲ, ನೀನೂ ಸ್ವಲ್ಪ ಹೊಸ ಕಾಲದ ಹುಡುಗಿ ಎಂದು ಕಾಣುತ್ತದೆ.

ನೀನು ಕಾಗದ ಇಷ್ಟು ಚೆನ್ನಾಗಿ ಬರೆಯಲಾರೆ ಎಂದುಕೊಂಡಿದ್ದೆ. ನನ್ನ ಕೋಪವೆಲ್ಲ ನಿನ್ನ ಕಾಗದ ನೋಡಿದ ಕೂಡಲೆ ಮಾಯವಾಯಿತು. ನಿಜ, ನೀನು ಬರೆದಿರುವುದು : "ಸಿಟ್ಟಾಗಿದ್ದಿದ್ದರೆ ನನ್ನನ್ನು ಮುದ್ದು ವಿಶಾಲಿ ಎಂದು ಕರೆಯುತ್ತಿದ್ದಿರಾ" ಎಂದು. ಅಡ್ರೆಸ್ಸು ಬರೆದ ಕವರು ಇಟ್ಟಿದ್ದಕ್ಕೆ ಆಕ್ಷೇಪಣೆ ಮಾಡಿರುವೆ. ನಿನಗೆ ಕೊಂಚ ಇಂಗ್ಲೀಷು ಬರುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ಅಲ್ಲದೆ, ಮದುವೆಯಲ್ಲಿ ನನ್ನ ಹೆಸರು ಹೇಳುವುದಕ್ಕೆ ಅಷ್ಟು ನಾಚಿಕೊಂಡೆ ; ಇನ್ನು ಹೆಸರು ಬರೆಯಲು ಎಲ್ಲಿ ನಾಚಿಕೊಂಡು ಕಾಗದ ಬರೆಯುವುದಿಲ್ಲವೊ ಎಂದು ಹಾಗೆ ಮಾಡಿದೆ.

ಕಾಗದ ಬರೆಯದಿದ್ದುದಕ್ಕೆ "ಮಂಗಳಗೌರಿ" ಪೂಜೆಯ ನೆವ ಮಾಡಿಕೊಂಡಿದ್ದೀಯೆ. ಈಗ ನೋಡು, ಜ್ಞಾಪಕಕ್ಕೆ ಬಂದಿತು. ಮಂಗಳವಾರ ಬೆಳಗ್ಗೆ ಹತ್ತು ಘಂಟೆಯಲ್ಲಿ ಯಾವುದೋ ಬೀದಿಯಲ್ಲಿ ಹೋಗುತ್ತಿದ್ದೆ. ಆಗ ಎದುರಿಗೆ ನಿನ್ನಂತೆಯೇ ಈಚೆಗೆ ಮದುವೆಯಾದ ಹುಡುಗಿಯೊಬ್ಬಳು ಬರುತ್ತಿದ್ದಳು. ಆಕೆ ಎರೆದುಕೊಂಡು ಕೂದಲನ್ನು ಬಿಡಿಬಿಡಿಯಾಗಿ ಅಳ್ಳಕವಾಗಿ ಜಡೆಹೆಣೆದುಕೊಂಡಿದ್ದಳು. ಕಣ್ಣಿಗೆ ಕಪ್ಪನ್ನು

ಹಚ್ಚಿದ್ದಳು. ಹೊಸ ಸೀರೆ ಕುಪ್ಪಸಗಳನ್ನು ಉಟ್ಟು ತೊಟ್ಟಿದ್ದಳು. ಪೂಜೆಮಾಡಿ ಯಾರನ್ನೋ ಅರಿಶಿನ ಕುಂಕುಮಕ್ಕೆ ಕರೆಯಲು ಹೋಗುತ್ತಿದ್ದಿರಬಹುದು. ಆಗ ನಿನ್ನ ಜ್ಞಾಪಕ ಬಂತು. ನೀನು ಆಗ ಎಷ್ಟು ಚೆನ್ನಾಗಿ ಕಾಣುವೆಯೋ ಎಂದುಕೊಂಡೆ. ನಿನ್ನನ್ನು ಆ ಸ್ಥಿತಿಯಲ್ಲಿ ನಾನು ನೋಡಿದ್ದರೆ ನಾನು ಏನುಮಾಡುತ್ತಿದ್ದೆ ಗೊತ್ತೆ? . . . ಹೋಗಲಿ, ಏನು ಮಾಡುತ್ತಿದ್ದೆ ಎಂಬುದನ್ನು ಊಹಿಸಿ ಕಾಗದ ಬರೆ.

ನಿನ್ನ ಒಲವಿನ ಪತಿ.

೪

ವಿಶಾಲಾಕ್ಷಿ,

ಎರಡು ಸಾಲಿನ ಒಂದು ಕಾಗದಕ್ಕೆ ಒಂದಾಣೆ ಸ್ಟಾಂಪಿನ ಖರ್ಚೆ? ಹೀಗೆ ಹೇಳಿದೆನೆಂದು ಸಿಟ್ಟುಮಾಡಿಕೊಂಡು ಕಾಗದ ಬರೆಯುವುದನ್ನು ಬಿಡಬೇಡ. ಶ್ರೀನಿವಾಸರ 'ಸಣ್ಣ ಕತೆಗಳು' ಎಂಬ ಪುಸ್ತಕವನ್ನೋದು. ಬಹಳ ಚೆನ್ನಾಗಿದೆ.

ಈಗ ಸ್ವಲ್ಪ ದಿನಗಳ ಹಿಂದೆ, ಎರಡು ದಿನಗಳ ಮಟ್ಟಿಗೆ ಬೆಂಗಳೂರಿಗೆ ಹೋಗಿದ್ದೆ. ಅಲ್ಲಿ ನಮ್ಮ ದೂರದ ನಂಟರೊಬ್ಬರ ಮನೆಯಲ್ಲಿಳಿದಿದ್ದೆ. ಅವರ ಮನೆಯ ವಿಷಯವಾಗಿ ನಿನಗೆ ಸ್ವಲ್ಪ ಬರೆಯಬೇಕೆಂದು ತೋರುತ್ತದೆ.

ಮನೆಯ ಯಜಮಾನರು ಐಶ್ವರ್ಯವಂತರು. ಮೇಲಾಗಿ ವ್ಯಾಪಾರ ಮಾಡುವವರು. ಹಣಕ್ಕೇನೂ ಕೊರತೆಯಿಲ್ಲ. ಮನೆಯಲ್ಲಿ ಚಿಕ್ಕ ಸಂಸಾರ, ಚೆಲುವೆಯಾದ ಹೆಂಡತಿ, ಮುದ್ದಾದ ಮಕ್ಕಳು. ಅಡಿಗೆ ಕೆಲಸ ಮಾಡಲು ದೂರ ಸಂಬಂಧದ ಒಬ್ಬ ಮಡಿ ಹೆಂಗಸಿದ್ದಾಳೆ. ಸಂಸಾರದಲ್ಲಿ ಸಂತೋಷ ತುಳುಕಾಡಲು ಬೇಕಾದ ಸಾಧನಗಳೆಲ್ಲವೂ ಇವೆ.

ಆದರೆ ಹೆಂಡತಿ ಮಕ್ಕಳು ಯಜಮಾನನನ್ನು "ರಾಯರು" ಎಂದು ಕರೆಯುತ್ತಾರೆ. ರಾಯರು ಠೀವಿಯಾಗಿದ್ದಾರೆ. ಹೆಚ್ಚಿಗೆ ಮಾತನಾಡುವುದಿಲ್ಲ. ಮನೆಯವರು ಅವರನ್ನು ದೇವಾಂಶ ಸಂಭೂತರೆಂದು ತಿಳಿದಿರುವಂತೆ ಕಾಣುತ್ತದೆ. ರಾಯರು ಆ ಸ್ಥಾನಕ್ಕೆ ತಕ್ಕಂತೆ ವರ್ತಿಸುತ್ತಾರೆ. ರಾಯರು ಸ್ನಾನಮಾಡುವಾಗ ಬಚ್ಚಲ ಮನೆಯಲ್ಲಿ ಯಾರೂ ಇರಕೂಡದು. ಆಳು

ನೀರು ತೋಡಿ, ಟವಲಿಟ್ಟು ಸಿದ್ಧಮಾಡಿರಬೇಕು. ರಾಯರು ಸ್ನಾನ ಮುಗಿಸಿದ ಮೇಲೆ, ರೂಮಿಗೆ ಕಾಫಿಯನ್ನು ಅವರ ಹೆಂಡತಿ ತರುತ್ತಾರೆ. ಬಹುಶಃ ಸಕ್ಕರೆ ಇಲ್ಲದಿದ್ದರೂ, ಡಿಕಾಕ್ಷನ್ ಹೆಚ್ಚಾಗಿದ್ದರೂ ಮಾತನಾಡದೆ ಒಂದು ಬಾರಿ ಹೆಂಡತಿ ಕಡೆ ನೋಡಿ, ತಮ್ಮಲ್ಲಿ ತಾವೇ "ಹುಂ" ಎಂದುಕೊಂಡು ಕಾಫಿ ಕುಡಿದುಬಿಡುತ್ತಾರೆ. ಅದರಿಂದ ಅವರ ಹೆಂಡತಿಯು ಏನೋ ಹೆಚ್ಚು ಕಡಮೆಯಾಗಿತ್ತೆಂದು ಊಹಿಸಿಕೊಳ್ಳಬೇಕು. ಅನಂತರ ಅಂಗಡಿಗೆ ಹೋಗಿ ಮಧ್ಯಾಹ್ನ ಒಂದು ಘಂಟೆಗೆ ಊಟಕ್ಕೆ ಮನೆಗೆ ಬರುವರು. ಮಕ್ಕಳ ಊಟ ಮುಗಿದು ರಾಯರ ಮಣೆ ಎಲೆ ಮಾತ್ರ ಇರುತ್ತವೆ. ಮಾತಿಲ್ಲದೆ ಗಂಭೀರವಾಗಿ ಊಟಮಾಡಿ ರಾಯರು ಮತ್ತೆ ಅಂಗಡಿಗೆ ದಯಮಾಡಿಸುತ್ತಾರೆ. ಮಧ್ಯಾಹ್ನ ಯಾರೊಡನೆಯಾದರೂ ಅಂಗಡಿಗೇ ತಿಂಡಿ ಹೋಗುತ್ತದೆ. ರಾತ್ರಿ ಮನೆಗೆ ಬರುವುದು ಒಂಬತ್ತು ಘಂಟೆ. ಮಕ್ಕಳೆಲ್ಲ ರಾಯರು ಬಂದಾಗ ಎಲ್ಲೋ ಅಡಗಿಬಿಡುತ್ತವೆ. ಸದ್ದೇ ಇಲ್ಲ. ಮನೆಯವರು ಮಾತನಾಡಬೇಕಾದರೆ ಪಿಸುಮಾತು. ರಾಯರು ತಮ್ಮ ಹೆಂಡತಿಯೊಡನೆಯಾದರೂ ಒಟ್ಟಿಗೆ ಮೂರು ಮಾತನಾಡುವರೋ ಇಲ್ಲವೋ ಕಾಣೆ.

ನಾನು ಈ ಸಂಸಾರಚಿತ್ರವನ್ನು ನೋಡಿ ಆಶ್ಚರ್ಯಪಟ್ಟೆ. ಸಂಸಾರವು ಇಷ್ಟು ಮಾತ್ರಕ್ಕಾಗಿಯೆ? ಗಂಡಸು ದುಡಿಯುವುದು, ಹೆಂಗಸು ಹಡೆಯುವುದು; ಹೆಂಗಸರು ಮಕ್ಕಳು ಯಜಮಾನನಿಗೆ ಕೃತಜ್ಞತೆ ತೋರಿಸಲೋಸುಗ ದೂರದಲ್ಲಿದ್ದು ಗೌರವಿಸುವುದು; ಇಷ್ಟಕ್ಕೆ ಸಂಸಾರ ಬೇಕೆ? ಸಂಸಾರವಿಲ್ಲದೆಯೇ ಈ ತೆರನ ಜೀವನ ನಡೆಸಲಾಗುವುದಿಲ್ಲವೆ?

ಆಗ ನಾನು ಅಂದುಕೊಂಡೆ. ನಮ್ಮ ಸಂಸಾರವು ಈ ರೀತಿಯದಾಗಿರಕೂಡದು; ಖಂಡಿತ ಕೂಡದು. ಹೆಂಡತಿ ಮಕ್ಕಳು ಎಂದರೆ ವಿಶ್ವಾಸ ಪ್ರೀತಿಗಳು ಬೇಡವೆ? ಅವರನ್ನು ದೇವರು ನಮಗೆ ಒದಗಿಸಿಕೊಟ್ಟಿರುವುದು ಒಬ್ಬರೊಡನೊಬ್ಬರು ಸಂತೋಷದಿಂದ ಕಲೆತು ಜೀವನವನ್ನು ಸುಖವಾಗಿ ಸಾಗಿಸುವುದಕ್ಕಲ್ಲವೆ? ಹೆಂಡತಿ ಮಕ್ಕಳಿಗಲ್ಲದೆ ನಮ್ಮ ಸುಖವನ್ನು, ನಮ್ಮ ದುಃಖವನ್ನು, ನಮ್ಮ ಗುಟ್ಟನ್ನು, ಮತ್ತಾರಿಗೆ ಹೇಳಿಕೊಳ್ಳುವುದು? ಇನ್ನು ಮತ್ತಾರೊಡನೆ ಸಲಿಗೆಯಿಂದಿರುವುದು? ಸಂಸಾರದಲ್ಲಿ ಸೇರಿದ ಪ್ರತಿಯೊಂದು ಜೀವವೂ ನಗುನಗುತ್ತಾ ಪ್ರೇಮದ ಬೆಳಕನ್ನು ಬೀರುತ್ತ

ನಲಿಯುತ್ತಿರಬೇಡವೆ ?

ಸಾಕು, ನಾನು ಹೆಚ್ಚಿಗೆ ಬರೆದರೆ ನಿನಗೆ ಬೇಜಾರಾಗಬಹುದು. ಅದಕ್ಕೋಸ್ಕರ ಇಲ್ಲಿಗೇ ನಿಲ್ಲಿಸಿದ್ದೇನೆ. ಈ ವಿಷಯದಲ್ಲಿ ನಿನ್ನ ಮನಸ್ಸಿನಲ್ಲಿರುವುದನ್ನೂ ಬರೆ. ನನ್ನ ಕಾಗದದ ವಿಷಯದಲ್ಲಿ ನಿನಗೆ ತೋರಿದುದನ್ನು ಬರೆ. ಹಾಗೆ ಬರೆದರೆ ನನಗೆ ಕೋಪವಿಲ್ಲ. ನನಗೆ ಯಾವುದಾದರೂ ಹೊಸ ವಿಷಯ ತಿಳಿದರೆ ಹೇಗೆ ಬರೆಯುತ್ತೇನೋ ಹಾಗೆ ನೀನೂ ಬರೆಯಬೇಕು.

ನಿನ್ನನ್ನು ಮನಮುಟ್ಟಿ ಪ್ರೀತಿಸುವ
ನಿನ್ನವ.

೫

ವಿಶಾಲೀ—

ನೀನು ಬರೆದಿರುವ ಕಾಗದದಿಂದ ನೀನು ಕತೆಯನ್ನು ಓದಿದ್ದೀಯೆಂದು ಗೊತ್ತಾಗುತ್ತದೆ. ರತ್ನಳಂತೆ ನಾನು ಎಂದು ಮಾತ್ರ ತಿಳಿದುಕೊಳ್ಳಬೇಡಿ ಎಂದು ಬರೆದಿದ್ದೀಯೆ—ನೋಡೋಣ, ನಾನು ದೀಪಾವಳಿಗೆ ಬಂದಾಗ ಹೇಗಿರುತ್ತೀಯೆ ಎಂದು.

ನೀನು ಇಷ್ಟು ಸಲಿಗೆಯಾಗಿ ನನ್ನನ್ನು ಹಾಸ್ಯಮಾಡುವೆಯೆಂದು ತಿಳಿದುಕೊಂಡಿರಲಿಲ್ಲ. ಏನು ! ನಿಮ್ಮ ಪಕ್ಕದ ಮನೆಯಲ್ಲಿರುವ ನಿಮ್ಮ ಶಾರದಮ್ಮನ ಗಂಡನಂತೆ ಎಂದು ಭಾವಿಸಿಕೊಂಡು ನೀನು ಕಾಗದ ಬರೆದಿರುವ ಹಾಗೆ ತೋರುತ್ತದೆ. ಯಾವುದೂ ಮಿತಿಮೀರಿ ಇರಬಾರದು. ಎಷ್ಟಿರಬೇಕೊ, ಹೇಗಿರಬೇಕೊ, ಅಷ್ಟಿದ್ದರೆ ಹಾಗಿದ್ದರೆ ಚೆನ್ನ. ಇಲ್ಲದಿದ್ದರೆ ಪ್ರೇಮವು ಗಾಂಭೀರ್ಯವನ್ನು ಕಳೆದುಕೊಂಡು ಹುಚ್ಚು ಎನ್ನಿಸಿಕೊಳ್ಳುತ್ತದೆ. ನೀನು ಬರೆದಿರುವ ಮಾತುಗಳು ಆಗಾಗ ಜ್ಞಾಪಕಕ್ಕೆ ಬಂದು ನನ್ನಷ್ಟಕ್ಕೆ ನಾನೇ ನಗುವಂತೆ ಮಾಡುತ್ತವೆ.

"ನಮ್ಮ ಮನೆಯ ಪಕ್ಕದಲ್ಲಿ ಶಾರದಮ್ಮನವರು ಅಂತ ಒಬ್ಬರಿದಾರೆ—ಅವರ ಯಜಮಾನರಿಗೆ ಕಛೇರಿಯಲ್ಲಿ ಕೆಲಸವಿದೆ. ಗಂಡಹೆಂಡಿರು ಇಬ್ಬರೇ ಇದ್ದಾರೆ. ಶಾರದಮ್ಮನವರು ನಮ್ಮ ಮನೆಗೆ ಆ ತಿಂಡಿಮಾಡುವುದು ಹೇಗೆ? ಈ ಅಡಿಗೆ ಮಾಡುವುದು ಹೇಗೆ ? ಎಂದು ಕೇಳುವುದಕ್ಕೆ ಆಗಾಗ ಬರುತ್ತಾರೆ. ನನಗೆ ಚೆನ್ನಾಗಿ ಗೊತ್ತು, ಅವರ ಯಜಮಾನರು

ಕಛೇರಿಗೆ ಹೋಗುವಾಗ ಐವತ್ತುಸಲ, ' ಶಾರದಾ, ಹೋಗಲೇನೆ? ಹೋಗಲೇನೆ? ' ಎಂದು ಕೇಳಿ, ನಮ್ಮ ಅಣ್ಣ ಅಮ್ಮ ಬಯ್ಯುತ್ತಲೂ ಗೋಳಾಡಿಕೊಂಡು ಸ್ಕೂಲಿಗೆ ಹೋಗುವ ನಮ್ಮ ರಾಮು ಹಾಗೆ ಮುಖ ಸಪ್ಪಗೆ ಮಾಡಿಕೊಂಡು ಕಛೇರಿಗೆ ಹೋಗುತ್ತಾರೆ. ಕಛೇರಿ ಮುಗಿದ ಒಂದು ಘಳಿಗೆ ಎಲ್ಲೂ ನಿಲ್ಲದೆ ಮನೆಗೆ ಬಂದುಬಿಡುತ್ತಾರೆ. ಆ ಮೇಲೆ ಒಂದು ಅರಘಳಿಗೆಯೂ ಮನೆಬಿಟ್ಟು ಈಚೆಗೆ ಹೊರಡುವುದಿಲ್ಲ."

ನಾನು ಹೀಗೆ ಆಗಬಹುದೆಂದು ನೀನು ಊಹಿಸಿದ್ದೀಯಲ್ಲವೆ? ಹೀಗೆ ಆದರೆ ನಿಮ್ಮ ಶಾರದಮ್ಮನ ಹಾಗೆ ದರ್ಬಾರು ನಡಸುತ್ತೀಯಲ್ಲವೆ? ಇರಲಿ, ದೇವರಿದಾನೆ. ನೋಡೋಣ.

ನಿನ್ನ ಒಲವಿನ ಪತಿ.

೬

ಪ್ರಿಯೆ,

ನೀನು ಬರೆದುದು ಗೊತ್ತಾಯಿತು.-ನಿನ್ನ ಗೆಳತಿಗೆ ಆಕೆಯ ಗಂಡನು ಕಾಗದ ಬರೆಯುವಾಗ Mrs. Sarojamma Sitaramaiah ಎಂದು ಬರೆಯುತ್ತಾರೆ. ನೀವೇಕೆ ನನಗೂ ಹಾಗೆ ಬರೆಯುಬಾರದು? ಅವಳು ನನ್ನನ್ನು ನಿನ್ನ ಗಂಡ ಹಳೆಯ ಕಾಲದವ ಎಂದು ಹಾಸ್ಯಮಾಡಿದಳು.

ಇದರ ವಿಷಯವಾಗಿ ನಡೆದ ಸಂಗತಿಯೊಂದನ್ನು ಹೇಳಬೇಕೆನ್ನಿಸುತ್ತದೆ. ನನ್ನ ಸ್ನೇಹಿತನೊಬ್ಬ ತನ್ನ ಹೆಂಡತಿಗೆ ಕಾಗದ ಬರೆದ. ಅಡ್ರೆಸ್ಸನ್ನು ಇದೇ ರೀತಿಯಲ್ಲಿ ಬರೆದ. ಅದು ಅವನ ಹೆಂಡತಿಯ ಊರಿಗೆ ಹೋಯಿತು. ಅಲ್ಲಿಯ ಅಂಚೆಯವನಿಗೆ ಹೆಚ್ಚಿಗೆ ಇಂಗ್ಲೀಷು ಬರುತ್ತಿರಲಿಲ್ಲ. ಹೆಸರಿನ ಕೊನೆಯಲ್ಲಿದ್ದ ಸ್ನೇಹಿತನ ಹೆಸರನ್ನು ಓದಿಕೊಂಡು ಅವರ ಮನೆಗೆ ಹೋಗಿ ಇವರಿದಾರೆಯೇ ಎಂದು ಕೇಳಿದನು. ' ಅವರಿಲ್ಲಿಲ್ಲ ' ಎಂದು ಹೇಳಿ ಅವನಿದ್ದ ಊರಿನ ಹೆಸರನ್ನು ತಿಳಿಸಿದರು. ಅಂಚೆಯವನು ಅದನ್ನು ವ್ಯತ್ಯಾಸ ಮಾಡಿ ಹಿಂದಕ್ಕೆ ಕಳುಹಿಸಿದನು. ಮೇಲಿನ ಅಡ್ರೆಸ್ಸು ಕೂಡ ನೋಡದೆ ನನ್ನ ಸ್ನೇಹಿತನು ಆತುರದಿಂದ ತನ್ನ ಹೆಂಡತಿಯಿಂದ ಬಂದ ಕಾಗದವೆಂದು ತಿಳಿದುಕೊಂಡು, ಅದನ್ನು ಒಡೆದು ನೋಡುತ್ತಾನೆ—ತಾನು ಬರೆದದ್ದೇ ತನಗೇ ಬಂದಿದೆ! ಕೊನೆಗೆ ಒಂದುಸಲ ಸಂಕಟದಿಂದ ತನ್ನಲ್ಲಿ ತಾನೇ

ನಕ್ಕನಂತೆ. ಅಂದಿನಿಂದ ಆತನು ಆ ವಿಧವಾಗಿ ಅಡ್ರೆಸ್ಸು ಬರೆಯುವುದನ್ನು ಬಿಟ್ಟುಬಿಟ್ಟನಂತೆ.

ಇದೇ ಸಮಯದಲ್ಲಿ ನನಗೆ ಇನ್ನೊಂದು ವಿಷಯ ಜ್ಞಾಪಕಕ್ಕೆ ಬಂದಿತು. ನಿಮ್ಮ ಅಣ್ಣ ಮೈಸೂರಿನಿಂದ ನನಗೊಂದು ಕಾಗದ ಬರೆದಿದ್ದರು. ಅದು ಇಂಗ್ಲೀಷಿನಲ್ಲಿತ್ತು. ನಾನು ಅವರಿಗೆ ಕನ್ನಡದಲ್ಲಿ ಉತ್ತರ ಬರೆದೆ. ಅವರು ಮತ್ತೆ ಕಾಗದ ಬರೆಯಲಿಲ್ಲ. ನೀನೇನಾದರೂ ಕಾಗದ ಬರೆದರೆ ದಯವಿಟ್ಟು ಕ್ಷಮಿಸಬೇಕೆಂದು ಕೇಳಿಕೊಂಡೆನೆಂದು ಬರೆ.

ಇಂತಹ ವಿಷಯಗಳು ಮತ್ತೆಷ್ಟೋ ನಮ್ಮಲ್ಲಿ ಆಚರಣೆಗೆ ಬಂದಿವೆ. ಇದು ಮತ್ತೊಬ್ಬರನ್ನು ನೋಡಿ ಕಲಿತುಕೊಂಡಿದ್ದು. ನಾವು ಇನ್ನೊಬ್ಬರಿಂದ ಏನಾದರೂ ಕಲಿತುಕೊಳ್ಳುವಾಗ ಅದು ನಮಗೆ ಬೇಕೇ, ಅದರಿಂದ ಪ್ರಯೋಜನವುಂಟೇ, ಎಂದು ಯೋಚಿಸಬೇಕು. ಅದಕ್ಕೆ ನಮ್ಮಲ್ಲಿ ಒಂದು ಗಾದೆಯಿರುವುದು: "ಸರಿಮನೆಯಾಕೆ ಸರಿಗೆ ಹಾಕಿಕೊಂಡರೆ, ನೆರೆಮನೆಯಾಕೆ ನೇಣು ಹಾಕಿಕೊಂಡಳು" ಎಂದು.

ಇರಲಿ; ನೀನು ಕಸೂತಿ ಹಾಕುತ್ತಿರುವುದು ಸಂತೋಷದ ವಿಷಯ. ಕಸೂತಿ ಹಾಕಿದುದು ಪ್ರಯೋಜನಕ್ಕೆ ಬರುವಂತಿರಬೇಕು. ನಮ್ಮ ನೆರೆಮನೆಯವರೊಬ್ಬರು ಕಸೂತಿ ಹಾಕುತ್ತಲೇ ಇರುವರು. ಪೂರ್ತಿಯಾದವುಗಳನ್ನೆಲ್ಲ ಮಡಿಸಿ ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟಿದ್ದಾರಂತೆ. ಹಾಗಾಗುವುದಕ್ಕಿಂತ ದುಡ್ಡು ಖರ್ಚುಮಾಡದೆ ಕಸೂತಿ ಹಾಕದೆ ಸುಮ್ಮನಿರುವುದೇ ಲೇಸು. ಮೇಜದಮೇಲೆ ಕಾಲುಮಣೆಗಳಮೇಲೆ ಹಾಸಬಹುದಾದ ದೊಡ್ಡ ಚೌಕಗಳಿದ್ದರೆ ಒಳ್ಳೆಯದು. ದಿಂಬುಗಳ ಚೀಲಗಳಿಗೆ ಕಸೂತಿ ಹಾಕಿದರೂ ಪರವಾಗಿಲ್ಲ. ಕೈಚೌಕಗಳಿಗೆ (handkerchief) ಮಿತವಾದ ಕಸೂತಿಯಿದ್ದರೆ ಬಲು ಸಂತೋಷ.

ಇದಕ್ಕೂ ಮುಂಚೆ ನಾನು ಒಂದು ವಿಷಯವನ್ನು ಕೇಳಬೇಕೆಂದಿದ್ದೇನೆ, ನಿನಗೆ ಅಡಿಗೆಮಾಡಲು ಬರುತ್ತದೆಯೋ? ಬರದಿದ್ದರೆ ಮೊದಲು ಅದನ್ನು ಕಲಿತುಕೊ. ನಾವಿಬ್ಬರೂ ಸಂಸಾರವನ್ನು ಪ್ರಾರಂಭಿಸಬೇಕಾದಾಗ ಕಸೂತಿ ಚೌಕಗಳಿಲ್ಲದಿದ್ದರೂ ಇರಬಹುದು, ಆದರೆ ಊಟವಿಲ್ಲದೆ ಇರಲು ಆಗುವುದಿಲ್ಲ. ಕುಡಿಯುವುದಕ್ಕೆ ಕಾಫಿಯೇ ಇಲ್ಲದಿರುವಾಗ

ಬಾಯಿ ಒರಸಿಕೊಳ್ಳಲು ಸಿಂಗರಿಸಿದ ಚೌಕ ಏಕೆ. ಮನೆ ಚೆನ್ನಾಗಿ ಕಾಣು ವಂತೆ, ನೋಡಿದರೆ ಸಂತೋಷವಾಗುವಂತೆ, ಇರಬೇಕಾದುದು ನ್ಯಾಯ; ಆದರೆ ಮೊದಲು ಯಾವುದು ಬೇಕೆಂಬುದನ್ನು ಯೋಚಿಸಿನೋಡು.

ಕಸೂತಿ ನಿನಗೆ ಬೇಕಿಲ್ಲವೆಂದಲ್ಲ ನನ್ನ ಅರ್ಥ.. ಅದು ಎರಡನೆ ಯದು ಮತ್ತು ಪ್ರಯೋಜನವಾಗುವಂತಿರಬೇಕು.

ನಿನ್ನ ಮನದನ್ನ.

೭

ಎನ್ನರಸಿ,

ಸಿಟ್ಟುಮಾಡಿಕೊಳ್ಳದೆ ನಾನು ಹೇಳಿದುದನ್ನು ತಿಳಿದುಕೊಂಡುದಕ್ಕೆ ಸಂತೋಷವಾಯಿತು. ಹುಡುಗಿಯರು ಅಂದರೆ ಹಾಗಿರಬೇಕು. ನಾನು ಅಲ್ಲಿಗೆ ಬಂದಾಗ ನೀನು ಕಸೂತಿ ಹಾಕಿದ ಚೌಕಗಳನ್ನು ನನಗೆ ಕೊಡ ಬೇಕು.

ನಿನ್ನ ಅಕ್ಷರ ಏಕೆ ಈ ಬಾರಿ ಅಷ್ಟು ಚೆನ್ನಾಗಿಲ್ಲ? ಈ ಕಾಗದವನ್ನು ಬರೆದವರೇ ಬೇರೆ ಎನ್ನುವಷ್ಟು ಕೆಟ್ಟುಹೋಗಿದೆ? ನಿಮ್ಮ ಎದುರುಮನೆಯ ಸುಂದರಮ್ಮನವರ ಮಗು ಬಹಳ ಚೆನ್ನಾಗಿದೆ, ಮುದ್ದಾಗಿದೆ, ಎಂದು ಬರೆದಿದ್ದೀಯೆ. ಮಕ್ಕಳೇ ಒಂದು ಆನಂದ. ಅದಕ್ಕೇ ಮಕ್ಕಳಿದ್ದರೆ ಮನೆ ಎಂದು ಹೇಳುವುದು.

ಆದರೆ ನಮ್ಮ ಮನೆಯ ಬೀದಿಯ ಕೊನೆಯಲ್ಲಿ ಒಬ್ಬರು ಗ.ಮಾಸ್ತ ರಿದ್ದಾರೆ. ಅವರಿಗೆ ಹತ್ತೋ ಹನ್ನೆರಡೋ ಮಕ್ಕಳಿವೆ. ಇನ್ನೊಂದು ಐದಾರು ಮಕ್ಕಳಾಗಬಹುದು. ಮಕ್ಕಳೆಲ್ಲಾ ನೋಡುವುದಕ್ಕೆ ಚೆನ್ನಾಗಿವೆ. ಆದರೆ ಒಂದಕ್ಕೂ ಸರಿಯಾಗಿ ಬಟ್ಟೆ ಇಲ್ಲ. ಬೀದಿಯಲ್ಲಿ ಮಣ್ಣಿನ ಲ್ಲಾಡುತ್ತಾ ಇರುತ್ತವೆ. ಹೀಗೆ ಮಕ್ಕಳನ್ನು ನೋಡಿಕೊಳ್ಳುವುದಾದರೆ ಮಕ್ಕಳು ಆನಂದವಲ್ಲ, ದುಃಖ.

ಹೆಂಗಸರು, ಮಕ್ಕಳನ್ನು ಹೇಗೆ ಶುಚಿಯಾಗಿಡಬೇಕು. ಹೇಗೆ ಬಟ್ಟೆ ಹಾಕಬೇಕು. ಹೇಗೆ ಅವುಗಳ ಆರೋಗ್ಯವನ್ನು ನೋಡಿಕೊಳ್ಳಬೇಕು, ಎಂಬುದನ್ನು ಕಲಿತುಕೊಳ್ಳಬೇಕು. ಇದು ಗೊತ್ತಿಲ್ಲದಿದ್ದರೆ ಆಕೆ ಹೆಂಗಸೇ ಅಲ್ಲವೆಂದು ಹೇಳಬಹುದು. ಈ ವಿಷಯಕ್ಕೆ ನಮ್ಮ ಹೆಂಗಸರು ಹೆಚ್ಚಿಗೆ

ಗಮನಕೊಡುತ್ತಿಲ್ಲ. ಮುಂದಾದರೂ ಕೊಡಬೇಕು.

ಮನದನ್ನ ಎಂದರೇನು ಎಂದು ಕೇಳಿದ್ದೀಯೆ. ಅದು ಹಳಗನ್ನಡದ ಒಂದು ಶಬ್ದ. ಹಾಗಂದರೆ ನಿನ್ನ ಪ್ರಿಯ ಎಂದರ್ಥ.

ನಿನ್ನ ನಲ್ಲ.

೮

ಪ್ರೀತಿಯ ವಿಶಾಲಾಕ್ಷಿ,

ನೀನೆಲ್ಲೋ ತಿಳಿಯದ ಹುಡುಗಿ, ನಿನಗೇನೂ ತಿಳಿಯುವುದಿಲ್ಲವೆಂದು ಕೊಂಡಿದ್ದೆ; ನಿನಗೆ ಹಾಸ್ಯಮಾಡಿ ನಗಿಸುವುದಕ್ಕೆ ಬರುವುದಿಲ್ಲವೆಂದು ಕೊಂಡಿದ್ದೆ. ಅದು ತಪ್ಪು ಅಭಿಪ್ರಾಯವಿರುವ ಹಾಗೆ ಕಾಣಬರುತ್ತದೆ.

ಕಾಗದದಲ್ಲಿ ಅಕ್ಷರಗಳು ಚೆನ್ನಾಗಿಲ್ಲವೆಂದು ಬರೆದುದಕ್ಕೆ ನೀನು ಬರೆದಿರುವ ಉತ್ತರ ಚೆನ್ನಾಗಿದೆ. "ಮೊದಲು ಮುದ್ದಾದ ಅಕ್ಷರಗಳನ್ನು ಬರೆಯುತ್ತಿದ್ದ ಕೈ ಈಗ ಮುಸುರೆ ತಿಕ್ಕಿ ಅಡಿಗೆಮಾಡುತ್ತಿದೆ.'' ನೀನು ಅಡಿಗೆಮಾಡುತ್ತಿರುವುದು ಸಂತೋಷ. ನಾನು ಅಲ್ಲಿಗೆ ಬಂದಾಗ ನಿನಗೆ ತಿಂಡಿಗಳನ್ನು ಚೆನ್ನಾಗಿ ಮಾಡಲು ಬರುವುದೋ ಇಲ್ಲವೋ ಪರೀಕ್ಷಿಸುತ್ತೇನೆ. ಉಳಿದ ಮನೆಗೆಲಸಗಳನ್ನೂ ಮಾಡಲು ಕಲಿತಿರಬೇಕು. ಇಲ್ಲದಿದ್ದರೆ ನಮ್ಮ ಎದುರುಮನೆಯ ಡಾಕ್ಟರ ಹೆಂಡತಿಯಂತಾಗುತ್ತೀಯೆ.

ನಿನ್ನವ.

೯

ನಲ್ಲೆ,

ನನಗೆ ಡಾಕ್ಟರ ಹೆಂಡತಿ ಗೊತ್ತಿರುವುದರಿಂದ ನಿನಗೂ ಗೊತ್ತಿರಬೇಕೆಂದು ಬರೆದೆ. ನಿನಗೆ ಆಕೆ ಗೊತ್ತಿಲ್ಲವೆಂಬುದು ಮನಸ್ಸಿಗೆ ತೋರಿ ಬರಲಿಲ್ಲ.

ನಮ್ಮ ಬೀದಿಯಲ್ಲಿ ಒಬ್ಬರು ಡಾಕ್ಟರಿದ್ದಾರೆ. ಅವರ ಹೆಂಡತಿ ಬಡವರ ಮನೆ ಹುಡುಗಿ. ಆದರೆ ಈಗ ಡಾಕ್ಟರ ಹೆಂಡತಿಯೆಂದು ಜಂಭ. ಕೆಲಸ ಬರದೋ, ಇಲ್ಲ ನಟನೆಯೋ ಕಾಣೆ; ಅಂತು ಕೆಲಸ ಮಾಡುವುದಿಲ್ಲ. ಒಂದು ದಿನ ಸಿಹಿನೀರು ತಂದು ಕೊಡುವಾಕೆ ಬರಲಿಲ್ಲ. ಅವತ್ತೆಲ್ಲಾ ಸೀನೀರೇ ಇಲ್ಲ. ಪಕ್ಕದ ಮನೆಯವರನ್ನು ಕೇಳಿ ಸ್ವಲ್ಪ ನೀರು ತಂದರು.

ಇದು ಎಷ್ಟು ನಾಚಿಕೆಗೇಡಿನ ಪ್ರಸಂಗ! ನೀರು ಕೊಟ್ಟ ಮನೆಯವರು ಮನಸ್ಸಿನಲ್ಲೇನೆಂದುಕೊಂಡಿರಬಹುದು! ಹಾಗೆಯೇ ಆಕೆಗೆ ಅಕ್ಕಿ ಮಾಡಿಕೊಳ್ಳಲು (ಮೊರದಿಂದ ಕೇರಿ ಕಲ್ಲು ನುಚ್ಚು ಬೇರೆಮಾಡಿ ಸರಿಮಾಡಿಕೊಳ್ಳಲು) ಬಾರದು. ಬಹುಶಃ ಒಕ್ಕಲಗಿತ್ತಿಯು ಬರದಿದ್ದ ದಿನ ಕಲ್ಲು ನುಚ್ಚು ತೆಗೆಯದಿದ್ದ ಅಕ್ಕಿಯ ಅನ್ನವೇ ಎಂದು ಕಾಣುತ್ತದೆ. ನಾವೇ ಕೆಲಸವನ್ನು ಕಲಿತುಕೊಂಡಿದ್ದು, ನಮ್ಮ ಕೆಲಸಮಾಡಿಕೊಳ್ಳಲು ನಮಗೆ ಅವಮಾನವಿಲ್ಲವೆಂದು ತಿಳಿದುಕೊಂಡಿದ್ದರೆ, ಇದೆಲ್ಲ ಕಷ್ಟವಿರುವುದೇ ಇಲ್ಲ. ನಮಗೆ ಶಕ್ತಿಯಿದ್ದರೆ ಆಳುಗಳಿಂದ ಕೆಲಸ ಮಾಡಿಸಿಕೊಳ್ಳೋಣ. ಆದರೆ ಆಳುಗಳಿಲ್ಲದಿದ್ದರೆ ತೊಂದರೆಯಾಗಬಾರದು. ಅಲ್ಲದೆ, ಈಗ ಕಾಲ ಬದಲಾಯಿಸಿದೆ. ಸಂಪಾದನೆ ಕಡಿಮೆ. ಆದುದರಿಂದ ಖರ್ಚು ಕಡಿಮೆ ಮಾಡಿಕೊಳ್ಳುವುದನ್ನು ಕಲಿತುಕೊಳ್ಳಬೇಕು.

ಕಳೆದ ಕಾಗದಕ್ಕಿಂತ ಹಿಂದಿನ ಕಾಗದದಲ್ಲಿ ನಾನು ಎನ್ನರಸಿ ಎಂದು ಕಾಗದವನ್ನು ಮೊದಲು ಮಾಡಿದುದಕ್ಕೆ ನೀನು ಬರೆದಿರುವುದು ಚೆನ್ನಾಗಿದೆ. "ನಾನು 'ಚೆನ್ನರಸ' ಎಂದು ಬರೆಯಬೇಕೆಂದು ಮನಸ್ಸಿನಲ್ಲಿ ಮಾಡಿಕೊಂಡೆ" ಅಂತ ಬರೆದಿದ್ದೀಯೆ; ಆದರೆ ಬರೆದಿದ್ದರೆ ಚೆನ್ನಾಗಿತ್ತು. ಮದುವೆಯಲ್ಲಿ ಕೇಳಿ ಕೇಳಿ ಬೇಜಾರಾಗಿದೆಯೇನು? ಇಲ್ಲ, ಅವೆಲ್ಲ ಜ್ಞಾಪಿಸಿಕೊಂಡರೆ ನಾನು ಹತ್ತಿರದಲ್ಲೇ ಇದ್ದಂತಾಗಿ ಮುಖವೆಲ್ಲ ಕೆಂಪೇರುವುದೋ? ನಾನು ಇಲ್ಲಿ ಬಹಳ ದೂರದಲ್ಲಿದ್ದೇನೆ. ಮುಖಕ್ಕೆ ಅರಿಸಿನ ಹಚ್ಚುವಂತಿಲ್ಲ, ಭಯಪಡಬೇಡ.

ನಿನ್ನ ಚೆನ್ನರಸ.

## ೧೦

ಮುತ್ತಿನ ಚೆಂಡೆ!

ಗೌರೀಹಬ್ಬದ ಸಂಭ್ರಮ ಎಂದು ಬರೆದಿದ್ದೀಯೆ. ಹೌದು, ಹೆಂಗಸರಿಗೆ ದೊಡ್ಡ ಹಬ್ಬ! ವರ್ಷವೋ ಆರು ತಿಂಗಳೋ ಪೆಟ್ಟಿಗೆಯಲ್ಲಿ ಬಿಗಿಯಾಗಿ ಕಟ್ಟಿಟ್ಟಿದ್ದ ಸೀರೆಗಳೆಲ್ಲ ಇವತ್ತು ಬಿಸಲಿಗೆ ಬಂದಿವೆ. ಚಿಕ್ಕ ಚಿಕ್ಕ ಹುಡುಗಿಯರೆಲ್ಲ ಸೀರೆ ಉಟ್ಟುಕೊಂಡು ಓಡಾಡುತ್ತಿದ್ದುದನ್ನು ಕಂಡೆ.

ನೀವು ಪ್ರೀತಿಯಿಂದ ಕಳುಹಿಸಿದ ಪಂಚೆ ಗಣೇಶ ಮೊದಲಾದವುಗಳ

ತಲಪಿದುವೆಂದು ನಿಮ್ಮ ಮನೆಯವರಿಗೆ ತಿಳಿಸು. ಹಬ್ಬಗಳೆಂದರೇನು? ಯೋಚನೆ ಮಾಡಿರುವೆಯಾ? ಸಂತೋಷದ ದಿನಗಳೆಂಬುವಷ್ಟು ತಿಳಿದಿರ ಬಹುದು. ನಮ್ಮಲ್ಲಿ ಎಷ್ಟು ಹಬ್ಬದ ದಿನಗಳು ಗೊತ್ತೆ? ಸುಮಾರು ಅರ್ಧ ಮುಕ್ಕಾಲು—ಅಂದರೆ ವರ್ಷವೆಲ್ಲ ಹಬ್ಬ; ಆದ್ದರಿಂದ ನಮ್ಮ ಜೀವನವನ್ನೇ ಒಂದು ಹಬ್ಬವೆಂದು ತಿಳಿದುಕೊಳ್ಳಬೇಕು. ನಗುನಗುತ್ತಾ ಕಾಲಕಳೆಯ ಬೇಕು. ಅವರವರ ಶಕ್ತಿಯಿದ್ದಂತೆ ಹಬ್ಬವನ್ನು ಮಾಡಬೇಕು. ನಮ್ಮಲ್ಲಿ ಹಬ್ಬವೆಂದರೆ ಹೆಂಗಸರು ಹಿಂದಿನ ದಿನವೆಲ್ಲ ಒಲೆಯ ಮುಂದೆ ಕುಳಿತು ಕೊಂಡು ಬೇಕುಬೇಕಾದ ತಿಂಡಿಗಳನ್ನೆಲ್ಲಾ ಮಾಡುವುದು, ಮಾರನೇ ದಿನ ಖಾಯಿಲೆ ಬೀಳುವುದು, ಮಿತಿಮೀರಿದ ಖರ್ಚು, ಇಷ್ಟೆ ಅರ್ಥವಾಗಿದೆ. ಹೆಚ್ಚು ತೊಂದರೆಪಟ್ಟುಕೊಳ್ಳದೆ ಸಂತೋಷವಾಗಿರುವ ಹಬ್ಬಗಳನ್ನು ಮಾಡು ವುದನ್ನು ಕಲಿತುಕೊಳ್ಳಬೇಕು. ಅಲ್ಲದೆ ಈ ಹಬ್ಬದ ದಿನಗಳಲ್ಲೆಲ್ಲಾ ನಾವು ಒಂದಲ್ಲೊಂದು ರೀತಿಯಲ್ಲಿ ದೇವರನ್ನು ಪೂಜಿಸುತ್ತೇವೆ. ದೇವರಿಗೆ ನಾವು ಸಂತೋಷಕಾಲದಲ್ಲಿ ಆಗಾಗ್ಗೆ ಭಕ್ತಿಯನ್ನು ತೋರಿಸುತ್ತಿರಬೇಕೆಂಬುದೇ ಅಭಿಪ್ರಾಯವೆಂದು ನನಗೆ ತೋರುತ್ತದೆ.

ಇಂದು ನನಗೆ ಬೇರೆ ಸ್ವಲ್ಪ ಕೆಲಸವಿರುವುದರಿಂದ ಇಲ್ಲಿಗೇ ನಿಲ್ಲಿಸಿ ದ್ದೇನೆ. ನನ್ನ ಕಾಗದಗಳನ್ನು ಓದಲು ನಿನಗೆ ಬೇಜಾರಿಲ್ಲವಷ್ಟೆ?

ನಿನ್ನ ಪ್ರೀತಿಯ—

೧೧

ಪ್ರಿಯೆ,

ಈ ಸಲದ ಕಾಗದವಂತೂ ಬಹಳ ಚೆನ್ನಾಗಿದೆ. ನನ್ನನ್ನು ಇಂತಹ ಸಮಯಗಳಲ್ಲಿ ಸ್ಮರಿಸಿಕೊಳ್ಳುವೆಯಲ್ಲಾ! ಅಷ್ಟೆ ಸಾಕು. "ಬೆಳಗ್ಗೆ ಎದ್ದು ಮನೆಯ ಹಿಂದುಗಡೆ ಇರುವ ಹಿತ್ತಲಿಗೆ ಹೋದೆ. ಅಲ್ಲಿ ಒಂದು ಗುಲಾಬಿ ಹೂ ಹೊಸದಾಗಿ ಆಗತಾನೆ ಅರಳುತ್ತಿತ್ತು. ಮಾಸಲು ಕೆಂಪು ಬಣ್ಣದ ರೇಕುಗಳ ಮೇಲೆ ಮಂಜಿನ ಹನಿಗಳು ಬಿದ್ದಿದ್ದುವು. ಅದನ್ನು ನೋಡಿ ದೊಡನೆ ನಿಮ್ಮ ಜ್ಞಾಪಕ ಬಂತು. ಅದನ್ನು ಕಿತ್ತುಕೊಂಡು ಬಂದು ನಿಮ್ಮ ಫೋಟೋದ ಮೇಲೆ ಇಟ್ಟೆ" ಎಂದು ಬರೆದಿದ್ದೀಯೆ. ಇವತ್ತು ಫೋಟೋ ನನಗಿಂತ ಪುಣ್ಯಶಾಲಿ.

"ಓದಿದವರೆಂದು ಏನೇನೋ ಬೇರೆ ಬೇರೆ ಮಾತುಗಳನ್ನು ಕಾಗದದ ಮೊದಲಿನಲ್ಲಿ ಬರೆಯುತ್ತೀರಿ." "ಮುದ್ದಿನ ವಿಶಾಲಿ" ಎಂದು ಪಕ್ಕದಲ್ಲಿ ಒಂದು ಬಾರಿ ಸಲಿಗೆಯಿಂದ ಕೂರಿಸಿಕೊಳ್ಳುವಿರಿ; ಇನ್ನೊಂದುಸಲ "ಎನ್ನರಸಿ" ಎಂದು ಸಿಂಹಾಸನದ ಮೇಲೆ ಕೂರಿಸುತ್ತೀರಿ. "ಚಿನ್ನರಸಿ" ಎಂದು ಹೊಗಳುತ್ತೀರಿ; ಮತ್ತೆ "ಮುತ್ತಿನ ಚೆಂಡೆ" ಎಂದು ಜೀವವಿಲ್ಲದ ಚೆಂಡುಮಾಡುತ್ತೀರಿ. ಸದ್ಯ ದಮ್ಮಯ್ಯ ಎನ್ನುತ್ತೇನೆ—ಮುಂದಿನ ಕಾಗದದಲ್ಲಿ 'ಮಾವನಮಗಳೇ' ಎಂದು ಬರೆಯಬೇಡಿ. ನಾನು ನಿಮಗೆ ಮಾವನ ಮಗಳಿಗಿಂತ ಇನ್ನೂ ಹತ್ತಿರದವಳೆಂದು ತಿಳಿದುಕೊಂಡಿದ್ದೇನೆ." ನೋಡು, ನೀನು ಹೀಗೆ ಬರೆದಿರುವುದರಿಂದ ನೀನು ಸಲಿಗೆಯಿಂದ ಬರೆಯುತ್ತಿದೀಯೆಂದು ತೋರುತ್ತದೆ. ಹೀಗೆಯೇ ಮುಂದೂ ಬರೆಯಬೇಕು. ಮುಂದೆಂದೂ ಬೇರೆ ಬೇರೆ ಹೆಸರಿನಿಂದ ಕಾಗದ ಬರೆಯುವುದಿಲ್ಲ. ಒಂದೇ ರೀತಿಯಲ್ಲಿ ಬರೆಯುತ್ತೇನೆ.

ನೀನು ನಿನ್ನ ಗೆಳತಿ ಚಂದ್ರವದನೆಯ ವಿಷಯವಾಗಿ ನಾಲ್ಕಾರು ಮಾತು ಬರೆದಿದ್ದೀಯೆ. ಚಂದ್ರವದನೆಯಲ್ಲ, ಎಲ್ಲ ಓದಿದ ಹೆಂಗಸರೂ ಅಷ್ಟೆ; ಉಳಿದ ಹೆಂಗಸರಿಗಿಂತ ತಮ್ಮ ಕೋಡು ಸ್ವಲ್ಪ ಹೆಚ್ಚು ಎಂದು ತಿಳಿದುಕೊಳ್ಳುವರು. ಹೆಂಗಸರಲ್ಲಿರಬೇಕಾದ ಸಹಜವಾದ ಗುಣಗಳೆಲ್ಲ ಹೋಗಿಬಿಡುತ್ತವೆ. ಓದಿಯೂ ಹೆಂಗಸಾಗಿರುವುದು ಅಪರೂಪ. ಓದಿದುದರಿಂದ ಉಂಟಾದ ಸಂಸ್ಕಾರ ತಮ್ಮ ಪ್ರತಿದಿನದ ಜೀವನದಲ್ಲಿಯೂ ಕಾಣಬೇಕು. ಆಗ ಅದು ನಿಜವಾದ ಓದು. 'ಓದು'-ಎಂದರೇನು? ಮುಖಕ್ಕೆ ಸ್ನೊ, ಪೌಡರ್ (Snow, Powder) ಹಚ್ಚಿಕೊಳ್ಳುವುದು, ಕಾಲಿಗೆ ಎಕ್ಕಡ ಹಾಕಿಕೊಂಡು ಸಣ್ಣದೊಂದು ಛತ್ರಿ ಕೈಗೆ ಸಿಕ್ಕಿಸಿಕೊಂಡು ರಸ್ತೆಯ ಮಧ್ಯದಲ್ಲಿ "ಟಪ್" "ಟಪ್" ಎಂದು ಸದ್ದುಮಾಡಿಕೊಂಡು ಹೋಗುವುದೆ? ಹೆಂಗಸರಿಗೆ ವಿದ್ಯೆಯಿದ್ದರೆ ತಾವು ಉಳಿದ ಹೆಂಗಸರಿಗಿಂತ ಉತ್ತಮವೆಂದು ತೋರಿಸುವುದರಲ್ಲಿ ಅದು ಕಾಣಬೇಕೇ ಹೊರತು ತಾವು ಹೆಂಗಸರೇ ಅಲ್ಲವೆಂದು ತೋರಿಸಲು ಕಾರಣವಾಗಬಾರದು. ಮನೆಯನ್ನು ಒಪ್ಪವಾಗಿ ಇಡುವುದು, ಮನೆಯ ಲೆಕ್ಕಾಚಾರಗಳನ್ನು ನೋಡಿಕೊಳ್ಳುವುದು, ಮಕ್ಕಳನ್ನು ಕಾಪಾಡುವುದು, ಒಳ್ಳೆಯ ದಾರಿಯಲ್ಲಿ ತರುವುದು, ಮನೆಯನ್ನು

ಸುಖಮಯವಾಗಿ ಮಾಡುವುದು ಇವುಗಳಲ್ಲಿ ಆ ಪ್ರಭಾವ ಕಾಣಬೇಕು.

ಈಗ ಹೆಂಗಸರು ತಾವೇನೋ ಸ್ವಾತಂತ್ರ್ಯವನ್ನು ಕಳೆದುಕೊಂಡವರಂತೆ ಪೇಚಾಡುತ್ತಾರೆ. ಗಂಡಸರು ಸ್ವಾತಂತ್ರ್ಯವನ್ನು ಕಳೆದುಕೊಂಡಿಲ್ಲವೋ ? ಒಟ್ಟಿಗೆ ಸೇರಿದ ಮೇಲೆ ಹಾಗಾಗುವುದು ಸ್ವಭಾವ. ಕಳೆದುಕೊಂಡೆನೆಂಬ ವ್ಯಥೆಯು ಮನಸ್ಸಿನಲ್ಲಿಲ್ಲದಿದ್ದರೆ, ಅದು ತ್ಯಾಗವಾಗುತ್ತದೆ. ಯಾವ ಮನುಷ್ಯನೂ ಕೂಡ ತನ್ನ ಹೆಂಡತಿಗೆ ತಿಳಿಸದೆ ಆಲೋಚಿಸದೆ ಯಾವ ಕೆಲಸವನ್ನೂ ತಾನು ಮಾಡುವುದಿಲ್ಲವೆಂದು ನನ್ನ ಭಾವನೆ. ಹಾಗೆ ಮಾಡಿದ್ದರೆ ಅದು ಹೆಂಗಸಿನ ತಪ್ಪು. ಆಕೆ ಅವನನ್ನು ಒಲಿಸಿಕೊಂಡಿಲ್ಲವೆಂದು ಹೇಳಬೇಕಾಗುತ್ತದೆ. ಹೆಂಗಸು ದಾಸಿ, ಮನೆಯಲ್ಲಿ ದುಡಿಯುವವಳು ಎಂದರೆ ಗಂಡಸು ಆಳು, ಮನೆಗೋಸ್ಕರ ಹೊರಗಡೆ ಕೂಲಿಮಾಡುವವನು ಎಂದೇಕೆ ಹೇಳಬಾರದು ? ಗಂಡಸು ಹೆಂಗಸು ಇಬ್ಬರೂ ಒಮ್ಮನಸ್ಸಿನಿಂದ ಕೂಡಿದರೆ ಸಂಸಾರ. ಹೀಗೆ ಕೂಡುವಾಗ ಇಂತಹ ಕಿರುಕುಳಗಳನ್ನಿಟ್ಟುಕೊಳ್ಳಬಾರದು. ಪ್ರೇಮವಿದ್ದರೆ ಇದೆಲ್ಲವನ್ನೂ ಅದೆಂದಿಗೂ ಬರಗೊಡದು. ಅಂತಹ ಪ್ರೇಮವು ನಮ್ಮಿಬ್ಬರಲ್ಲೂ ಬೆಳೆಯಬೇಕು. ಬೆಳೆಸಲು ನಾವು ಪ್ರಯತ್ನಪಡಬೇಕು.

ನಿನ್ನ ಪ್ರೇಮದ ಪತಿ.

೧೨

ವಿಶಾಲಾಕ್ಷೀ,

ನೀನು ಕೇಳಿರುವುದೆಲ್ಲ ಸರಿಯೆ ; ನೀನೂ ಹೆಂಗಸೇ ಅಲ್ಲವೆ. ನಿಮ್ಮ ಪಕ್ಷವಾಗಿ ನೀನು ಮಾತನಾಡದಿದ್ದರೆ ಆಗುತ್ತದೆಯೇ.

ನೀವು (ಹೆಂಗಸರು) ಹೇಳುವ ಹಾಗೆ ಅದೇನು ಸ್ವಾತಂತ್ರ್ಯ ಕಳೆದುಕೊಂಡಿರುವಿರೋ ನನಗೆ ತಿಳಿಯದು. ಇದು ಅರ್ಥವಿಲ್ಲದ ಕೂಗು ಎಂದು ನಾನು ತಿಳಿದುಕೊಂಡಿದ್ದೇನೆ. ಸ್ವಾತಂತ್ರ್ಯವೆಂದರೇನು ? ಮನಸ್ಸಿಗೆ ಬಂದಂತೆ ಮಾಡುವುದಕ್ಕೆ ಅವಕಾಶವಿರಬೇಕೆಂಬುದೆ ? ಹೀಗೆ ಅರ್ಥಮಾಡುವುದಾದರೆ ಸೂಳೆಗೆ ಇರುವಷ್ಟು ಸ್ವಾತಂತ್ರ್ಯ ಯಾವ ಹೆಂಗಸಿಗೂ ಇಲ್ಲ. ಪೋಲಿಗಿರುವಷ್ಟು ಸ್ವಾತಂತ್ರ್ಯ ಯಾವ ಗಂಡಸಿಗೂ ಇಲ್ಲ.

ಈ ರೀತಿಯಲ್ಲಿ ಯಾರಿಗೂ ಸ್ವಾತಂತ್ರ್ಯ ಸಿಗಲಾರದು. ಸಿಕ್ಕಿ

ದರೂ ಸುಖಕಾರಿಯಲ್ಲ. ಸುಖಕಾರಿಯಾದ ಸ್ವಾತಂತ್ರ್ಯ ಬೇರೆ ರೀತಿಯದು. ಯಾವುದಾದರೂ ಕಟ್ಟು ಕಟ್ಟಳೆಗಳನ್ನಿಟ್ಟುಕೊಂಡು ಅವುಗಳನ್ನನುಸರಿಸುವಷ್ಟರಲ್ಲಿ ಮಾತ್ರ ಸ್ವಾತಂತ್ರ್ಯವಹಿಸುವುದು. ಇಂತಹ ಸ್ವಾತಂತ್ರ್ಯವು ನಮ್ಮ ಹೆಂಗಸರಿಗೆ, ಗಂಡಸರಿಗಿರುವಷ್ಟೆ ಇದೆ.

ನಾನೂ ನನ್ನ ಸ್ನೇಹಿತರೂ ಈ ವರ್ಷ ನಡೆಯಬೇಕಾದ ಮಹಿಳಾ ಸಮಾಜದ ವಾರ್ಷಿಕೋತ್ಸವದ ವಿಷಯವಾಗಿ ಮೊನ್ನೆ ಮಾತನಾಡುತ್ತಿದ್ದೆವು.—

"ಇದೇನು ಹೊಡೆದಾಟ ಸ್ವಾತಂತ್ರ್ಯಕ್ಕೆ? ಸಾಕಷ್ಟು ಸ್ವಾತಂತ್ರ್ಯವಿಲ್ಲವೆ? ಗಂಡಸಿಗಿಂತ ಹೆಂಗಸಿಗೇ ಹೆಚ್ಚು ಸ್ವಾತಂತ್ರ್ಯವಿದೆಯಲ್ಲ! ಈಗ ನೋಡಿ, ನಮ್ಮ ಮಹಿಳಾಸಮಾಜದ ಪ್ರೆಸಿಡೆಂಟು ಒಬ್ಬ ದೊಡ್ಡ ಅಧಿಕಾರಿಗಳ ಹೆಂಡತಿ. ಈ ಸಲದ ಸಭೆಯ ಹೆಸರಿನಲ್ಲಿ ಸಾವಿರಾರು ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ ಆ ಅಧಿಕಾರಿಗಳು. ಆ ಅಧಿಕಾರಿಗಳನ್ನೇ ಯಾವುದಾದರೂ ಸಂಸ್ಥೆಗೆ ಪ್ರೆಸಿಡೆಂಟರನ್ನಾಗಿ ಮಾಡಿದ್ದರೂ ಇಷ್ಟು ಹಣ ಸಂಗ್ರಹವಾಗುತ್ತಿತ್ತೋ ಇಲ್ಲವೊ ತಿಳಿಯದು. ಇಷ್ಟಾದರೂ ಆ ಅಧಿಕಾರಿಗಳಿಗೆ ಅವರ ಪ್ರೇಯಸಿಯ ಕಡೆಯಿಂದ ಪೂರ್ಣ ಅನುಗ್ರಹ ವುಂಟಾಗಿದೆಯೋ ಇಲ್ಲವೋ ಅನುಮಾನ. ಇದು ಹೆಂಗಸಿನ ಅಧಿಕಾರಕ್ಕೆ ನಿದರ್ಶನ."

ಇದು ಹಾಗಿರಲಿ, ಪ್ರತಿಯೊಂದು ಮನೆಯನ್ನೂ ತೆಗೆದುಕೊಳ್ಳೋಣ. ಗಂಡಸು ತನ್ನದು ಎಂದುಕೊಳ್ಳುವ ಪದಾರ್ಥಗಳ ಬೆಲೆಯೆಷ್ಟು, ನೋಡೋಣ. ಹೆಂಗಸು ತನ್ನದು ಎಂದು ಹೇಳಿಕೊಳ್ಳುವ ಪದಾರ್ಥಗಳ ಬೆಲೆಯೆಷ್ಟೆಂಬುದನ್ನೂ ನೋಡೋಣ. ಯಾರದು ಹೆಚ್ಚು? ಆದರೆ ಯಾರು ಹಣ ಸಂಪಾದಿಸಿದುದು? ಇದನ್ನು ಯೋಚಿಸಿದರೆ ಹೆಂಗಸು ಗಂಡಸಿಗೆ ದಾಸಿಯಾಗಿರುವುದು ಹಾಗಿರಲಿ.—ಅವಳಿಗೆ ಅದಕ್ಕೆ ಪ್ರತಿಫಲವುಂಟು. ಗಂಡಸು ಮಾತ್ರ ಅದಕ್ಕೂ ಹೆಚ್ಚಿನ, ಮಾತಿಗೂ ಮುಖಕ್ಕೂ ಸೋತಿರುವ, ಬುದ್ಧಿಯಿಲ್ಲದ ಆಳು ಎನ್ನುವುದು ದೃಢಪಡುತ್ತದೆ.

೧೩

ವಿಶಾಲಿ,

"ನಿಮ್ಮ ಕಾಗದ ಓದಿ ಪೂರಯಿಸುವ ವೇಳೆಗೆ ತಲೆನೋವು ಬಂದಿತು" ಎಂದು ಬರೆದಿದ್ದೀಯೆ. ಆದರೆ ವಾದ ಮಾತ್ರ ಇನ್ನೂ ಮುಗಿಯಲಿಲ್ಲ. ಮಹಿಳಾಸಮಾಜಗಳು ಬೇಕಾಗಿಲ್ಲ, ಇರಬಾರದು ಎಂದು ನಾನು ಹೇಳಲಿಲ್ಲ. ನಾನು ಹಾಗೆ ಹೇಳಿದಂತೆ ನೀನು ತಿಳಿದುಕೊಂಡ ಹಾಗೆ ಕಾಣುತ್ತದೆ.

ನಾನು ಸಂಸ್ಥೆಯಿರಕೂಡದೆಂದು ಹೇಳುತ್ತಿಲ್ಲ. ಬರಿಯ ಕೂಗಾಟ ಆರ್ಭಟಗಳಿಗಿಂತ ಸರಿಯಾದ ಕೆಲಸಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಸುಮ್ಮನೆ ಸ್ವಾತಂತ್ರ್ಯ ದಾಸ್ಯ ಎಂದು ಬಡಿದಾಡುವುದಕ್ಕಿಂತ ತಮ್ಮ ಸೋದರಿಯರಲ್ಲಿ ಜ್ಞಾನ ಪ್ರಚಾರಮಾಡಲಿ. ಮಕ್ಕಳನ್ನು ಹೇಗೆ ಸಾಕಬೇಕು ? ಕಡಮೆ ಸಂಪಾದನೆಯಲ್ಲಿ ಉತ್ತಮ ಜೀವನವನ್ನು ನಡೆಸುವುದು ಹೇಗೆ? ಎಂಬ ವಿಷಯಗಳನ್ನು ಕುರಿತು ಕೆಲಸಮಾಡಲಿ. ಹೊಲಿಗೆ ಅಡಿಗೆ ಕೆಲಸಗಳನ್ನು ಕಲಿಸಲಿ. ಇನ್ನೂ ಇಂತಹ ನೂರಾರು ಉಪಯುಕ್ತವಾದ ಕೆಲಸಗಳನ್ನು ಕೈಗೊಳ್ಳಲಿ.

ಸ್ವಾತಂತ್ರ್ಯವೆಂದರೇನು ? ನಮ್ಮಲ್ಲಿ ಸ್ವಾತಂತ್ರ್ಯವಿದೆ ಎನ್ನುವರೆಷ್ಟು ಮಂದಿ ನಿಜವಾಗಿಯೂ ಸ್ವತಂತ್ರರು ಎಂಬುದನ್ನು ಯೋಚಿಸಿದ್ದೀಯಾ ? ಈ ಜಗತ್ತಿನಲ್ಲಿ ದೇವರನ್ನೊಬ್ಬನನ್ನು ಬಿಟ್ಟು ಯಾವನೂ ಸ್ವತಂತ್ರನಲ್ಲ. ಇನ್ನೊಬ್ಬರ ಕೈಗೆ ಕಾಯದಿರುವವನೇ ಸ್ವತಂತ್ರ ; ಇಂತಹವನು ಒಬ್ಬನೂ ಇಲ್ಲ. ತನ್ನ ಅನ್ನವನ್ನು ಬೆಳೆದುಕೊಂಡು ತನ್ನ ಬಟ್ಟೆಯನ್ನು ನೇಯ್ದು ಕೊಳ್ಳುವವನೂ ಕೂಡ ಮಳೆಯ ವಿಷಯದಲ್ಲಿ ಸ್ವತಂತ್ರನಲ್ಲ. ಹೀಗಿರುವಾಗ ಉಳಿದವರ ಪಾಡೇನು ?

ಆದಿರಲಿ ; ನಿಮ್ಮ ಸಂಸ್ಥೆಯ ಮಾತು. ನಿಮ್ಮ ಮಹಿಳಾ ಸಮಾಜಗಳಲ್ಲಿ ಕೆಲಸ ಮಾಡುವವರಾರು, ನೋಡೋಣ. ಸಾಮಾನ್ಯವಾಗಿ ದೊಡ್ಡ ಅಧಿಕಾರಿಗಳ ಹೆಂಡತಿಯರು ; ಇವರ ಮನೆಗಳಲ್ಲಿ ಅಡಿಗೆ ಮಾಡಲು ಅಡಿಗೆಯವನಿದ್ದಾನೆ ; ಮಕ್ಕಳನ್ನು ನೋಡಿಕೊಳ್ಳಲು ಆಳುಗಳಿದ್ದಾರೆ. ಇವರಲ್ಲದೆ ಸಮಾಜಕ್ಕಾಗಿ ಓಡಾಡುವರೆಂದರೆ ಸ್ವಂತವಾಗಿ ಸಂಪಾದನೆ ಮಾಡುವ

ವರು—ಸ್ಕೂಲಿನಲ್ಲಿ ಮಿಸ್ಟ್ರೆಸ್ ಆಗಿರುವವರು ಇಲ್ಲವೆ ನರ್ಸ್‌ಗಳಾಗಿರುವವರು. ಇವರಾರಿಗೂ ನಿನಗೆ ತಿಳಿದ ಹಾಗೆಯೇ ಮನೆಯ ಕೆಲಸವಾಗಲಿ ಮಕ್ಕಳ ತೊಂದರೆಯಾಗಲಿ ಇಲ್ಲ. ಇವರೆಲ್ಲರೂ ನಮ್ಮ ದೇಶದ ಸ್ತ್ರೀಯರಿಂದ ಸ್ವಲ್ಪ ಹೊರಚ್ಚಾದವರು. ಇವರ ಸಮಾಜ ನಮ್ಮ ಸ್ತ್ರೀಯರ ಸಮಾಜವೆ? ಇದು ನಿಜವಾದ ಮಹಿಳಾಸಮಾಜವೇ ಅಲ್ಲದಿರುವಾಗ ಅದರ ಕೂಗನ್ನು ನಮ್ಮ ಸ್ತ್ರೀಯರ ಕೂಗೆಂದು ನಂಬುವುದು ಹೇಗೆ?

ಒಂದುವೇಳೆ ಮಹಿಳಾಸಮಾಜಗಳು ಸರಿಯಾಗಿ ಸ್ಥಾಪಿತವಾಗಬೇಕಾದರೆ ಇಂತಹ ಸಮಾಜಗಳು ಹೋಗಿ, ಇವುಗಳ ಸ್ಥಾನದಲ್ಲಿ ಸ್ತ್ರೀಯರ ಉನ್ನತಿಗೆ ದುಡಿಯುವ ನಿಜವಾದ ಸಂಸ್ಥೆಗಳು ನಿರ್ಮಾಣವಾಗಬೇಕು.

ನನ್ನ ಅಭಿಪ್ರಾಯವನ್ನು ನಾನು ತಿಳಿಸಿದ್ದೇನೆ. ನಿನ್ನ ಅಭಿಪ್ರಾಯಕ್ಕೆ ನಾನು ಅಡ್ಡಿಬರುವುದಿಲ್ಲ. ಆದರೆ ನೀನು ಯೋಚನೆಮಾಡಿ ಒಂದು ನೆಲೆಗೆ ಬರಬೇಕೆಂದು ನನ್ನ ಆಶೆ.

ನಿನ್ನವ.

## ೧೪

ವಿಶಾಲಾಕ್ಷೀ,

ನಿನ್ನ ಕಾಗದ ಬಂದಿತು. ಹೋದ ವಾರ ಬರೆಯದುದಕ್ಕಾಗಿ ದಯವಿಟ್ಟು ಕ್ಷಮಿಸು. ನೀನು ಬರೆದಿರುವುದು ನ್ಯಾಯವೇ! ಗಂಡಸರಿಗೆ, ಹೆಂಗಸರಲ್ಲದೆ ಮತ್ತಾರು ಬುದ್ಧಿ ಹೇಳುವವರು? ಆದರೆ ಹೆಂಗಸರು ಬುದ್ಧಿ ಹೇಳುವಷ್ಟು ತಿಳಿವಳಿಕೆಯಾಗಿರಬೇಕು. ನೀನು ಕಾಗದ ಬರೆಯದಿದ್ದುದಕ್ಕೆ ನಾನು ಜೋರುಮಾಡಿದ್ದೆ. ನಾನು ಬರೆಯದಿದ್ದುದಕ್ಕೆ ನೀನೂ ಜೋರುಮಾಡಿದ್ದೀಯೆ. ಆದರೆ, ಈ ಜೋರು ಹೆಚ್ಚಾಗದಿರಬೇಕು. ಯಾಕೆಂದರೆ ಎಲ್ಲಿ 'Home Rule' ಮಾಡ್ತೀಯೋ ಎಂದು ಹೆದರಿಕೆ.

ನಮ್ಮಜ್ಜ ಒಬ್ಬರಿದ್ದರು. ಬಹಳ ಮುದುಕರು. ಅವರು ಈಗ ಇಲ್ಲ. ನಿನ್ನ ಜೋರು ನೋಡಿ, ಅವರು ಹೇಳಿದ ಒಂದು ಕಥೆ ಜ್ಞಾಪಕಕ್ಕೆ ಬಂತು. ಗಂಡಹೆಂಡತಿಯಿಬ್ಬರು ಇದ್ದರು. ಹೆಂಡತಿ ಬಲು ಗಟ್ಟಿಗಿತ್ತಿ. ಒಂದು ದಿನ ಗಂಡ ಒಬ್ಬ ಸ್ನೇಹಿತನನ್ನು ಊಟಕ್ಕೆ ಕರೆದುಕೊಂಡು ಬಂದ. ಗಂಡ ಮನೆಗೆ ಬಂದಾಗ ಹೆಂಡತಿಯು ಹೆದರಿಕೆಗಾಗಿ ಸಾಮಾನ್ಯವಾಗಿ ಮಾತನಾ

ಡುತ್ತಿರಲಿಲ್ಲ. ಇವತ್ತು ಸ್ನೇಹಿತನಿದ್ದಾನಲ್ಲ ಅವನೆದುರಿಗಾದರೂ ಸ್ವಲ್ಪ ಪ್ರತಾಪ ತೋರಿಸೋಣವೆಂದು ಊಟಕ್ಕೆ ಕುಳಿತಿದ್ದಾಗ ಎರಡನೇ ಬಾರಿ ತುಪ್ಪ ಕೇಳಿದ. ಒಳಗಿನಿಂದ ಆಕೆ "ಆ" ಎಂದು ಸ್ವಲ್ಪ ಗರ್ಜಿಸಿದಂತೆ ಎಂದಳಂತೆ. ಇವನು ತತ್‌ಕ್ಷಣವೇ "ಅಲ್ಲ, ಅಲ್ಲ ಉಪ್ಪು" ಎಂದ. ಇನ್ನೊಂದು ಬಾರಿ ಒಳಗಿನಿಂದ "ಆ" ಎಂದರು ಆಕೆ. ಆಗ "ಅನ್ನ ಬಿಸಿ, ಅದಕ್ಕೆ 'ಉಫ್' ಎಂದೆ ಅಷ್ಟೆ" ಎಂದು ಆತ ಹೇಳಿದನಂತೆ.

ಇಂತಹ ಹೆಂಡತಿ ಮಾತ್ರ ಸದ್ಯಕ್ಕೆ ಆಗಬೇಡ ಮಹಾರಾಯಿತಿ! ಅಂದರೆ ಹೆಂಗಸಿಗೆ ಹೇಳುವುದಕ್ಕೆ ಅಧಿಕಾರವಿಲ್ಲವೆಂದಲ್ಲ. ಹೆಂಗಸರು ಸರಿಯಾಗಿ ಯೋಚಿಸಿ ಹೇಳುವಷ್ಟು ಬುದ್ಧಿವಂತರಾಗಬೇಕು. ಹೇಳುವುದನ್ನು ಕೂಡ ಹೆಂಗಸರು ತಮ್ಮ ಸ್ವಭಾವಕ್ಕೆ ಕುಂದುಬಾರದ ಹಾಗೆ ಹೇಳಬೇಕು. ಹಾಗೆ ಹೇಳಿದರೆ ಯಾವ ಮನುಷ್ಯನು ತಾನೆ ಹೆಂಗಸಿನ ಮಾತು ಕೇಳುವುದಿಲ್ಲ?

ನನ್ನ ಮೇಲೆ ಮುಯ್ಯಿತೀರಿಸಿಕೊಳ್ಳಲು ಕಾಗದ ಬರೆಯುವುದನ್ನು ಬಿಡಬೇಡ.

ಇತಿ ನಿನ್ನವ.

## ೧೫

ವಿಶಾಲಾಕ್ಷಿ,

ನಮ್ಮೂರಿಗೆ ನನ್ನ ಹಳೆಯ ಸ್ನೇಹಿತನೊಬ್ಬ ಬಂದಿದ್ದಾನೆ. ನಾನೂ ಅವನೂ ಸ್ಕೂಲಿನಲ್ಲಿದ್ದಂದಿನಿಂದ ಬಹಳ ಸ್ನೇಹಿತರು. ಒಬ್ಬರನ್ನೊಬ್ಬರು ಬಿಟ್ಟು ಕದಲುತ್ತಿರಲಿಲ್ಲ, ಅಷ್ಟು ಸ್ನೇಹಿತರು. ಹುಡುಗರೆಲ್ಲರೂ ನಮ್ಮನ್ನು ಹಾಸ್ಯಮಾಡುತ್ತಿದ್ದರು. ನಿನ್ನೆ ಮಧ್ಯಾಹ್ನ ನನ್ನನ್ನು ಅವರ ಮನೆಗೆ ತಿಂಡಿ ತಿನ್ನಲು ಕರೆದಿದ್ದ; ಹೋಗಿದ್ದೆ. ಅಲ್ಲಿ ನಡೆದದ್ದನ್ನು ನಿನಗೆ ಹೇಳಬೇಕೆನ್ನಿಸಿತು. ಅದಕ್ಕೋಸ್ಕರ ಈ ವಿಷಯ ಬರೆಯುತ್ತಿದ್ದೇನೆ.

ನಾವು ಅಲ್ಲಿರುವವರೆಗೂ ಅವನ ಹೆಂಡತಿ ಅಡಿಗೆ ಮನೆಯಿಂದ ಹೊರಕ್ಕೆ ಹೊರಡಲೇ ಇಲ್ಲ. ಕುಡಿಯಲು ನೀರು ಬೇಕಾದರೂ ಕೂಡ ನನ್ನ ಸ್ನೇಹಿತನೇ ಒಳಗೆದ್ದುಹೋಗಿ ತರಬೇಕಾಗುತ್ತಿತ್ತು. ಇದನ್ನು ನೋಡಿದರೆ ಅವನು ಒಬ್ಬನೇ ಇದಾನೋ ಅನ್ನುವ ಸಂಶಯ ಬರಬೇಕಾ

ಗಿತ್ತು. ಆದರೆ ಬಸ್ಸಿನಿಂದ ಇಳಿದಾಗ ಅವನ ಹೆಂಡತಿ ಕೆಳಗಿಳಿದುದನ್ನು ಕಂಡೆ. ಅಷ್ಟರಿಂದ ನನಗೆ ಗೊತ್ತಾಗಿತ್ತು, ಆಕೆಯೂ ಮನೆಯಲ್ಲಿದ್ದಾಳೆಂದು. ನಾನೇನಾದರೂ ಅವನನ್ನು ನೋಡಬೇಕಾಗಿದ್ದರೆ ಅವನ ಮನೆಯ ಬಳಿಗೆ ಹೋಗುತ್ತೇನೆ. ಆಗ ಅವನೇನಾದರೂ ಮನೆಯಲ್ಲಿದ್ದರೆ ಒಂದುಬಾರಿ ಕೂಗಿದ ಕೂಡಲೆ ಹೊರಗೆ ಬರುತ್ತಾನೆ ; ಇಲ್ಲದಿದ್ದರೆ ನನ್ನ ಅವಸ್ಥೆ ಬೇಡ. ಎಷ್ಟು ಕೂಗಿದರೂ ಉತ್ತರವಿಲ್ಲ. ಇದ್ದಾನೋ ಇಲ್ಲವೋ, ನಾನು ಕೂಗಿದುದು ಕೇಳಿಸಿತೋ ಇಲ್ಲವೋ ಒಂದೂ ತಿಳಿಯುವಂತಿಲ್ಲ. ಅದಕ್ಕೋಸ್ಕರ ಮತ್ತೆ ಮತ್ತೆ ಕೂಗುವುದು. ಅವನ ಹೆಂಡತಿಗೆ ಹೊರಗೆ ಬಂದು ಇಲ್ಲ ಎಂದು ಹೇಳುವುದಕ್ಕೇ ನಾಚಿಕೆ ; ಮಾತನಾಡೋಣವೇ ಇಲ್ಲ. ಆದ್ದರಿಂದ ಈಚೆಗೆ ನಾನು ಹೀಗೆ ಮನಸ್ಸುಮಾಡಿದ್ದೇನೆ. "ಮೂರು ಬಾರಿ ಗಟ್ಟಿಯಾಗಿ ಕೂಗುವುದು, ಉತ್ತರ ಬರದಿದ್ದರೆ ಅವನಿಲ್ಲವೆಂದು ತಿಳಿದುಕೊಳ್ಳುವುದು." ನಾವೇನಾದರೂ ಹಜಾರದಲ್ಲಿ ಕುಳಿತಿದ್ದು, ಆಕೆ ಹೊರಗಿನಿಂದ ಒಳಕ್ಕೆ ಹೋಗಬೇಕಾದರೆ ಮಿಂಚಿನಂತೆ ಬಲುಬೇಗನೆ ಕಂಡೂ ಕಾಣದಂತೆ ಹೋಗಿಬಿಡುವಳು. ನನಗೆ ಇದನ್ನು ಕಂಡು ಸ್ವಲ್ಪ ನಗು, ಸ್ವಲ್ಪ ಬೇಸರ.

ನನ್ನ ಸ್ನೇಹಿತನನ್ನು ಕೇಳಿದೆ; "ಏನಯ್ಯಾ, ಇದು ?" ಎಂದು. ಅವಳ ಸ್ವಭಾವವೇ ಹೀಗೆ" ಎಂದ. "ನೋಡು, ನಾನು ಅವಳೊಡನೆ ಮಾತಾಡಿದುದು ಯಾವಾಗ ಗೊತ್ತೇ ? ಅವರಪ್ಪನ ಮನೆಬಿಟ್ಟು ನನ್ನೊಡನೆ ಬಂದಾಗಲೆ. ಈಗಲೂ ಅವರಪ್ಪನ ಮನೆಗೆ ಹೋಗಿಬಿಟ್ಟರೆ ನನ್ನ ಪಾಡು ಬೇಡ. ಎಷ್ಟೋ ಹೇಳಿದೆ. ಆದರೂ ಸರಿಹೋಗಲಿಲ್ಲ, ನೋಡು."

ವಿಶಾಲಿ ! ಇದೇನೆಂದು ತಿಳಿದುಕೊಂಡಿದ್ದೀಯೆ ? ನಾಚಿಕೆ ಅಲ್ಲವೆ ? ನಾನು ಹೇಳುವುದು ನಾಚಿಕೆ ಇರಕೂಡದೆಂದಲ್ಲ, ಎಷ್ಟು ಬೇಕೋ ಅಷ್ಟಿರಲಿ. ಅದು ಹೆಚ್ಚಿಗೆ ಇದ್ದರೆ ಸಹಿಸುವುದಕ್ಕಾಗುವುದಿಲ್ಲ. ನಾಚಿಕೆ ಎಷ್ಟು ಬೇಕೋ ಅಷ್ಟಿದ್ದರೆ ಸೌಂದರ್ಯಕ್ಕೂ ಒಂದು ಕಳೆ ತರುತ್ತದೆ. ನಾನು ಬೊಂಬಾಯಿನ ಕಡೆ ಈಗ ೮-೧೦ ತಿಂಗಳ ಕೆಳಗೆ ಹೋಗಿದ್ದೆ. ಅಲ್ಲಿನ ಹೆಂಗಸರು ಬಲು ಗಟ್ಟಿಗಿತ್ತಿಯರು. ಹೆಂಗಸರ ಉಡುಪಿನಲ್ಲೂ ಒಂದು ಗಂಡಸುತನ. ಕೆಲವು ಹೆಂಗಸರನ್ನು ನೋಡಿದೆ. ಕತ್ತೆತ್ತಿಕೊಂಡು ಸಿಪಾಯಿಗಳಂತೆ ಬಿಗುಪಿನಿಂದ ನಡೆಯುತ್ತಿದ್ದರು. ಅವರನ್ನು ನೋಡಿ ನನಗೆ

ನಾಚಿಕೆಯಾಗಿ ತಲೆ ಬಗ್ಗಿಸಿಕೊಂಡೆ. ನಾನೇ ಹುಡುಗಿಯಾಗಿಬಿಟ್ಟೆ. ಅವರು, ಕಣ್ಣು ಮೂಗು ನೇರವಾಗಿದ್ದು ನೋಡಲು ಚೆನ್ನಾಗಿದ್ದರೂ ಕೂಡ ಏನೋ ಅಷ್ಟು ಚೆನ್ನಾಗಿಲ್ಲವೆನ್ನಿಸುತ್ತಿತ್ತು. ಆಗ ನಮ್ಮ ಹೆಂಗಸರು ಜ್ಞಾಪಕಕ್ಕೆ ಬಂದರು. ಅವರ ನಾಚಿಕೆಯೇ ಅವರಿಗೆ ಒಂದು ಸೌಂದರ್ಯವೆಂದು ಮನಸ್ಸಿನಲ್ಲಿ ಮಾಡಿಕೊಂಡೆ.

ಹೆಂಗಸಿಗೆ ನಾಚಿಕೆಯಿಲ್ಲದಿರಬಾರದು ; ಅತಿಯಾಗಿ ಇರಬಾರದು ; ಒಂದು ಅಂದವನ್ನು ತರುವಂತಿರಬೇಕು. ನಮ್ಮ ಸ್ನೇಹಿತರಲ್ಲೇ, ನಮ್ಮ ಬಾಳಿನಲ್ಲಿ ಕುತೂಹಲವಿರುವವರ ಮುಂದೆ, ಮುಖ ತೋರಿಸದಷ್ಟು ನಾಚಿಕೆ ತೀರ ಅನ್ಯಾಯ. ಅಂದರೆ ಎಲ್ಲರ ಮುಂದೆಯೂ ಹಾಗಿರಬೇಕೆಂದಲ್ಲ. ನಮಗೆ ಯಾರು ಸ್ನೇಹಿತರೋ ಅವರು ನಮ್ಮ ಮನೆಯವರಿಗೆಲ್ಲ ಸ್ನೇಹಿತರು. ನಾವು ಪೋಲಿಗಳ ಜೊತೆ ಸ್ನೇಹ ಮಾಡುವುದಿಲ್ಲವೆಂದು ತಿಳಿಯಬೇಕು. ಹಾಗೆ ಸಹಜವಾದ, ತಿಳಿಯಾದ, ತೆಳುವಾದ ನಾಚಿಕೆಯು ಹೆಂಗಸರಿಗಿರಬೇಕು. ನಾಚಿಕೆ ಅತಿಯಾಗಿದ್ದರೂ, ಸ್ವಲ್ಪವೂ ಇಲ್ಲದಿದ್ದರೂ, ಅದು ಶೋಭಿಸದು.

ನಿನ್ನವ.

## ೧೬

ವಿಶಾಲೀ,

" ಹೆಂಗಸರು ಹಾಗಿರಬೇಕು, ಹೀಗಿರಬೇಕು, ಎಂದು ನೀವು ನನಗೆ ದೊಡ್ಡ ದೊಡ್ಡ ಉಪನ್ಯಾಸಮಾಡುತ್ತಿದ್ದೀರಿ. ನಾನೇಕೆ ಗಂಡಸರ ವಿಷಯ ಸ್ವಲ್ಪ ಬರೆಯಬಾರದು ? " ಎಂದು ಕೇಳಿರುವೆ. ನೀನು ಅಡುಗೂಲಜ್ಜಿಯ ಕಥೆಯನ್ನು ಕೇಳುತ್ತಿರುವ ಮಕ್ಕಳಂತೆ ಎಲ್ಲಕ್ಕೂ ' ಹು ' ಎನ್ನಬೇಕೆಂಬುದು ನನ್ನ ಅಭಿಪ್ರಾಯವಲ್ಲ. ಏನು ಬೇಕಾದರೂ ಬರೆಯಬಹುದು, ಚರ್ಚಿಸಬಹುದು.

ಈಗ ನಮ್ಮ ಪಕ್ಕದ ಮನೆಗೆ ಒಬ್ಬರು ಬಂದಿದ್ದಾರೆ. ಗಂಡ ಹೆಂಡತಿ ನಾಲ್ಕು ಮಕ್ಕಳು ಇದ್ದಾರೆ. ಆದರೆ ಮನೆಯಲ್ಲಿ ಸ್ವಲ್ಪವೂ ಗದ್ದಲವಿಲ್ಲ. ಮಕ್ಕಳು ಅಳುವ ಸದ್ದಂತೂ ಇಲ್ಲವೇ ಇಲ್ಲ. ನಮಗೆ ಒಂದೊಂದು ಬಾರಿ ಗಟ್ಟಿಯಾಗಿ ನಗುವ ಸದ್ದು ಮಾತ್ರ ಕೇಳಿಸುತ್ತದೆ. ಅದೂ ಬಹಳ ಕಡಿಮೆ.

ಇದ್ದರೆ ಇಂತಹ ನೆರೆಯಿರಬೇಕು. ಇನ್ನೊಬ್ಬರಿಗೆ ಸ್ವಲ್ಪವೂ ತೊಂದರೆ ಯಾಗುವುದಿಲ್ಲ. ಮಾತನಾಡುವಾಗ ಮೆಲ್ಲಗೆ ಮಾತನಾಡುವುದೂ ಒಂದು ಒಳ್ಳೆಯ ಗುಣ. ಅದೂ ಮನುಷ್ಯನ ಸ್ವಭಾವವನ್ನು ತೋರಿಸುತ್ತದೆ. ಈ ಸಮಯದಲ್ಲಿ ನನಗೆ ನಡೆದ ವಿಷಯವೊಂದು ಜ್ಞಾಪಕಕ್ಕೆ ಬರುತ್ತದೆ. ನಮ್ಮೂರಿನಿಂದ ಸ್ವಲ್ಪ ದೂರವಿರುವ ಇನ್ನೊಂದು ಊರಿಗೆ ನಾನು ಕೆಲವು ಸ್ನೇಹಿತರೊಡನೆ ಹೋಗಿದ್ದೆ. ಅಲ್ಲಿ ನಮ್ಮ ನಂಟರೊಬ್ಬರಿದ್ದಾರೆ. ಅವರ ಮನೆಗೆ ನಾನು ಊಟಕ್ಕೆ ಹೋಗಲಿಲ್ಲ. ಒಂದು ಸಲ ಅವರು ದಾರಿಯಲ್ಲಿ ಸಿಕ್ಕಿದರು. "ಏನಯ್ಯಾ, ಮನೆಗೆ ಒಂದು ದಿನವೂ ಊಟಕ್ಕೇ ಬರಲಿಲ್ಲ. ಹೋಟಲಿನಲ್ಲಿ ರುಚಿ ರುಚಿಯಾದ ಊಟವೇನೋ" ಎಂದು ಸ್ವಲ್ಪ ಗಟ್ಟಿ ಯಾಗಿ ಕೇಳಿದರು. ನನ್ನ ಜೊತೆಯಲ್ಲಿದ್ದ ಸ್ನೇಹಿತ, "ಏನೋ ದಬಾ ಯಿಸಿಬಿಡಬಾರದಾಗಿತ್ತೆ" ಎಂದ. ಅವರು ಗಟ್ಟಿಯಾಗಿ ಮಾತನಾಡಿದ್ದ ರಿಂದ ಅವರ ಹೃದಯದಲ್ಲಿರುವ ವಿಶ್ವಾಸ ಅವನಿಗೆ ತಿಳಿಯಲಿಲ್ಲ. ಅಂದರೆ, ಗಟ್ಟಿಯಾಗಿ ಮಾತನಾಡುವುದಕ್ಕೂ ಮೆಲ್ಲಗೆ ಮಾತನಾಡುವುದಕ್ಕೂ ಇರುವ ವ್ಯತ್ಯಾಸ ನಿನಗೆ ಗೊತ್ತಾಗಿರಬೇಕು.

ಅದರಲ್ಲೂ ಸಾಮಾನ್ಯವಾಗಿ ಹೆಂಗಸು ಮೃದು, ಗಂಡಸು ಕಠಿಣ ಎಂದು ತಿಳಿದುಬಂದಿದೆ. ಹೆಂಗಸು ದೇವರ ಮುಂದೆ ಉರಿಯುತ್ತಿರುವ ನಂದದ ದೀಪದಂತೆ ಸರಳೆ. ಗಂಡಸು ಗಾಳಿಗೊಡ್ಡಿದ ಲಾಂದ್ರದಂತೆ ದೃಢ. ಆದ್ದರಿಂದ ಹೆಂಗಸರಲ್ಲಿ ಮೆಲ್ಲಗೆ ಮಾತನಾಡುವುದೂ ಒಂದು ಗುಣ, ಅತ್ಯ ವಶ್ಯಕ. ಸಣ್ಣ ಮಕ್ಕಳನ್ನು ಸಾಕಿ, ಆಡಿಸಿ, ಮುದ್ದಿಸುವವರು ಮೃದುವಾಗಿ ಮಾತನಾಡದಿದ್ದರೆ ಆಗುವುದೆ?

ನಿನ್ನ ಕಾಗದದಲ್ಲಿ ಗಂಡಸರ ವಿಷಯವಾಗಿ ಏನು ಬರೆಯುವೆಯೋ ನೋಡಬೇಕೆಂಬ ಕುತೂಹಲದಿಂದ ನಿನ್ನ ಕಾಗದವನ್ನೇ ಎದುರುನೋಡು ತ್ತಿದ್ದೇನೆ.

ನಿನ್ನೊಲವಿನ ಪತಿ.

## ೧೭

ವಿಶಾಲಾಕ್ಷಿ,

ನಿಮ್ಮ ಊರಿನ ದೊಡ್ಡ ಅಧಿಕಾರಿಗಳೊಬ್ಬರ ದಿನಚರಿಯನ್ನು

ಬರೆದು ಆಕ್ಷೇಪಿಸಿದ್ದೀಯೆ. ಬೆಳಗ್ಗೆ ಏಳುವುದೇ ಎಂಟು ಗಂಟೆ; ಎದ್ದ ಕೂಡಲೆ ಬೆಳಗಿನ ವಾಕಿಂಗ್, ಸ್ನಾನ, ಕಾಫಿ; ಸ್ವಲ್ಪಹೊತ್ತಿನ ಮೇಲೆ ಊಟ, ಆಫೀಸು, ಕ್ಲಬ್ಬು. ಸಂಜೆ ೧೦ ಗಂಟೆಗೆ ಮನೆ. ಹೌದು, ಹೀಗೆ ಇರುವವರು ಎಷ್ಟೋ ಜನರಿದ್ದಾರೆ. ಇದರ ಅಭಿಪ್ರಾಯವೇನೋ ನನಗೆ ತಿಳಿಯದು. ಅವರ ಭಾವನೆಯಲ್ಲಿ ಹೆಂಗಸರಿಗೆ ತಮ್ಮೊಡನೆ ಸೇರಿ ಸಂತೋಷಿಸಲು ಸಾಕಾದಷ್ಟು ಸಂಸ್ಕೃತಿಯಿಲ್ಲವೆಂಬ ಭಾವನೆಯಿರಬಹುದು. ಹಾಗಿದ್ದರೂ ಅವರನ್ನು ತಮ್ಮ ಮಟ್ಟಕ್ಕೆ ಏರಿಸಿಕೊಳ್ಳುವುದು ತಮ್ಮ ಕರ್ತವ್ಯವೆಂಬುದನ್ನು ಮರೆತಿರುವರು. ಮನುಷ್ಯನಿಗೆ ಅನೇಕ ಕರ್ತವ್ಯಗಳುಂಟು. ಜೀವನಕ್ಕೋಸ್ಕರ ಅವನು ದುಡಿಯಬೇಕು. ಮನೆಯವರೊಡನೆ ಕೆಲವು ಘಂಟೆಗಳನ್ನು ಕಳೆಯಬೇಕು. ಸ್ನೇಹಿತರಿಗಾಗಿ ಕೆಲವುಕಾಲ ಮೀಸಲಿಡಬೇಕು. ಆಫೀಸು ಕ್ಲಬ್ಬುಗಳಲ್ಲಿ ಜೀವನಕ್ಕಾಗಿ ದುಡಿಯುವುದೂ ಸ್ನೇಹಿತರೊಡನೆ ಬೆರೆಯುವುದೂ ನೆರವೇರುತ್ತವೆ. ಆದರೆ ಮನೆಯವರೊಡನೆ ಒಂದು ಘಳಿಗೆಯೂ ಸಂತೋಷವಾಗಿ ಮಾತನಾಡಲು ಅವಕಾಶವಿಲ್ಲ. ಇದು ಅವರಿಗೆ ಅವರ ಕಾಲವನ್ನು ವಿಂಗಡಿಸಿಕೊಳ್ಳಲು ತಿಳಿಯುವುದಿಲ್ಲವೆಂದು ತೋರುತ್ತದೆ. ನಾನು ಇದನ್ನು ಗಂಡಸರ ತಪ್ಪೆಂದೂ, ಅವರು ಅದನ್ನು ತಿದ್ದಿಕೊಳ್ಳಬೇಕೆಂದೂ ಒಪ್ಪಿಕೊಳ್ಳುತ್ತೇನೆ.

ಇನ್ನೂ ಕೆಲವು ಬಗೆಯ ಜನರಿದ್ದಾರೆ. ಹೆಂಗಸರನ್ನು ಬಹಳ ನಿಕೃಷ್ಟವಾಗಿ ಕಾಣುತ್ತಾರೆ. ಸರಿಯಾಗಿ ಹೇಳಬೇಕಾದರೆ, ಕಾಲಿನ ಕಸಕ್ಕಿಂತ ಕಡೆಯಾಗಿ ಕಾಣುತ್ತಾರೆ. ಇದೂ ಕೂಡ ತಪ್ಪು. ಹೆಂಗಸಿಗೆ ಗಂಡಸಿಗೆ ಸಮಾನವಾದ ಸ್ಥಾನವಿರಬೇಕು. ಮನೆಯ ಕೆಲವು ವಿಷಯಗಳಲ್ಲಿ ಹೆಂಗಸಿನ ಅಧಿಕಾರಕ್ಕೆ ಪ್ರತಿಯಿಲ್ಲ, ಉಳಿದ ಕೆಲವು ವಿಷಯಗಳಲ್ಲಿ ಗಂಡಸಿಗೆ ಪೂರ್ಣ ಜವಾಬ್ದಾರಿ. ಒಂದೇ ವಿಷಯದಲ್ಲಿ ಇಬ್ಬರಿಗೆ ಪೂರ್ಣ ಅಧಿಕಾರ ಇರುವುದು ಹೇಗೆ ಸಾಧ್ಯ? ಪೇಟೆಯಲ್ಲಿ ಹೋಗುವಾಗ ಗಂಡ ಮುಂದೆ ಹೋಗಬಹುದು, ಹೆಂಗಸು ಹಿಂದೆ ಹೋಗಬಹುದು. ಅಡಿಗೆ ಮನೆಯಲ್ಲಿ ಹೆಂಗಸು ಮಣೆ ಹಾಕಿದ ಕಡೆ ಗಂಡಸು ಕುಳಿತುಕೊಳ್ಳಬೇಕು; ಮರು ಮಾತನಾಡುವಂತಿಲ್ಲ. ಹೊರಗೆ ಗಂಡಸು ತನಗಿಷ್ಟಬಂದಂತೆ ಗಟ್ಟಿಯಾಗಿ ಮಾತನಾಡಬಹುದು. ಮನೆಗೆ ಬಂದಾಗ ಹೆಂಡತಿ, " ಮಗು ಮಲಗಿದೆ,

ಮೆತ್ತಗೆ ಮಾತನಾಡಿ ಅಂದರೆ" ಎಂದು ಹೇಳಿದರೆ ಮೆತ್ತಗೆ ಮಾತನಾಡ ಬೇಕು. ಇದು ಕೆಲಸಗಳು ಸುಸೂತ್ರವಾಗಿ ನಡೆಯಲು ಮಾಡಿಕೊಂಡಿರುವ ಏರ್ಪಾಡು. ಇಬ್ಬರಿಗೂ ಒಂದೊಂದು ವಿಷಯದಲ್ಲಿ ಪೂರ್ಣ ಅಧಿಕಾರ. ಇಬ್ಬರೂ ತಮ್ಮ ತಮ್ಮ ಕೆಲಸಗಳನ್ನು ಸರಿಯಾಗಿ ನಡೆಸಿದಲ್ಲಿ ಸಂಸಾರ ಸುಗಮವಾಗಿ ಮುಂದೆ ಸಾಗುತ್ತದೆ. ಗಂಡಸು ಹೆಂಗಸು ಇಬ್ಬರೂ ಇದನ್ನು ತಿಳಿದುಕೊಳ್ಳಬೇಕು.

ನೋಡೋಣ, ನಾವಿಬ್ಬರೂ ಹೇಗಿರುವೆವೋ ಎಂಬುದನ್ನ.

ಇತಿ, ನಿನ್ನ ಪ್ರಿಯಪತಿ.

## ೧೮

ವಿಶಾಲೀ,

ಹಿಂದಿನ ಕಾಗದದಲ್ಲಿ—ಕೆಲವರು ತಮ್ಮ ಹೆಂಡತಿಯರನ್ನು, ನಿಜವಾಗಿಯೂ ಹೇಳಬೇಕಾದರೆ, 'ಕಾಲಡಿಯ ಕಸಕ್ಕಿಂತ ಕಡೆ' ಯಾಗಿ ಕಾಣುವರೆಂದು ಬರೆದಿದ್ದೆ. ಏಕೆ ಹೀಗಿರಬಹುದೆಂಬುದರ ವಿಷಯವಾಗಿ ಮಾತ್ರ ಆಲೋಚಿಸಿರಲಿಲ್ಲ.

ನೆನ್ನೆ ನಾನು ಆಚೆ ಬೀದಿಯಲ್ಲಿರುವ ನಮ್ಮ ಮಾವನ ಮನೆಗೆ ಹೋಗಿದ್ದೆ. ಮಾವನೆಂದರೆ ಇನ್ನೊಂದು ಮದುವೆಯಾಗಿದೆಯೆಂದು ಗಾಬರಿ ಬೀಳಬೇಡ. ಅವರು ನಮ್ಮ ಜನವೇ ಅಲ್ಲ; ಧೈರ್ಯವಾಗಿರು. ಹಳ್ಳಿಯಲ್ಲಿರುವವರೆಲ್ಲರಿಗೂ ಸಾಮಾನ್ಯವಾಗಿ ನಾಲ್ಕೈದು ಜನ ಅತ್ತೆ ಮಾವಂದಿರಿರುವರು. ಹಾಗೆ ನನಗೂ ಅಂತಹವರಿಬ್ಬರು ಮಾವಂದಿರಿದ್ದಾರೆ. ಆದರೆ ಇಬ್ಬರು ಮಾವಂದಿರಿಗೂ ಒಂದು ದೊಡ್ಡ ವ್ಯತ್ಯಾಸವಿದೆ. ಇಬ್ಬರೂ ಅಣ್ಣತಮ್ಮಂದಿರು. ಒಬ್ಬ ತಂದೆಯ ಮಕ್ಕಳು. ಸರಿಪಾಲು ತೆಗೆದುಕೊಂಡು ನೆಮ್ಮದಿಯಾಗಿರುವರು. ಆದರೂ ಅಣ್ಣನವರು ಏನು ಮಾಡಬೇಕಾದರೂ ತಮ್ಮ ಹೆಂಡತಿಯಲ್ಲಿ ಹೇಳಿ ಕೇಳಿ—ಏಕೆ, ಹೆಂಡತಿ ಹೇಳಿದಂತೆ—ಮಾಡುವರು. ತಮ್ಮ ಮಾತ್ರ ತನ್ನ ಹೆಂಡತಿಯನ್ನು ಹೇಳಿದಂತೆ ಕೇಳುವ ಸ್ಥಿತಿಯಲ್ಲಿಟ್ಟಿದ್ದಾನೆ. ಕಾರಣವಿನ್ನೇನೂ ಇಲ್ಲ.

ನಮ್ಮ ದೊಡ್ಡ ಮಾವನ ಹೆಂಡತಿ—ದೊಡ್ಡತ್ತೆ—ಸ್ವಲ್ಪ ದೊಡ್ಡ ಮನುಷ್ಯರ ಮನೆಯವಳು. ಅವರಣ್ಣ ಅಮಲ್ದಾರರು. ಚಿಕ್ಕಮಾವನ ಹೆಂಡತಿ—ಚಿಕ್ಕತ್ತೆ—ಸ್ವಲ್ಪ ನಮ್ಮಂತಹವರ ಮನೆ ಹೆಣ್ಣು ಮಗಳು. ದೊಡ್ಡತ್ತೆ ದೊಡ್ಡವರ ಮನೆಯವಳಾಗಿ, ಅಮಲ್ದಾರರ ತಂಗಿಯಾಗಿದ್ದು ಗಂಡನ ಮನೆಗೇನೂ ಆನೆ ಮೇಲೆ ಅಷ್ಟೈಶ್ವರ್ಯ ಹೊರಿಸಿಕೊಂಡು ಬರಲಿಲ್ಲ. ಚಿಕ್ಕತ್ತೆ ಬಡವರ ಮನೆಯವಳಾಗಿ ತರಬೇಕಾದ್ದೊಂದೂ ಕಡಮೆ ಮಾಡಿಲ್ಲ. ಇನ್ನೂ ಚಿಕ್ಕತ್ತೆಯೇ ಕೆಲಸ ಅಚ್ಚುಕಟ್ಟಾಗಿ ಮಾಡುತ್ತಾರೆ. ಆದರೂ ಅದೇನೋ ದೊಡ್ಡತ್ತೆಯಷ್ಟು ಚಿಕ್ಕತ್ತೆ ಗಂಡನ ಮೇಲೆ ಅಧಿಕಾರ ಇಡಲಾಗಲಿಲ್ಲ. ನನಗಿದರ ಗುಟ್ಟಿಷ್ಟೇ ಅಂತ ಕಾಣುತ್ತದೆ. ದೊಡ್ಡತ್ತೆಗೆ ಸ್ವಲ್ಪ, ನಿಜವಾಗಿಲ್ಲದಿದ್ದರೆ ಹೆಸರಿಗಾದರೂ, ಒಂದು ಬೆಲೆ ಇದೆ. ಅದು ಚಿಕ್ಕತ್ತೆಗಿಲ್ಲ. ಹೆಂಗಸರಿಗೆ ನಿಜವಾಗಿಯೂ ಒಂದು ಬೆಲೆಯಿದ್ದಿದ್ದರೆ ಗಂಡಸರು ಇಷ್ಟು ಅಲಕ್ಷ್ಯವಾಗಿ ಕಾಣುತ್ತಿರಲಿಲ್ಲವೆಂದು ತೋರುತ್ತದೆ. ಹೇಗೆ ಈ ಬೆಲೆಕೊಡುವುದು? ಅಪ್ಪನ ಆಸ್ತಿಯಲ್ಲಿ ಮಗಳಿಗೂ ಒಂದುಪಾಲು ಬರುವ ಹಾಗಾಗಿದ್ದರೆ ಈ ಬೆಲೆ ಬರುತ್ತಿತ್ತಲ್ಲವೆ? ಅಂತಹ ಕಾನೂನಿಲ್ಲದಿರುವುದರಿಂದಲ್ಲವೆ ನಮ್ಮ ಹಿಂದೂ ಸಮಾಜದಲ್ಲಿ ಮಾತ್ರ ಹೆಂಗಸರಿಗೆ ಅಷ್ಟು ಸ್ವಾತಂತ್ರ್ಯವಿಲ್ಲದ ಹಾಗಾಗಿರುವುದು?

ಈ ವಿಷಯದಲ್ಲಿ ನೀನು ಏನು ಹೇಳುವೆ?

ಇಂತು ನಿನ್ನ ಪ್ರಿಯಪತಿ.

## ೧೯

ವಿಶಾಲೀ,

ಇದುವರೆಗೂ ನೀನು ಏನು ಬರೆಯಬಹುದೆಂದು ಮನಸ್ಸಿನಲ್ಲೇ ಯೋಚಿಸುತ್ತ ಕಾಗದವನ್ನು ನಿರೀಕ್ಷಿಸುತ್ತಿದ್ದೆ. ನಿನ್ನ ಕಾಗದ ನೋಡಿದ ಮೇಲೆ ನಾನೇನು ಆ ವಿಷಯದಲ್ಲಿ ಮತ್ತೆ ಮಾತನಾಡುವಂತೆಯೇ ಇಲ್ಲ.

"ಅಂತಹ ಕಾನೂನೇನಾದರೂ ಬಂದರೂ ನಾನು ನಿಮಗೆ ಆಸ್ತಿ ತರುವ ಹಾಗಿಲ್ಲ" ಎಂದು ಬರೆದಿದ್ದೀಯೆ. "ಆದ್ದರಿಂದ ಈ ವಿಷಯವಾಗಿ ನಾವಿಬ್ಬರೂ ಯೋಚಿಸಬೇಕಾದ ಆವಶ್ಯಕತೆ ಇಲ್ಲ. ನಾನು ನಿನ್ನಿಂದ ಆಸ್ತಿ ಸಂಪಾದಿಸಬೇಕೆಂದು ಆಸೆಪಟ್ಟದ್ದೇನೆ ಎಂದು ತಿಳಿದುಕೊಂಡೆಯಾ?

ಆಮೇಲೆ "ತಂದರೆ ದೊಡ್ಡತ್ತೆ ಇಲ್ಲದಿದ್ದರೆ ಚಿಕ್ಕತ್ತೆ ಮಾಡುತ್ತೀರೇನು" ಎಂದು ಕೇಳಿದೀಯೆ. ನೀನು ನನ್ನ ವಿಷಯದಲ್ಲಿ ಹೀಗೆ ತಿಳಿದುಕೊಂಡಿರುತ್ತೀಯೆಂತ ನಾನು ಖಂಡಿತ ನಂಬಿರಲಿಲ್ಲ. ನೀನು ಈಚೆಗೆ ಬಹಳ ಬುದ್ಧಿವಂತೆಯಾಗಿಬಿಟ್ಟೆ. ಹೀಗೆ ಇನ್ನೇನಾದರೂ ನಿನ್ನ ಬುದ್ಧಿ ಬೆಳೆಯುತ್ತಿದ್ದರೆ ಬಹಳ ಕಷ್ಟ.

ಹೋಗಲಿ, ನೀನು ಹೇಳಿದ ಹಾಗೆ ನಾನಿನ್ನು ಹೆಚ್ಚಿಗೆ ಆ ವಿಷಯ ಮಾತಾಡುವುದಿಲ್ಲ. ಆದರೆ ನೀನು ಆಸ್ತಿ ತರದಿದ್ದುದರಿಂದ ನಿನ್ನನ್ನು ನಾನು ಹೆಚ್ಚಿಗೆ ಪ್ರೀತಿಸುವುದಿಲ್ಲ ಎಂದು ಮಾತ್ರ ತಿಳಿದುಕೊಳ್ಳಬೇಡ. ನಾನು ನಿನ್ನನ್ನೇ ಹೊರತು ನೀನು ತರುವ ಆಸ್ತಿಯನ್ನಲ್ಲ ಮದುವೆಯಾಗಲು ಆಶಿಸಿದುದು.

ಇತಿ ನಿನ್ನವ.

## ೨೦

ವಿಶಾಲಾಕ್ಷೀ,

ನೆನ್ನೆ ಸಾಯಂಕಾಲ ನನ್ನ ಸ್ನೇಹಿತರಾರೂ ಸಿಕ್ಕಲಿಲ್ಲ. ನಾನು ಒಬ್ಬಂಟಿಗನಾದೆ. ಆದರೆ ಮನೆಯಲ್ಲಿರುವುದಕ್ಕೆ ಮನಸ್ಸು ಬರಲಿಲ್ಲ. ನಮ್ಮೂರ ಕೆರೆಯ ಏರಿಯ ಮೇಲೆ ವಾಕಿಂಗ್ ಹೊರಟೆ. ಸೂರ್ಯನು ಆಗತಾನೆ ಮುಳುಗುತ್ತಿದ್ದ. ಸಾಯಂಕಾಲದ ಗಾಳಿಗೆ ನೀರು ಸಣ್ಣ ಸಣ್ಣ ಅಲೆ ಅಲೆಯಾಗಿ ದಡಕ್ಕೆ ಬಡಿಯುತ್ತಿತ್ತು. ತೇಲುತ್ತಿದ್ದ ಹಕ್ಕಿಗಳು ನೀರಿನಲ್ಲಿ ಉಯ್ಯಾಲಾಡುತ್ತಿದ್ದಂತೆ ತೋರುತ್ತಿತ್ತು, ಮತ್ತೊಂದು ಕಡೆ ಗದ್ದೆಗಳು; ಬತ್ತದ ಪೈರುಗಳು ಕೊಯ್ಲಿಗೆ ಬಂದಿದ್ದವು. ಅದರ ಮೇಲೆ ಗಾಳಿ ಬೀಸಿದಾಗಲೆಲ್ಲ ಅಲೆಗಳಂತೆ ಗಿಡಗಳೆಲ್ಲ ಬಾಗಿ ಏಳುತ್ತಿದ್ದವು. ಆದರೂ ನನ್ನ ಮನಸ್ಸಿಗೇನೋ ಸಂತೋಷವಿಲ್ಲ. ಸುಮ್ಮನೆ ಬರುಗಣ್ಣಿನಿಂದ ಅದೆಲ್ಲವನ್ನೂ ನೋಡುತ್ತ ಮುಂದೆ ಹೋದೆ. ಯಾರೋ ಮಾತನಾಡಿ ನಕ್ಕ ಶಬ್ದ ಕೇಳಿಸಿತು. ಇನ್ನೂ ಮುಂದೆ ಹೋದೆ. ಕೋಡಿಯಾಚೆ ನೀರಿಲ್ಲದ ಒಣಗಿದ ಒಂದು ಮರಳು ತುಂಬಿದ ಕಾಲುವೆಯಿದೆ; ಕಾಲುವೆಯೆರಡು ಪಕ್ಕಕ್ಕೂ ಕಾಡು ಗಿಡಗಳು, ಬಳ್ಳಿಗಳು ಬೆಳೆದಿವೆ. ಅಲ್ಲಿ ಒಬ್ಬ ಹುಡುಗ ಮತ್ತು ಹುಡುಗಿ ಕುಳಿತಿದ್ದರು. ಹುಡುಗಿ ನಮ್ಮೂರ ರಾಮರಾಯರ

ಮಗಳು. ಹುಡುಗ ಆಕೆಯ ಗಂಡ. ಅವರಿಬ್ಬರನ್ನೂ ನೋಡಿದ ಮೇಲೆ ನಾನು ಅಲ್ಲಿ ನಿಲ್ಲಲೇ ಇಲ್ಲ. ಹೊರಟುಬಂದೆ. ನೀನೂ ನನ್ನ ಜೊತೆಯಲ್ಲಿ ಆಗ ಇದ್ದಿದ್ದರೆ ಸಂತೋಷದಲ್ಲಿ ಅವರಿಗೇನಾದರೂ ಕಡಿಮೆಯಾಗಿರುತ್ತಿದ್ದೆವೆ? ನಮ್ಮೂರಿಗೆ ಬಂದಾಗ ನಿನಗೆ ಆ ಜಾಗವನ್ನು ತೋರಿಸುತ್ತೇನೆ.

ನೀನು ಪೇಪರು ಪುಸ್ತಕಗಳನ್ನೋದುತ್ತಿರುವುದು ಸಂತೋಷ. ಸದ್ಯದಲ್ಲಿ ನಿಮ್ಮೂರಿಗೆ ಒಂದು ಬಾರಿ ಬರಲೇ?

ಇತಿ ನಿನ್ನವ.

## ೨೧

ವಿಶಾಲೀ,

ಈಗ ಎರಡು ಮೂರುದಿನಗಳ ಹಿಂದೆ ನಮ್ಮೂರು ಮೋಟಾರು ಸ್ಟ್ಯಾಂಡಿನ ಹೋಟಲಿನಲ್ಲಿ ಕುಳಿತಿದ್ದೆ. ಹೋಟಲಿನ ಮಾಲೀಕರು ನನಗೆ ಗುರುತು. ಏನೋ ಮಾತನಾಡುತ್ತಿದ್ದಂತೆ ಒಬ್ಬ ಹೆಂಗಸು ಒಂದು ಮಗುವನ್ನು ಎತ್ತಿಕೊಂಡು ಬಂದು ಹುಡುಗನನ್ನು ನಡೆಸಿಕೊಂಡು ಒಳಗೆ ಬಂದಳು. ಒಂದು ಬದಿಯಲ್ಲಿ ಸಂಕೋಚದಿಂದ ನಿಂತು,

"ಒಂದು ರೂಪಾಯಿನ ಚಿಲ್ಲರೆ ಕೊಡಿ" ಎಂದು ಕೇಳಿದಳು. ಚಿಲ್ಲರೆ ಕೊಟ್ಟಾಯಿತು.

"ನಾನು ಮೈಸೂರಿಗೆ ಹೋಗಬೇಕು. ನೋಡಿ, ಬಾಡಿಗೆ ಒಂದು ರೂಪಾಯಿ ಕೇಳುತ್ತಾರೆ" ಎಂದು ಹೇಳಿದಳು.

"ಮೈಸೂರಿಗೆ ಹನ್ನೆರಡಾಣೆ ಛಾರ್ಜು. ಒಂದು ರೂಪಾಯಿ ಇಲ್ಲ, ಏನೂ ಇಲ್ಲ" ಎಂದೆ ನಾನು.

"ಇಲ್ಲ, ಆತ ಒಂದು ರೂಪಾಯಿ ಕೇಳುತ್ತಾನೆ" ಎಂದು ಏಜಂಟಿನ ಕಡೆಗೆ ಕೈ ತೋರಿಸಿದರು.

ನನ್ನ ಸ್ನೇಹಿತನೂ ನನ್ನ ಕಡೆ ನೋಡಿದ. ಯಾತಕ್ಕೆ ಈ ಹೆಂಗಸಿಗೆ ನಾಲ್ಕಾಣೆ ಹೋಗಬೇಕೆಂದುಕೊಂಡು "ನಾವು ಹನ್ನೆರಡಾಣೆಗೆ ಕೊಡಿಸುತ್ತೇವೆ; ಸುಮ್ಮನಿರಿ" ಎಂದೆವು.

"ಸದ್ಯ ಅಷ್ಟು ಮಾಡಿರಪ್ಪ; ಐದು ಮೈಲಿ ದೂರ ಹಳ್ಳಿಯಿಂದ ಬಂದೆ. ಇವತ್ತು ೧೨ ಘಂಟೆಗೆ ಮೈಸೂರಿಗೆ ಹೋಗಬೇಕು" ಎಂದರು.

ಹೋಮದ ಬೆಂಕಿಗೂ ನನ್ನ ಮೇಲೆ ಕೋಪ; ನಿನ್ನನ್ನು ನೋಡಬೇಕೆಂದು ಬಯಸಿದಾಗ ಕಣ್ಣುತುಂಬ ಹೊಗೆ. ಆಮೇಲೆ ನೀನು ಅಡಿಗೆ ಮನೆಯಲ್ಲಿ, ನಾನು ರೂಮಿನಲ್ಲಿ; ಆದರೂ ನೀನು ನನ್ನವಳು.

ಇನ್ನು ಮುಂದೆ ನಾವಿಬ್ಬರೂ ಒಂದೆ. ಎಂಟು ದಿನಗಳ ಹಿಂದೆ ನೀನು ನನಗೆ ಯಾರೋ! ನಾನು ನಿನಗೆ ಯಾರೋ! ಆದರೆ ಈಗ ನಾವು ಇಬ್ಬರೂ ಒಂದೆ. ನಮಗೆ ಮದುವೆಯ ಮಂತ್ರಗಳು ಅರ್ಥವಾಗದೆ ಇರಬಹುದು; ಇಲ್ಲವೇ ಜೋಯಿಸರು ತಪ್ಪು ಹೇಳಿಸಿರಬಹುದು; ಅಥವಾ ಬಿಟ್ಟಿರಬಹುದು. ಆ ಮಂತ್ರಗಳು ತಿಳಿಯದೆಯೂ ನಮ್ಮೆರಡು ಹೃದಯಗಳೂ ಅವುಗಳನ್ನು ಅರ್ಥಮಾಡಿಕೊಂಡಿವೆಯೆಂದು ನನಗೆ ಅನ್ನಿಸುತ್ತದೆ. ಸ್ವಲ್ಪ ದಿನಗಳ ಮೇಲೆ ನಾವಿಬ್ಬರೂ ಕಲೆತು ಸಂಸಾರವನ್ನು ನಡೆಸಬೇಕಾಗುತ್ತದೆ. ಇಬ್ಬರ ಮನಸ್ಸೂ ಒಂದಾದರೆ ಇಬ್ಬರಿಗೂ ಆನಂದವೂ ಸುಖವೂ ಉಂಟು. ಹಾಗಾಗಬೇಕಾದರೆ ಒಬ್ಬರನ್ನೊಬ್ಬರು ತಿಳಿದುಕೊಳ್ಳಬೇಕು. ಸಲಿಗೆ ಹೆಚ್ಚಬೇಕು.

ಅದಕ್ಕೋಸ್ಕರವೇ, ನೀನು ಕಾಗದ ಬರೆಯಬೇಕೆಂದು ನಾನು ಬರುವಾಗ ನಿನಗೆ ತಿಳಿಸಿದುದು; ನಾನು ಬರೆಯಲು ಪ್ರಾರಂಭಿಸಿರುವುದು. ಪ್ರತಿ ಗುರುವಾರವೂ ಒಂದೊಂದು ಕಾಗದ ಬರೆಯುತ್ತೇನೆ. ನೀನು ಅದಕ್ಕೆ ಆದಷ್ಟು ಬೇಗ, ಕೊನೆಯಪಕ್ಷ ಬುಧವಾರವಾದರೂ ಇಲ್ಲಿಗೆ ಬರುವಂತೆ, ಕಾಗದಗಳನ್ನು ಬರೆಯಬೇಕು.

ಇದರೊಳಗೆ ನನ್ನ ವಿಳಾಸವನ್ನು ಬರೆದಿರುವ ಒಂದು ಕವರು ಇಟ್ಟಿದ್ದೇನೆ. ಇದು ನಿನ್ನ ತೊಂದರೆ ಕಡಮೆಮಾಡುವುಕ್ಕಾಗಿ.

ಇತಿ ನಿನ್ನ ಪ್ರಿಯ ಪತಿ.

## ೨

ಮುದ್ದು ವಿಶಾಲೀ—

ನಿನ್ನ ಕಾಗದ ಬರುವುದೆಂದು ನೆನ್ನೆ ಅಂಚೆಯ ಮನೆಗೆ ಹೋಗಿದ್ದೆ; ಕಾಗದ ಬರಲಿಲ್ಲ. ಬಹಳ ಕೋಪ ಬಂತು. ಕೂಡಲೆ ಈ ಕಾಗದ ಬರೆದಿದ್ದೇನೆ. ಇದಕ್ಕೂ ಉತ್ತರ ಬರದಿದ್ದರೆ ಕಾಗದ ಬರೆಯುವುದನ್ನು ನಿಲ್ಲಿಸುತ್ತೇನೆ. ವಿಳಾಸ ಬರೆದಿದ್ದ ಒಂದು ಕವರನ್ನಿಟ್ಟು ಕಳುಹಿಸಿದರೂ ಒಂದು

ಹೆದರಿಕೆ. ಸ್ವಲ್ಪ ಧೈರ್ಯವಿರಬೇಕು. ಅನಾವಶ್ಯಕವಾದ ಕಡೆಗಳಲ್ಲೂ ಹೆದರಿಕೊಳ್ಳುತ್ತಾರೆ. ಮೊನ್ನೆ ನಮ್ಮ ತಾಯಿ ಹರಿಕಥೆಗೆ ಬಂದಿದ್ದರು. ಮಧ್ಯೆ ಹಿಂತಿರುಗಬೇಕಾಯಿತು. ಹರಿಕಥೆಯಾಗುತ್ತಿದ್ದ ಸ್ಥಳದಿಂದ ನಮ್ಮ ಮನೆಗೆ ಸ್ವಲ್ಪ ಮಾತ್ರ ದೂರ. ಮಧ್ಯೆ ದಾರಿಯ ಎರಡು ಕಡೆಗಳಲ್ಲೂ ಮನೆಗಳಿವೆ. ಆದರೂ ಅವರಿಗೆ ಒಬ್ಬರೇ ಹೋಗಲು ಹೆದರಿಕೆ. ಒಟ್ಟಿನಲ್ಲಿ ನಮ್ಮ ಹೆಂಗಸರೆಲ್ಲಾ ಅಷ್ಟೆ.

"ದೀಪಾವಳಿಗೆ ಬನ್ನಿ. ನಮ್ಮಣ್ಣನೂ ಕಾಗದ ಬರೆಯುವರು" ಎಂದು ಬರೆದಿರುವೆ. ನೋಡುತ್ತೇನೆ, ಆದರೆ ಬರುತ್ತೇನೆ. ಮುಂದಲ ಕಾಗದದಲ್ಲಿ ಬರುವುದಕ್ಕೂ ಬಾರದಿರುವುದಕ್ಕೂ ಕಾಗದ ಬರೆಯುತ್ತೇನೆ.

ನಿನ್ನ ಪ್ರಿಯತಮ.

## ೨೨

ವಿಶಾಲೀ,

ನಿನ್ನನ್ನು ನಾನು ಏನೋ ಎಂದುಕೊಂಡಿದ್ದೆ; ಪರವಾಗಿಲ್ಲ; ಆಗಲೆ ದಬಾಯಿಸುವುದಕ್ಕೆ ಪ್ರಾರಂಭಿಸಿಬಿಟ್ಟೆ! ಈಗಲೇ ಇಷ್ಟಾದರೆ ಮುಂದೆ ಹೇಗೆ! ಎಂದು ನನಗೆ ಬಲು ಯೋಚನೆಯಾಗಿದೆ.

ಇರಲಿ, ಅದು ಹಾಗೇ. ಏನು! ಹೆಂಗಸರೊಡನೆ ಮಾತನಾಡುವುದೇ ತಪ್ಪೆ? ಯಾರೋ ಮಾತನಾಡಿಸಿದರೆ ಮಾತಾಡಬಾರದೆ? ಮೋಟಾರಿನಲ್ಲಿ ಕುಳಿತಿರುವ ಹೆಂಗಸರನ್ನೆಲ್ಲಾ ಮಾತನಾಡಿಸುತ್ತೇನೆಂದು ತಿಳಿದು ಕೊಂಡೆಯಾ? ಹೆಂಗಸರ ಕೂಡ ಮಾತಾಡಿದರೆ ತಪ್ಪೇನೂ ಇಲ್ಲ. ಅನಾ ವಶ್ಯಕವಾಗಿ ಬೇಕುಬೇಕೆಂದು ಮನಸ್ಸಿನಲ್ಲಿ ದುರಭಿಪ್ರಾಯವಿಟ್ಟುಕೊಂಡು ಮಾತಾಡಿಸಬಾರದು. ಮಾತಾಡುವುದರಲ್ಲೇ ಗೊತ್ತಾಗಬೇಕು ಎಂತಹ ಹೆಂಗಸೆನ್ನುವುದು.

ಮೊನ್ನೆ ಯಾವುದೋ ಒಂದು ಅಂಗಡಿಯಲ್ಲಿ ಕುಳಿತಿದ್ದೆ. ಯಾವನೋ ಪೋಲಿ ಹುಡುಗ ತನ್ನ ಅನುಭವವನ್ನು ಅಂಗಡಿಯವ ನೊಡನೆ ಹೇಳುತ್ತಿದ್ದ. ಅವನು ಅದಾರದೋ ಮನೆಗೆ ಹೋಗಿದ್ದನಂತೆ. ಅವರ ಮನೆಯಲ್ಲೊಂದು ಹುಡುಗಿ ಚೆಲುವೆಯಾಗಿರುವವಳಿದ್ದಳಂತೆ.

ಅವನು ಅವಳನ್ನು ನೋಡಲೋಸುಗವೇ ಅವರ ಮನೆಗೆ ಹೋಗಿದ್ದ. ಕಾಫಿ ಕುಡಿಯುವ ವೇಳೆಗೆ ಸರಿಯಾಗಿ ಇವನು ಹೋಗಿದ್ದದ್ದರಿಂದ ಇವನಿಗೆ ಆ ಹುಡುಗಿಯೇ ಒಂದು ಲೋಟ ಕಾಫಿ, ಅವರ ತಂದೆ ಹೇಳಿದ ಮೇಲೆ, ತಂದುಕೊಟ್ಟಳಂತೆ. ಅವಳು ತಲೆ ಬಗ್ಗಿಸಿಕೊಂಡು ಬಂದು ತಂದಿಟ್ಟು ವಿನಯವಾಗಿ ಒಳಕ್ಕೆ ಹೋದುದನ್ನು ಕಂಡು ಇವನಿಗೇ ವ್ಯಥೆಯಾಯಿತಂತೆ. ಹಾಗಿರಬೇಕು ಹೆಂಗಸಿನ ಚರ್ಯೆ. ಕೆಟ್ಟಭಾವನೆಯಿರುವವರೂ ತಮ್ಮ ಭಾವನೆಗಾಗಿ ತಾವೇ ಮರುಗಬೇಕು.—ಅಂತಹ ವರ್ತನೆ ನಮ್ಮ ಹೆಂಗಸರಲ್ಲಿರಬೇಕು.

ಇನ್ನೊಂದು ತರದ ವರ್ತನೆಯಿದೆ. ಇದು ಅಸಡ್ಡೆಯಿಂದಿರುವವರ ಮನಸ್ಸಿನಲ್ಲಿ ಕೂಡ ಒಂದು ರೀತಿಯ ಉದ್ರೇಕವನ್ನುಂಟುಮಾಡುವುದು. ಇದೇ ಬೆಡಗು, ಬಿನ್ನಾಣ. ಇದನ್ನೇ ಥಳಕು ಎಂದು ಕರೆಯುವುದು.

ಸಹಜವಾದ ವರ್ತನೆಯು ನಮ್ಮ ಹೆಂಗಸರಲ್ಲಿರಬೇಕು.

ನಾನು ನಾಡಿದ್ದು ಬಸ್ಸಿನಲ್ಲಿ ಬರುತ್ತೇನೆ. ಬಸ್ಸಿನ ಬಳಿಗೆ ಯಾರಾದರೂ ಬಂದರೆ ಅನುಕೂಲ. ನಿನ್ನನ್ನು ನೆನಸಿಕೊಂಡರೆ ನಾಡಿದ್ದು ಇವತ್ತೇ ಯಾಕೆ ಆಗಲಿಲ್ಲವೋ ಎನ್ನಿಸುತ್ತದೆ. ಆಗಲಿ, ಹೇಗಿದ್ದರೂ ನಾಡಿದ್ದು ಸಾಯಂಕಾಲ ಅಲ್ಲೇ ಇರುವೆನಲ್ಲ.

ಇತಿ ನಿನ್ನವ.

೨೩

ವಿಶಾಲೀ,

ನೀನು ಕಾಗದ ಬರೆಯುವುದನ್ನು ನೋಡಿ ನೀನು ಉಳಿದ ಹುಡುಗಿಯರಂತಿಲ್ಲವೆಂದು ತಿಳಿದುಕೊಂಡು ಒಂದು ಮೂರು ದಿನ ನಿನ್ನ ಜೊತೆಯಲ್ಲಿ ಸ್ವಲ್ಪ ಆಟವಾಡುತ್ತಾ ಕಾಲ ಕಳೆಯೋಣವೆಂದು ಬಂದೆ. ಆದರೆ ನಿನಗೆ ನಾನು ಬಂದದ್ದು ಇಷ್ಟವಿರಲಿಲ್ಲವೆಂದು ಕಾಣುತ್ತದೆ. ಹಾಗಿದ್ದ ಮೇಲೆ ಬನ್ನಿ ಎಂದೇತಕ್ಕೆ ಬರೆದೆ?

ನನ್ನನ್ನು ಕಂಡರೆ ಹೆದರಿಕೆಯೇ? ಒಂದು ರೂಮಿನಲ್ಲಿ ಕುಳಿತಿದ್ದರೆ ಏನು ಮಾಡಿಬಿಡುತ್ತಿದ್ದೆ? ತಲೆಯನ್ನೇ ಇತ್ತಲಾಗಿ ಹಾಕಲಿಲ್ಲವಲ್ಲ! ಪಾಪ, ಇನ್ನೂ ಎಳೆಯ ಮಗು. ನಿಮ್ಮ ತಾಯಿಯನ್ನು ಬಿಟ್ಟುಬರಲಾಗ

ಲಿಲ್ಲ. ನಾನು ಮಧ್ಯಾಹ್ನ ಎದ್ದು ಮುಖ ತೊಳೆದುಕೊಳ್ಳುವುದಕ್ಕೆ ಹೋದಾಗ ಕೊಠಡಿಯಲ್ಲಿ ಕಾಫಿ ತಿಂಡಿ ಇಟ್ಟು ಓಡಿಹೋಗುತ್ತಿದ್ದೆಯಲ್ಲಾ, ಇದು ಸರಿಯೋ? ನನ್ನನ್ನು ಬಾ ಎಂದು ಬರೆದು ಕರೆಸಿ ಹೀಗೆ ಅವಮಾನ ಮಾಡುವುದು ನ್ಯಾಯವೋ?

ಮೋಟಾರಿನಲ್ಲಿ ಬರುತ್ತಿದ್ದಾಗಲೆ ಲೆಕ್ಕ ಹಾಕುತ್ತಿದ್ದೆನಲ್ಲ: ಅಯ್ಯೋ, ನನ್ನ ಹುಚ್ಚೀ! ಏನೇನು ಯೋಚನೆ ಮಾಡುತ್ತಿದ್ದೆ, ಗೊತ್ತೇ? ನೀನು ಎರಡು ಮೂರು ಕಾಗದ ಜೋರಾಗಿ ಬರೆದಿದ್ದೆ ನೋಡು, ಅದಕ್ಕೆ ನೀನು ಬಹಳ ಚಾಲೋಕಾಗಿರಬೇಕೆಂದುಕೊಂಡಿದ್ದೆ. ನಾನು ಮೋಟಾರಿನಿಂದ ಬರುವಾಗಲೇ ನೀನು ಬೀದಿಯ ಬಾಗಿಲಲ್ಲಿ ನಿಂತುಕೊಂಡು ನಾಚಿಕೆ ಯಿಂದ ನಗುತ್ತಾ ನಗುತ್ತಾ ನನ್ನನ್ನು ನಿರೀಕ್ಷಿಸುತ್ತಿರುವೆ ಎಂದು ತಿಳಿದು ಕೊಂಡಿದ್ದೆ. ಬಂದ ತಕ್ಷಣವೇ ನೋಡಿದೆ, ನಿನ್ನ ಸುಳಿವೇ ಇಲ್ಲ. ನಾನಿದ್ದಾಗ ನೀನು ಗಟ್ಟಿಯಾಗಿ ಮಾತನಾಡಲಿಲ್ಲವೆಂದು ಕಾಣುತ್ತದೆ. ನಿನ್ನ ಉಸಿರು ಸಹಿತ ನನಗೆ ಕೇಳಿಸಲಿಲ್ಲ. ಬೆಳಗ್ಗೆ ನೀನೇ ಕಾಫಿ ತರುವೆ, ಆಗ ಬಾಗಿಲ ಹಿಂದೆ ನಿಂತಿದ್ದು ಮೆಲ್ಲಗೆ ನಿನ್ನನ್ನು ಹಿಡಿದುಕೊಳ್ಳೋಣವೆಂದಿದ್ದೆ. ಮಧ್ಯಾಹ್ನ ಪಗಡೆಯನ್ನೊ ಇಲ್ಲವೇ ಇನ್ನೇನಾದರೂ ಆಟವನ್ನೊ ಆಡ ಬಹುದು ಎಂದುಕೊಂಡಿದ್ದೆ. ಎಲ್ಲಾ ಅಷ್ಟರಲ್ಲೇ ಮುಗಿಯಿತು. ನಿನ್ನ ದರ್ಶನವೇ ಸಿಕ್ಕುವ ಹಾಗಿಲ್ಲ, ಇನ್ನು ಇವೆಲ್ಲ ಎಲ್ಲಿ? ನೀನೆ ಯೋಚಿಸಿ ನೋಡು? ನೀನು ಹೀಗೆ ಮಾಡಿದ್ದು ನ್ಯಾಯವೇ ಎಂದು. ನನಗೆ ಮಾತ್ರ, ನಾನು ಬರದಿದ್ದರೆ ಚೆನ್ನಾಗಿತ್ತು ಅನ್ನಿಸುತ್ತದೆ.

ಕೊನೆಯ ಸಲ, ನಾನು ಹೊರಟು ಬರುವಾಗಲಾದರೂ ನೀನು ಹೊರ ಬಾಗಿಲ ಬಳಿ ಬರುವೆ ಎಂದುಕೊಂಡಿದ್ದೆ. ಅದೂ ಮಾಡಲಿಲ್ಲ ನೀನು. ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ. ಅದರರ್ಥ ಇದು: "ಸಾಯಂಕಾಲ ವಾಗುತ್ತಲೂ ತಾವರೆಗಳು ಮುಚ್ಚಿಕೊಂಡು ಬೆಳಗಾಗುತ್ತಲೂ ಅರಳುತ್ತ ವಂತೆ. ಹಾಗೆ ಮುಚ್ಚಿಕೊಳ್ಳುವಾಗ ಒಂದು ದುಂಬಿ ಒಳಗೆ ಸೇರಿಕೊಂಡು ಬಿಟ್ಟಿತಂತೆ. ಹೊರಕ್ಕೆ ಬರಲಾಗಲಿಲ್ಲ. ಆಗ ತಾನೇ ಹೇಳಿಕೊಂಡಿತಂತೆ. 'ಬೆಳಗಾಗುತ್ತದೆ. ಹೂವರಳುತ್ತದೆ. ಹೊರಕ್ಕೆ ಬಂದೇಬಿಡುವೆನು' ಎಂತ.

ಆದರೆ ಅಷ್ಟರಲ್ಲೆ ಒಂದು ಆನೆ ಬಂದು ಆ ತಾವರೆ ಗಿಡವನ್ನೇ ಬುಡಸಹಿತ ಕಿತ್ತುಹಾಕಿತಂತೆ."

ದುಂಬಿಪಾಡು ನನಗೆ ಬಂತಲ್ಲವೆ?

ನಿನ್ನವ.

೨೪

ವಿಶಾಲೀ,

ನಿನ್ನ ಕಾಗದ ಬಂತು. ಮನೆಗೆ ಬಂದಾಗ ಹಾಗೆ ಮಾಡಿದೆ. ಈಗ ಕಾಗದ ಕೂಡ ಬರೆಯುವುದಿಲ್ಲ, ಎಲ್ಲ ಸರಿಹೋಯ್ತು ಎಂದುಕೊಂಡಿದ್ದೆ. ಕಾಗದವನ್ನಾದರೂ ಬರೆಯುವಷ್ಟು ಮನಸ್ಸು ಮಾಡಿದೆಯಲ್ಲ!

ಅಯ್ಯೋ ಪಾಪ, ನಾಚಿಕೆ ಅಲ್ಲವೆ? ನಾನು ನಾಚಿಕೆಯೆಷ್ಟಿರಬೇಕೆಂದು ಬರೆದಿರಲಿಲ್ಲವೆ? ನೀನು ರೂಮಿನೊಳಕ್ಕೆ ಬಂದು ನಾಚಿಕೆ ತೋರಿಸಿದ್ದರೆ ಚೆನ್ನಾಗಿತ್ತು. ರೂಮಿನೊಳಕ್ಕೆ ಬಾರದಷ್ಟು ನಾಚಿಕೆಯಿದ್ದರೆ ಚೆನ್ನಾಗಿರುವುದಿಲ್ಲ. ರೂಮಿನೊಳಕ್ಕೆ ಬಂದು ಮುಖ ಕೆಂಪಗೆ ಮಾಡಿಕೊಂಡು, ಬೆವರಿಕೊಂಡು, ಕತ್ತುಬಗ್ಗಿಸಿಕೊಂಡು ನಗುತ್ತಾ ಮಾತಾಡಿದ್ದರೆ; ನಾನು ನಿನ್ನ ಕಡೆ ನೋಡಿದಾಗ ಮುಖ ತಿರುಗಿಸಿಕೊಂಡು ನಾನು ಬೇರೆ ಕಡೆ ನೋಡುತ್ತಿದ್ದಾಗ ನನ್ನ ಕಡೆ ನೋಡುತ್ತಿದ್ದರೆ; ಆ ನಾಚಿಕೆ ಬಹಳ ಚೆನ್ನಾಗಿರುತ್ತಿತ್ತು. ಆದರೆ ನೀನು ನನ್ನ ಹತ್ತಿರ ಸುಳಿಯಲೇ ಇಲ್ಲವಲ್ಲ! ಇದನ್ನ ಪ್ರೇಮವೆಂದು ಹೇಳೋಣವೊ ಅಥವಾ ಭಯವೆಂದು ಕರೆಯೋಣವೋ ನನಗೆ ತಿಳಿಯದು.

ನಾನು ಬಂದಾಗ ನೀನು ಹಿತ್ತಿಲ ಕಡೆಯಾದರೂ ಗೋಡೆ ಮರೆಯಲ್ಲಿ ನಿಂತು ನೋಡುತ್ತಿದ್ದೆಯಲ್ಲ! ನಾನು ಹೊರಟು ಬರುವಾಗ ನಾನಿದ್ದ ಮುಂದಲ ರೂಮಿನ ಕಿಟಕಿಯ ಕಡೆ ನೋಡದೆ ಎಂತಹ ತಪ್ಪು ಮಾಡಿದೆ ನಾನು! ನೀನಲ್ಲಿ ನಿಂತಿರಬಹುದೆಂದು ನಾನು ಯೋಚಿಸಲೇ ಇಲ್ಲವಲ್ಲ! ನೀನು ಬರುವುದಿಲ್ಲವೆಂದುಕೊಂಡು ಮನಸ್ಸಿನಲ್ಲಿ ನಿರ್ಧರಮಾಡಿಕೊಂಡಿದ್ದೆ; ಅದಕ್ಕೇ ನಾನು ಆ ಕಡೆ ನೋಡಲಿಲ್ಲ.

ನಾನು ಮಲಗಿದ್ದಾಗ ನೀನು ರೂಮಿನೊಳಕ್ಕೆ ಬಂದಿದ್ದೆಯಾ? ಒಳ್ಳೆ ಚಾಲಾಕು ಹುಡುಗಿ; ಪರವಾಗಿಲ್ಲ. ಆಗ ನೀನು ನನಗೆ ಸಿಕ್ಕಿದ್ದರೆ,

ಹೇಳದೆ ಕೇಳದೆ ಬಂದದ್ದಕ್ಕೆ, ಮುಂಚೆ ಬರದಿದ್ದಕ್ಕೆ, ತಕ್ಕ ಪಾಠ ಕಲಿಸುತ್ತಿದ್ದೆ. ಇರಲಿ, ಇನ್ನಾವಾಗಲಾದರೂ ಬಂದಾಗ ;ಇದೆಲ್ಲ ಸಿಟ್ಟು ಒಂದೇ ಸಲ ತೀರಿಸಿಕೊಳ್ಳುತ್ತೇನೆ, ಹುಷಾರಾಗಿರು.

ನಿನ್ನವ.

೨೫

ವಿಶಾಲೀ,

ನೀನು ಈ ಸಲದ ಕಾಗದದಲ್ಲೂ ನಾನು ಬಂದಾಗ ನೀನು ಮಾಡಿದುದಕ್ಕೆ—ಮನಸ್ಸಿಲ್ಲದೆ ಮಾಡಿದುದಕ್ಕೆ—ಬಹಳ ವ್ಯಥೆಪಟ್ಟುಕೊಂಡಿರುವೆ. ಹೋಗಲಿ ಬಿಡು. ಇನ್ನೊಂದು ಬಾರಿ ನಾನು ಬಂದಾಗ ಹಾಗೆ ಮಾಡದಿದ್ದರಾಯಿತು.

ನನ್ನ ಸ್ನೇಹಿತನೊಬ್ಬನಿದ್ದಾನೆ. ಅವನು ಈ ಸಲ ಅವನ ಮಾವನ ಮನೆಗೆ ದೀಪಾವಳಿಗೆ ಹೋಗಿದ್ದ. ಅವನ ಮಾವನಿರುವುದು ಮೈಸೂರಿನಲ್ಲಿ. ಅವನು ಅವನ ಹೆಂಡತಿ—ನಿನ್ನಷ್ಟೆ ವಯಸ್ಸಿರಬಹುದು—ಬಯಾಸ್ಕೋಪಿಗೆ ಹೋಗಿದ್ದರಂತೆ. ಬೃಂದಾವನವನ್ನು ನೋಡಲು ಕಟ್ಟೆಗೆ ಹೋಗಿದ್ದರಂತೆ. ಪಗಡೆ ಆಡಿದರಂತೆ. ಎರಡೆರಡು ರೂಪಾಯಿ ಜೂಜಿಟ್ಟಿದ್ದರಂತೆ. ಅವನು ಪಗಡೆ ಚೆನ್ನಾಗಿ ಆಡುತ್ತಾನೆ. ಆದರೂ ಮೂರು ಆಟ ಸೋತು ಆರು ರೂಪಾಯಿ ಕಳೆದುಕೊಂಡನಂತೆ. "ನಿನ್ನ ಹೆಂಡತಿ ಹಾಗಾದರೆ ಚೆನ್ನಾಗಿ ಆಟವಾಡುತ್ತಾಳೇನೋ?'' ಎಂದು ಕೇಳಿದೆ. "ಸುಮಾರಾಗಿ ಆಡುತ್ತಾಳಪ್ಪ. ನಾನೇನಾದರೂ ಗೆದ್ದುಬಿಟ್ಟರೆ ಅವಳು ಎಲ್ಲಿ ತಿರುಗಿ ಆಟಕ್ಕೆ ಬರುವುದಿಲ್ಲವೋ ಎಂದು ಸೋತುಹೋಗಿಬಿಟ್ಟೆ" ಎಂದ. ಅದೂ ಒಂದು ಸಂತೋಷವಂತೆ ಅವನಿಗೆ.

ನೋಡಿದೆಯಾ, ಮೈಸೂರು ಹುಡುಗಿ ಹೇಗಿರುವಳೆಂದು? ನೀನು ನಾಚಿಕೊಂಡು ಅಡಿಗೆಮನೆಗೆ ಓಡಿಹೋಗಿ ಅವಿತುಕೊಂಡೆಯಲ್ಲಾ! ನಿನಗೂ ಸುಲಭವಾಗಿ ಸಿಕ್ಕುತ್ತಿದ್ದ ೫-೬ ರೂಪಾಯಿಗಳನ್ನು ಕಳೆದುಕೊಂಡೆಯಲ್ಲ!

ನಿನ್ನವ.

೨೬

ವಿಶಾಲಾಕ್ಷೀ,

"ಬುದ್ಧಿ ನನಗೂ ಸ್ವಲ್ಪ ಇದೆ. ಪೂರ್ತಿ ದಡ್ಡಳಲ್ಲ. ನೀವು ಇನ್ನೊಂದು ಸಲ ಇಲ್ಲಿಗೆ ಬಂದಾಗಲೂ ದುಡ್ಡು ಇಟ್ಟು ಆಡುವುದಿಲ್ಲ"ವೆಂದು ಬರೆದಿದ್ದೀಯೆ. ಆರತಿಯಲ್ಲಿ ಬಂದ ದುಡ್ಡನ್ನು ಕಳೆದುಕೊಳ್ಳ ಬೇಕಾಗುವುದೇನೋ ಎಂದು ಹೆದರಿಕೊಂಡೆಯಾ? ಹೋಗಲಿ ದುಡ್ಡು ಬೇಡ; ಸುಮ್ಮನೆ ಆಡೋಣ. ದುಡ್ಡಿಲ್ಲದಿದ್ದರೆ ಇನ್ನೇನಾದರೂ ಜೂಜಿ ಡೋಣ. ಏನು ಹೇಳು. ಗೆದ್ದೋರಿಗೆ ಸೋತೋರು ಏನು ಕೊಡಬೇಕು ಹೇಳು. ಒಂದುಪಕ್ಷ ನೀನೇ ನನಗೆ ಸೋತುಹೋದರೆ ನಾನು ಏನು ಕೇಳ ಬಹುದು ಹೇಳು.

ನಮ್ಮ ಮನೆಯವರು ನಿನ್ನನ್ನು ಒಂದು ಸಲ ಇಲ್ಲಿಗೆ ಕರೆದುಕೊಂಡು ಬರಬೇಕೆಂದಿರುವರು. ನೀನು ಬರಬೇಕಾಗಬಹುದು. ನೀನು ಇಲ್ಲಿಗೆ ಬಂದಾಗ್ಗೆ ಹೇಗಿರಬೇಕೆಂಬ ವಿಷಯದಲ್ಲಿ ಒಂದೆರಡು ಮಾತು ಬರೆಯೋಣ ವೆನ್ನಿಸಿದೆ. ಅದನ್ನು ನಿಮ್ಮ ಮನೆಯವರೇ ಹೇಳಿಕೊಡಬಹುದು. ಆದರೂ ನೀನು ಹುಡುಗಿ. ಹುಚ್ಚು ಹುಚ್ಚು ಯೋಚನೆ ಇಟ್ಟುಕೊಂಡಿರಬಾರದು. ಅದಕ್ಕೋಸ್ಕರವೇ ಈ ಮಾತುಗಳನ್ನು ಬರೆಯುತ್ತಿರುವುದು. ನಾನು ಬರೆ ಯುತ್ತಿರುವುದನ್ನು ನೋಡಿ ನಮ್ಮಿಬ್ಬರಿಗೂ ಊಟ, ತಿಂಡಿ, ಆಟ, ಹರಟೆ ಬಿಟ್ಟು ಬೇರೆ ಕೆಲಸವಿಲ್ಲವೆಂದು ತಿಳಿದುಕೊಳ್ಳಬಾರದು. ನಾನೇನಾದರೂ ಹಾಗೆ ಮಾಡದೇ ಹೋದರೆ ನಿನ್ನಲ್ಲಿ ನನಗೆ ಪ್ರೀತಿಯಿಲ್ಲವೆಂದು ನೀನು ಮುನಿಸಿಕೊಳ್ಳಬಾರದು. ಪ್ರೇಮವೆಂದರೆ ನಾವಿಬ್ಬರೇ ಸಂತೋಷವಾಗಿರು ವುದಲ್ಲ. ನಮ್ಮ ಸುತ್ತ ಮುತ್ತ ಇರುವವರಿಗೂ ಸಂತೋಷವನ್ನುಂಟು ಮಾಡಬೇಕು. ನಾವಿಬ್ಬರೇನಾದರೂ ನಮ್ಮಿಚ್ಛೆಬಂದಂತೆ ನಡೆದರೆ ನಮ್ಮ ಮನೆಯಲ್ಲಿರುವ ದೊಡ್ಡವರಿಗೆಲ್ಲ ಸಿಟ್ಟುಬರುತ್ತದೆ. ಅದಕ್ಕೋಸ್ಕರ ನಾವು ಆದಷ್ಟು ಅವರಕಡೆ ಗಮನಕೊಟ್ಟು ಅವರನ್ನು ಸಂತೋಷಪಡಿಸಲು ಪ್ರಯತ್ನಿಸಬೇಕು. ಹಾಗೆ ಮಾಡಬೇಕಾದರೆ ಆದಷ್ಟು ಮಾತುಕತೆ ಕಡಮೆ ಮಾಡಬೇಕು. ದೊಡ್ಡವರಿಗೆ ಅವರ ಕೆಲಸಗಳಲ್ಲಿ ಸಹಾಯಕರಾಗಬೇಕು.

ಯಾವ ಕೆಲಸಮಾಡಲಿ ಉತ್ಸಾಹ ತೋರಿಸಬೇಕು. ಅವರಿಗೆ ಸಂತೋಷ ವಾಗುವ ರೀತಿಯಲ್ಲಿ ನಡೆದುಕೊಳ್ಳಬೇಕು.

ನಾನು ಹೀಗೆ ಹೇಳುತ್ತಿರುವುದರಿಂದ ನಿನ್ನಲ್ಲಿ ನನಗೆ ಪ್ರೇಮವಿಲ್ಲ ವೆಂದು ತಿಳಿಯಬೇಡ. ನಾನು ಇಲ್ಲಿದ್ದು ನೀನು ಅಲ್ಲಿದ್ದರೂ ನಾವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತಿಲ್ಲವೆ? ಹಾಗೆಯೇ ನಾನೂ ನೀನೂ ಊಟ, ತಿಂಡಿ, ಆಟ, ಹರಟೆಗಳಲ್ಲಿ ಕಾಲ ಕಳೆಯದೆ ಹೋದರೂ ನಮ್ಮಲ್ಲಿರುವ ಪ್ರೇಮಕ್ಕೇನೂ ಕಡಮೆಯಿಲ್ಲ. ನೋಡೋಣ, ನನ್ನ ಪಾಠವನ್ನು ಎಷ್ಟರ ಮಟ್ಟಿಗೆ ನೀನು ಕಲಿತಿರುವೆಯೆಂಬುದನ್ನು.

ನಿನ್ನವ.

## ೨೭

ವಿಶಾಲೀ,

ಇಲ್ಲಿದ್ದ ಎಂಟು ದಿನಗಳಲ್ಲೇ ನೀನು ಮನೆಯವರಿಗೆಲ್ಲ ಅಚ್ಚು ಮೆಚ್ಚಾಗಿರುವೆ. ನನ್ನ ವಿಷಯ ಹೇಳಬೇಕಾಗಿಯೇ ಇಲ್ಲ. ನಿನಗೇ ಗೊತ್ತು.—ಕಾಗದ ಬರೆಯದಿದ್ದರೂ, ಮನೆಗೆ ಬಂದಾಗ ಮಾತಾಡಿಸ ದಿದ್ದರೂ ನಿನ್ನ ಹುಚ್ಚೇನು ನನಗೆ ಕಡಿಮೆಯಾಗುವುದಿಲ್ಲವೆಂದು. ನಮ್ಮ ಅಣ್ಣ ಅಮ್ಮ ನಿನ್ನನ್ನು ದಿನಕ್ಕೆ ನೂರುಸಲ ಜ್ಞಾಪಿಸಿಕೊಳ್ಳುತ್ತಾರೆ. ನನ್ನ ತಂಗಿ "ಅತ್ತಿಗೆ ಯಾವತ್ತು ಬರುತ್ತಾಳೆ?" ಎಂದು ಕೇಳುತ್ತಲೇ ಇರುತ್ತಾಳೆ.

ಇನ್ನೇನು ನೀನು ಇಲ್ಲಿಗೆ ಬಂದೇಬಿಡಬೇಕಾಗುವುದು. ಈಸಲ ಕಳೆದ ಬಾರಿಯಂತೆ ನಾಲ್ಕು ದಿನವಿದ್ದು ಹಿಂತಿರುಗುವಂತಿಲ್ಲ; ಮನೆಯ ಚಿಕ್ಕ ಯಜಮಾನಿತಿಯಾಗಿರಬೇಕು. ನಿನ್ನ ಗೆಳತಿಯರಿಗೆಲ್ಲ ಹೋಗಿ ಬರುವೆ ನೆಂದು ಈಗಲೆ ಹೇಳಲು ಪ್ರಾರಂಭಿಸು. ನಮ್ಮ ತಂದೆ ಈ ವಿಷಯವಾಗಿ ನಾಲ್ಕು ದಿನಗಳ ಹಿಂದೆಯೇ ನಿಮ್ಮ ಮನೆಗೆ ಕಾಗದ ಬರೆದಿರುವರು. ಈಗ ನಿನ್ನ ಕಸೂತಿ ಹಾಕಿದ ಬಟ್ಟೆಗಳು, ಗಾಜಿನ ಕೊಳವೆಯ ತೋರಣಗಳು, ಎಲ್ಲ ಹೊರಗೆ ಬರಲಿ. ನಿನ್ನ ಯಜಮಾನಿಕೆಯಲ್ಲಿ ಮನೆ ಎಷ್ಟರಮಟ್ಟಿಗೆ ಆಗುವುದೋ ನೋಡೋಣ.

ಒಟ್ಟಿನಲ್ಲಿ ಹೊರಡಲು ತಕ್ಕ ಏರ್ಪಾಡನ್ನೆಲ್ಲ ಮಾಡಿಕೊ.

ನಿನ್ನವ.

೨೮

ವಿಶಾಲೀ,

ನಿನ್ನ ಕಾಗದ ಬಂತು. ಹೊರಡಲು ಅಣಿಮಾಡಿಕೊಳ್ಳುತ್ತಿರುವೆ ಯೆಂಬುದು ಸಂತೋಷದ ವಿಷಯ. "ನಿಮ್ಮ ಮನೆಗೆ ಬರಬೇಕು. ಬರುವುದೇನೋ ಸಂತೋಷ. ನಮ್ಮ ಮನೆಯಿಂದ ಹೊರಡಬೇಕು, ಅಣ್ಣ ಅಮ್ಮ ಮನೆಯುವರನ್ನೆಲ್ಲಾ ಬಿಟ್ಟು ಬಂದುಬಿಡಬೇಕೆಂದು ಏಕೋ ಏನೋ ಸಂಕಟವಾಗುತ್ತದೆ. ಎಷ್ಟೋ ಬಾರಿ ಇದನ್ನು ಜ್ಞಾಪಿಸಿಕೊಂಡಾಗಲೆಲ್ಲ ಬೇಡಬೇಡವೆಂದರೂ ಕಣ್ಣಿನಲ್ಲಿ ನೀರು ತುಂಬಿಕೊಳ್ಳುವುದು" ಎಂದು ಬರೆದಿದ್ದೀಯೇ. ಹಾಗೆಯೇ ನಿಮ್ಮ ಅಪ್ಪ ಅಮ್ಮನಿಗೂ ಎಷ್ಟು ದುಃಖವಾಗಬಹುದೋ! ಧಾರೆಯ ದಿನ ನಿಮ್ಮಮ್ಮ ಸೆರಗಿನಿಂದ ಕಣ್ಣೊರಸಿಕೊಳ್ಳುತ್ತಿದ್ದುದನ್ನೂ ನಿಮ್ಮ ಅಪ್ಪನ ಕಣ್ಣುಗಳಿಂದ ಎರಡೇ ಎರಡು ತೊಟ್ಟು ಕಣ್ಣೀರು ಬಿದ್ದುದನ್ನೂ ನೀನು ನೋಡಿರಬಹುದು. ಮುಂದೆ ನೀನು ಅವರನ್ನು ಬಿಟ್ಟು ಹೋಗುವೆಯೆಂದು ತಿಳಿದಾಗಲೇ ಅಷ್ಟು ದುಃಖಪಟ್ಟವರು, ನಿಜವಾಗಿಯೂ ನೀನು ಹೊರಡುವಾಗ ಎಷ್ಟು ದುಃಖಪಡುವರೋ ಹೇಳುವುದಕ್ಕಾಗುವುದಿಲ್ಲ.

ನಿನ್ನ ಜೊತೆಗಾತಿ ವೆಂಕಮ್ಮನ ವಿಷಯ ನೀನು ಬರೆದಿರುವುದನ್ನು ನೋಡಿ ನನಗೂ ಕೂಡ ಅಯ್ಯೋ ಎನ್ನಿಸಿದೆ. "ಮೊದಲೆ ನನ್ನನ್ನು ಬಿಟ್ಟಿರಲಾರಳು. ಅಲ್ಲದೆ ನಾನು ಗಂಡನ ಮನೆಗೆ ಹೋಗುವುದನ್ನು ಕೇಳಿ ಅವಳ ಹೊಟ್ಟೆಯಲ್ಲಿ ಬೆಂಕಿ ಒಂದೇ ಸಲ ಹತ್ತಿಕೊಂಡಹಾಗಾಗಿದೆ. ಪಾಪ, ತಾನು ಮಾಡಿದ ತಪ್ಪೇನು ತನಗೀ ಗತಿ ಬರುವುದಕ್ಕೆ? ಯಾಕೆ ತನಗೆ ದೇವರು ಹೀಗೆ ಮಾಡಿದ? ಎಂದು ಅವಳು ತನ್ನಲ್ಲಿ ತಾನೇ ಕೊರಗುತ್ತಿರಬೇಕು." ಎಂದು ಬರೆದಿದ್ದೀಯೆ. ನಾನೇನಾದರೂ ದೊಡ್ಡ ಮನುಷ್ಯನಾಗಿದ್ದು ನಾನು ಹೇಳಿದ ಹಾಗೆ ಪ್ರಪಂಚ ಕೇಳುತ್ತಿದ್ದರೆ ವೆಂಕಮ್ಮನಂತಹ ಬಾಲ್ಯ ವಿಧವೆಯರು ಮದುವೆಮಾಡಿಕೊಳ್ಳಲು ಯಾವ ತೊಂದರೆಯೂ ಇಲ್ಲದಂತೆ ಮಾಡುತ್ತಿದ್ದೆ. ಈಗ ಕಾಲ ಮೊದಲಿನ ಹಾಗಿಲ್ಲ. ಜನಗಳು ತಮಗೆ ಸರಿಯೆಂದು ತಿಳಿದುದನ್ನು ಧೈರ್ಯವಾಗಿ ಮಾಡುವುದನ್ನು ಕಲಿತುಕೊಳ್ಳು

ತ್ತಿದ್ದಾರೆ. ಆದುದರಿಂದ ವೆಂಕಮ್ಮನಂತಹ ಬಾಲವಿಧವೆಯರು ಬಹಳ ಕಾಲ ಹೀಗೆ ಗೋಳಾಡಬೇಕಾಗಿಲ್ಲ.

ಇಲ್ಲಿಗೆ ಬಂದಮೇಲೆ ನಿನಗಷ್ಟು ಬೇಜಾರಾಗದಂತೆ ನೋಡಿಕೊಳ್ಳಲು ಪ್ರಯತ್ನಪಡುತ್ತೇನೆ. ಇದರ ಮೇಲೆ, ನಮ್ಮ ಅಪ್ಪ ಅಮ್ಮ ನಿನ್ನನ್ನು ನಿಮ್ಮ ಅಪ್ಪ ಅಮ್ಮ ನೋಡಿಕೊಂಡ ಹಾಗೇ ನೋಡಿಕೊಳ್ಳುವರೆಂಬ ಧೈರ್ಯವಿದೆ. ನಿಮ್ಮ ತಂದೆ ನಿನ್ನನ್ನು ಯಾವತ್ತು ಕರೆದುಕೊಂಡು ಬರುತ್ತಾರೆಂಬುದನ್ನು ಸ್ವಲ್ಪ ಮುಂಚೆ ನನಗೆ ಬರೆ. ಇದೇ ಕೊನೆಯ ಕಾಗದ ಅನ್ನುವ ಹಾಗೆ ತೋರುತ್ತೆ. ಎದುರಿಗೆ ಇರುವಾಗ ಇನ್ನೇಕೆ ಕಾಗದ? ಅಲ್ಲವೇ? ನೀನು ಬರುವುದನ್ನೇ ಎದುರು ನೋಡುತ್ತಿರುವ.

ನಿನ್ನವ.

# ವಿಶಾಲಾಕ್ಷಿಯ ಕಾಗದಗಳು

## ೧

ವೆಂಕು,

ನಾನು ಹೊರಟುಬರುವಾಗ ಕಾಗದ ಬರೆಯುತ್ತೇನೆಂದು ಹೇಳಿದ್ದೆ; ಅಲ್ಲದೆ, ನನಗೆ ಇಲ್ಲಿ ಇನ್ನೂ ಯಾರೂ ಗುರುತಿಲ್ಲ. ಅದಕ್ಕೋಸ್ಕರವೇ ಈ ಕಾಗದ ಬರೆಯುತ್ತಿದ್ದೇನೆ.

ನಾವು ಈ ಊರಿಗೆ ಸುಖವಾಗಿ ಬಂದು ತಲಪಿದೆವು. ಇನ್ನೇನು ಬರೆಯಬೇಕೋ ನನಗೆ ತಿಳಿಯದು. ಏನಾದರೂ ವಿಶೇಷವಿದ್ದರೆ ಕಾಗದ ಬರೆಯುತ್ತೇನೆ. ನಮ್ಮೂರಿನಲ್ಲೂ ಏನಾದರೂ ಹೊಸ ವಿಷಯವಿದ್ದರೆ ಬರಿ.

ಇಂತು ನಿನ್ನ ಗೆಳತಿ.

## ೨

ವೆಂಕು,

ನಿನ್ನ ಕಾಗದ ನೋಡಿ ನಮ್ಮ ಹಿಂದಿನ ಸ್ನೇಹ ಜ್ಞಾಪಕಕ್ಕೆ ಬಂತು. ನೀನು ಬರೆದಿರುವೆ, "ನಾನು ನಿನ್ನನ್ನು ಬಿಟ್ಟು ಬೇರೆ ಯಾರ ಜೊತೆಯನ್ನೂ ಸೇರುತ್ತಿರಲಿಲ್ಲ. ಈಗ ನೀನೂ ಇಲ್ಲ. ಏನಾದರೂ ಬರೆದರೂ ಸರಿಯೆ, ಇಲ್ಲದಿದ್ದರೂ ಸರಿಯೆ, ಸುಮ್ಮನೆಯಾದರೂ ಒಂದು ಕಾಗದ ಬಂದರೆ ನನಗೆಷ್ಟೋ ಸಂತೋಷ" ಎಂದು.

ಆಗಲಿ ; ನೀನು ಹೇಳಿದಂತೆಯೇ ಕಾಗದ ಬರೆಯುತ್ತೇನೆ. ಬರೆದ ಕಾಗದಗಳನ್ನು ಮಾತ್ರ ನೀನು ಯಾರಿಗೂ ತೋರಿಸಕೂಡದು. ನಾನು ನಿನಗೇನೇನು ಬರೆಯಬೇಕೆಂದು ಮನಸ್ಸಿನಲ್ಲಿ ಯೋಚಿಸಿಕೊಳ್ಳುತ್ತೇನೋ ಅದನ್ನೇ ಇನ್ನೊಂದು ಸಲ ನೆನಸಿಕೊಂಡರೆ ನನಗೆ ನಾಚಿಕೆಯಾಗುತ್ತದೆ. ಆದರೆ ಅದೆಲ್ಲವನ್ನೂ ನಿನಗೆ ಬರೆಯದೆಹೋದರೆ ನನ್ನ ಮನಸ್ಸಿಗೆ ಸಮಾಧಾನವಿರುವುದಿಲ್ಲವೆಂದು ಕಾಣುತ್ತದೆ.

‘ಅವರನ್ನು’ ಕಂಡರೆ ನನಗೇನೋ ಒಂದು ತರದ ಮಿತಿಮೀರಿದ ಪ್ರೇಮ. ಯಾವಾಗಲೂ ಜೊತೆಯಲ್ಲೇ ಇರಬೇಕು, ‘ಅವರನ್ನು’ ನೋಡುತ್ತಿರಬೇಕು, ಅವರು ಮಾತಾಡುವುದನ್ನೇ ಕೇಳುತ್ತಿರಬೇಕು, ಎನ್ನಿಸುತ್ತದೆ. ಆದರೆ ಅದು ಸಾಧ್ಯವಿಲ್ಲ. ಏನೋ ಒಂದು ಬಗೆಯ ನಾಚಿಕೆ. ಅವರು ಬಂದ ಕೂಡಲೆ ನಮ್ಮ ಅತ್ತೆಯ ಹಿಂದೆ ಹೋಗಿ ನಿಂತುಕೊಂಡು ಬಿಡುತ್ತೇನೆ. ಅವರು ನನ್ನ ಕಡೆ ನೋಡುತ್ತಿದ್ದರೆ, ನನ್ನನ್ನೇ ನೋಡುತ್ತಿದ್ದಾರೆಂದು ನನಗೆ ತಿಳಿದರೆ, ಆ ಕಡೆ ತಿರುಗಿ ನೋಡಲು ಕೂಡ ಆಗುವುದಿಲ್ಲ. ಏನು ಮಾಡಲಿ? ನಾನೊಬ್ಬಳೆ ಇದ್ದಾಗ “ಧೈರ್ಯವಾಗಿರಬೇಕು, ಅವರು ಯಾರು, ದೂರದವರೆ? ಅವರೊಬ್ಬರಿದ್ದಾಗ ಕೂಡ ಏಕೆ ಈ ನಾಚಿಕೆ? ಮುಂದೆಯಾದರೂ ಸರಿಯಾಗಿರಬೇಕು” ಎಂದುಕೊಂಡು ಮಾಡಿದ್ದಕ್ಕೆಲ್ಲ ಸಂಕಟಪಟ್ಟುಕೊಳ್ಳುತ್ತೇನೆ. ಮುಂದೆ ಹಾಗಿರಬಾರದು, ಸರಿಯಾಗಿರಬೇಕೆಂದು ನಿಶ್ಚಯಿಸಿಕೊಳ್ಳುತ್ತೇನೆ. ಆದರೆ ಇಷ್ಟೆಲ್ಲ ಗಟ್ಟಿಮಾಡಿಕೊಂಡ ಮನಸ್ಸು ಅವರನ್ನು ನೋಡಿದೊಡನೆಯೇ ಏನೇನೋ ಆಗಿ ಹೋಗುತ್ತದೆ. ಇದಕ್ಕೇನು ಮಾಡಬೇಕೋ ತಿಳಿಯದು.

ಖಂಡಿತ ಈ ಕಾಗದ ಯಾರಿಗೂ ತೋರಿಸಬೇಡ, ಕಂಡೆಯಾ?

ಇಂತು ನಿನ್ನ ಪ್ರೀತಿಯ ಗೆಳತಿ.

೩

ವೆಂಕು,

‘ನಿನ್ನ ಕಾಗದ ಓದಿಕೊಂಡೆ. ಯಾರಿಗೂ ತೋರಿಸುವುದಿಲ್ಲ. ನಿನ್ನ ಕಾಗದ ಓದಿದರೆ ನನಗೂ ಒಂದು ಬಗೆಯ ಆನಂದವಾಗುತ್ತದೆ’ ಎಂದು ನೀನು ಬರೆದಿರುವೆ. ಈಗ ಎರಡು ದಿನಗಳ ಹಿಂದೆ ನಡೆದ ಒಂದು ವಿಷಯ ಹೇಳಬೇಕೆನ್ನಿಸುತ್ತದೆ.

ನಾನು ಹಜಾರದಲ್ಲಿ ಒಬ್ಬಳೇ ನಿಂತಿದ್ದೆ. ಅತ್ತೆಮ್ಮನವರು ನೀರು ತರಲು ಹೋಗಿದ್ದರು. ಮಾವನವರು ಎಲ್ಲೋ ಮನೆಯಲ್ಲಿರಲಿಲ್ಲ. ‘ಅವರು’ ಬಂದರು. ‘ಅವರು’ ಎಂದರೆ ಯಾರು ಎಂದು ಕೇಳಿದ್ದೀಯೆ! ನಿನಗೆ

ತಿಳಿಯದೊ ಅವರು ಎಂದರೆ ಯಾರು ಎಂದು? ಇಲ್ಲ, ನನ್ನನ್ನು ಹಾಸ್ಯ ಮಾಡುವೆಯೋ?

ಇದನ್ನಿಷ್ಟಕ್ಕೇ ಬಿಡು. ಅವರು ಬಂದರು. ಬಂದದ್ದು ನನಗೆ ಗೊತ್ತಾಗಲಿಲ್ಲ. ಬಂದವರು ಮೆಲ್ಲನೆ ನನ್ನ ಹಿಂದೆ ಬಂದು ನನ್ನ ಎರಡು ಭುಜದ ಮೇಲೂ ತಮ್ಮೆರಡು ಕೈಗಳನ್ನಿಟ್ಟರು. ಬೆಚ್ಚಿಬಿದ್ದೆ. ಹಿಂತಿರುಗಿ ನೋಡಿದೆ; ನಗುತ್ತಾ ನಿಂತಿದ್ದರು ಅವರು.

"ಏಕೆ? ಹೆದರಿಕೊಂಡೆಯಾ?" ಎಂದು ಕೇಳಿದರು.

"ಇಲ್ಲ" ಎನ್ನುವಂತೆ ತಲೆಯಲ್ಲಾಡಿಸಿದೆ.

"ಮತ್ತೆ ಏತಕ್ಕೆ ನನ್ನೊಡನೆ ಮಾತಾಡುವುದಿಲ್ಲ? ಒಂದು ಘಳಿಗೆಯೂ ನನ್ನೊಡನೆ ಇರುವುದಿಲ್ಲ?"

ನಾನು ಮಾತನಾಡಲಿಲ್ಲ. ನನ್ನ ಬಲಗೈಯನ್ನು ತಮ್ಮ ಎರಡು ಕೈಗಳಲ್ಲೂ ಮುಚ್ಚಿ ಹಿಡಿದುಕೊಂಡರು; ಮೆಲ್ಲಗೆ ಒತ್ತಿದರು. ನನಗೆ ಏನೋ ಒಂದು ಬಗೆಯ ಸಂತೋಷ; ಒಂದು ಬಗೆಯ ಹೆದರಿಕೆ; ಮುಖವೆಲ್ಲ ಬೆವತು ಕೆಂಪಗಾಗಿರಬೇಕೆಂದು ಕಾಣುತ್ತದೆ.

"ಹೋಗಲಿ, ಇನ್ನು ಮೇಲೆ ಹೀಗೆ ಮಾಡಬೇಡ. ಮಧ್ಯಾಹ್ನ, ಊಟವಾದ ಮೇಲೆ ನನ್ನ ರೂಮಿಗೆ ಬಂದು ಅರ್ಧ ಘಂಟೆಯಾದರೂ ನನ್ನೊಡನೆ ಇರಬೇಕು. ಏನು ಹೇಳು!" ಎಂದರು.

"ಹು" ಎಂದೆ.

ಹೊರಗೆ ನಮ್ಮ ಅತ್ತೆ ಬಂದ ಸದ್ದಾಯಿತು. ಅವರು ರೂಮಿಗೆ ಹೊರಟುಹೋದರು. ನಾನು ಅತ್ತೆಯವರನ್ನು ನೋಡಲು ಹೊರಗೆ ಬಂದೆ.

ಇಂತು ನಿನ್ನ ಗೆಳತಿ.

೪

ವೆಂಕು,

ಏನೇ, ನನ್ನನ್ನೊಳ್ಳೆ ಇರುಕಿಗೆ ಸಿಕ್ಕಿಸಿಕೊಂಡೆ? ಅಂದು ಬಾಗಿಲು ತಡೆದಾಗ ಹೆಸರು ಹೇಳಿದ್ದನ್ನು ಕೇಳಿದ್ದು ಸಾಲದೆ? ಮತ್ತೆ ಹೇಳಬೇಕೆ? ಅದು ಮಾತ್ರ ನನ್ನ ಕೈಯಲಾಗದಮ್ಮ.

"ಅವರು ಯಾರು? ನನ್ನಾಣೆಗೂ ಹೇಳಬೇಕು" ಎಂದು ಬರೆದಿರುವೆ.

ಹೇಗೆ ಹೇಳಲಿ? ಆಗಲಿ ಹೇಳುತ್ತೇನೆ. ನಾನು ನಮ್ಮ ಮನೆಯಲ್ಲಿ ಯಾರಾರಿದ್ದಾರೆಂದು ನಿನಗೆ ಹೇಳಿದ್ದೇನಲ್ಲವೆ? ಆದ್ದರಿಂದ ನಿನಗೆ ಗೊತ್ತಿದೆ ನಮ್ಮ ಮನೆಯಲ್ಲಿ ಯಾರ್ಯಾರು ಯಾರಿದ್ದಾರೆಂದು. ಅವರು ಎಂದರೆ ನಮ್ಮ ಮಾವನವರಲ್ಲ, ಅತ್ತೆಯವರಲ್ಲ, ನಾದಿನಿಯಲ್ಲ. ಉಳಿದವರು ಯಾರೋ ಅವರು. ಯಾರು ಎನ್ನುವುದು ಗೊತ್ತಾಯಿತೋ ಈಗ?

ನಮ್ಮ ಮಾವನವರು ಇವತ್ತು ಬೆಳಗ್ಗೆ ಯಾರೋ ಶಾಸ್ತ್ರಿಗಳೊಡನೆ ಮಾತಾಡುತ್ತಿದ್ದರು. ನಾನು ನಡುಮನೆಯಲ್ಲಿ ನಿಂತಿದ್ದೆ. "ದೇವರನ್ನು ನಾವು ಹಾಗೆ ಹೀಗೆ—ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ನಾವು 'ಓಂ-ತತ್'—'ಅದು' ಎಂದು ಕರೆಯುವುದು" ಎಂದು ಶಾಸ್ತ್ರಿಗಳು ಹೇಳಿದರು. 'ಅವರು' ಎನ್ನುವುದೂ ಹಾಗೆಯೇ ಎಂದು ನನ್ನ ಭಾವನೆ.

ಇಂತು ನಿನ್ನ ಗೆಳತಿ.

೫

ವೆಂಕು,

ನನ್ನ ಹಿಂದಿನ ಕಾಗದದಲ್ಲಿ "ನಾನು ನಿತ್ಯವೂ ಅವರ ರೂಮಿನಲ್ಲಿ ಅರ್ಧ ಘಂಟೆ ಕಳೆಯುವಂತೆ ನಿರ್ಧರವಾದದ್ದನ್ನು ಬರೆದಿದ್ದೆ. ಅದು ಹಾಗೆಯೇ ನಡೆಯುತ್ತಿದೆ. ಅವರು ನನ್ನನ್ನು ಮಾತಾಡಿಸಬೇಕೆಂದು ಏನೇನೋ ಪ್ರಶ್ನೆ ಕೇಳುತ್ತಾರೆ. ಅದಕ್ಕೆಲ್ಲ 'ಉಂಟು' 'ಇಲ್ಲ' ಎಂಬ ಅರ್ಥ ಬರುವಂತೆ ತಲೆಯಲ್ಲಾಡಿಸಿಬಿಡುತ್ತೇನೆ. ಹೆಚ್ಚೆಂದರೆ 'ಹು' 'ಉಹು' ಎಂದುಬಿಡುತ್ತೇನೆ.

ಆದರೆ ನೆನ್ನೆ ಒಂದು ವಿಷಯ ನಡೆಯಿತು. ಹೇಳಲೋ? ಬೇಡವೋ? ಆಗಲಿ ಹೇಳಿಯೇಬಿಡುತ್ತೇನೆ. ನೀನು ನಗುತ್ತೀಯೇನೋ! ನಕ್ಕರೂ ಚಿಂತೆಯಿಲ್ಲ. ನಿನಗಲ್ಲದೆ ಇನ್ನಾರಿಗೆ ಹೇಳಲಿ?

ನೆನ್ನೆ ಎಂದಿಗಿಂತ ಸ್ವಲ್ಪ ನಿಧಾನವಾಗಿ ರೂಮಿಗೆ ಹೋದೆ. ಅರ್ಧ ಘಂಟೆಯೇ ನಿಧಾನವಾಗಿರಬಹುದು. ಅವರು ನಾನು ಬರುವುದಿಲ್ಲವೆಂದು ನಿದ್ದೆಹೋಗಿರಬೇಕು. ಇಲ್ಲ, ನಿದ್ದೆ ಬಂದವರಂತೆ ಮಲಗಿದ್ದಿರಬೇಕು. ನಾನು ಮೆಲ್ಲಗೆ ಹೋದೆ. ಮಂಚದ ಹತ್ತಿರ ನಿಂತುಕೊಂಡೆ. ನಾನು ಬಂದದ್ದು ಗೊತ್ತಾಗಲೆಂದು ಸ್ವಲ್ಪ ಸದ್ದುಮಾಡಿದೆ. ಒಂದು ಸಲ ನಕ್ಕೆ.

ಆದರೆ ಗೋಡೆ ಕಡೆಗೆ ಮುಖಮಾಡಿಕೊಂಡಿದ್ದ ಅವರು ನನ್ನ ಕಡೆಗೆ ತಿರುಗಿ ನೋಡಲೇ ಇಲ್ಲ. ಅವರು ಓದುತ್ತಿದ್ದ ಪುಸ್ತಕವು ಎಲ್ಲಿಯುವರೆಗೆ ಓದಿದ್ದರೋ ಅದೇ ಪೇಜಿನಲ್ಲಿ ತೆರೆದುಕೊಂಡು ಬೋರಲಾಗಿ ಅವರ ಎದೆಯ ಮೇಲಿತ್ತು. ಆ ಪುಸ್ತಕವನ್ನು ಮೆತ್ತಗೆ ತೆಗೆದುಕೊಂಡೆ. ಆದರೂ ಅವರಿಗೆ ಎಚ್ಚರವಾದಂತೆ ಕಾಣಲಿಲ್ಲ. ನಿಜವಾಗಿಯೂ ನಿದ್ದೆ ಬಂದಿರಬೇಕೆಂದು ಭಾವಿಸಿದೆ. ವೆಂಕು, ನಿನಗೆ ಗೊತ್ತೇ, ಅವರು ನನ್ನನ್ನು ನೋಡುತ್ತಿದ್ದಾಗ ಅವರನ್ನು ನಾನು ನೋಡಲಾಗುವುದಿಲ್ಲವೆಂದು ? ಆದರೆ ಈಗ ಅವರಿಗೆ ನಿದ್ದೆ ಬಂದಿದೆಯೆಂದು ಗೊತ್ತಾಗಲು ಸ್ವಲ್ಪ ಹೊತ್ತು ಹಾಗೆಯೇ ನೋಡುತ್ತಾ ನಿಂತುಕೊಂಡೆ· ನಾನು ಎಂದೂ ಅವರನ್ನು ದೃಷ್ಟಿಸಿ ನೋಡಿರಲಿಲ್ಲ.

ವೆಂಕೂ, ಅವರು ಎಷ್ಟು ಚೆನ್ನಾಗಿದ್ದಾರೆ! ಆ ಕ್ರಾಪು, ಆ ಕಣ್ಣುಗಳು, ಆ ತುಟಿಗಳು, ನೋಡಲು ಎರಡು ಕಣ್ಣುಸಾಲದು ಎನ್ನಿಸಿತು. ನನ್ನನ್ನು ನಾನೇ ಮರೆತೆನೆಂದು ಕಾಣುತ್ತದೆ. ನನಗೋಸ್ಕರವೆ ಕುಳಿತುಕೊಳ್ಳಲು ಜಾಗಬಿಟ್ಟಿರುವಂತೆ ಮಂಚದ ಅಂಚಿನಲ್ಲಿ ಜಾಗವಿತ್ತು. ಅಲ್ಲಿ ಕುಳಿತುಕೊಂಡೆ. ಮುಂದಕ್ಕೆ ಬಾಗಿ ಎರಡು ಕೈಗಳಿಂದಲೂ ಅವರ ಮುಖವನ್ನು ಹಿಡಿದು ಕೊಂಡು ಒಂದುಬಾರಿ ಮುತ್ತಿಟ್ಟೆ. ಇದ್ದಕ್ಕಿದ್ದ ಹಾಗೆಯೇ ಅವರ ತುಟಿಗಳ ಮೇಲೆ ನಗು ಸುಳಿಯಿತು. ಕಣ್ಣು ಬಿಟ್ಟರು. ನಿದ್ದೆಮಾಡುತ್ತಿದ್ದ ಗುರುತು ಒಂದೂ ಇರಲಿಲ್ಲ. ಮೋಸಹೋದದ್ದು ಗೊತ್ತಾಯಿತು. ತಲೆ ಬಗ್ಗಿಸಿಕೊಂಡೆ. ಮೈಯೆಲ್ಲ ನಡುಗಿ ಬೆವತುಹೋಯಿತು.

ವೆಂಕು, ನಾವು ಮಾಡಿದ ಯಾವ ಒಂದು ಒಳ್ಳೆಯ ಕೆಲಸವೂ ಮುಂದೆ ಫಲಿಸುವುದೆಂದು ಹೇಳುತ್ತಾರೆ. ಆದರೆ ಅಂದು ನಾನು ಮಾಡಿದ ಕೆಲಸಕ್ಕೆ ಮಾತ್ರ ತಕ್ಷಣವೇ ಹತ್ತಾಗಿ ನೂರಾಗಿ ಫಲ ದೊರೆಯಿತು.

ನೀನು ಈ ಕಾಗದ ಓದುತ್ತಲೂ ಬಿದ್ದುಬಿದ್ದು ನಗಬಹುದು. ನಾನು ಅಲ್ಲಿಗೆ ಬಂದಾಗ ಹಾಸ್ಯಮಾಡಬಹುದು. ಚಿಂತೆಯಿಲ್ಲ. ಈ ಸಂತೋಷ ವನ್ನು ನಾನೊಬ್ಬಳೇ ತಡೆಯಲಾರೆ. ಈಗ ನಿನಗೆ ಹೇಳಿದುದರಿಂದ ಅರ್ಧ ಸಮಾಧಾನವಾಯಿತು. ಈಗ ಕಾಗದ ಬರೆಯುತ್ತಿದ್ದರೆ, ನನ್ನ ಎದೆಯು ಡವಗುಟ್ಟುತಿದ್ದುದು ನನಗೇ ಕೇಳಿಸುತ್ತಿತ್ತು. ಅದು ಏಕೋ ಕಾಣೆ.

ನಾನು ನಿನ್ನನ್ನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ನನ್ನಾಣೆಗೂ ಖಂಡಿತ ಯಾರಿಗೂ ಈ ಕಾಗದಗಳನ್ನು ತೋರಿಸಬೇಡ.

ಇಂತು ನಿನ್ನವಳು.

೬

ವೆಂಕು,

ನಿನ್ನ ಕಾಗದ ನೋಡಿದ ಮೇಲೆ, ನೀನು ಯಾರಿಗೂ ತೋರಿಸುವುದಿಲ್ಲವೆಂದು ಬರೆದದ್ದನ್ನು ಓದಿದ ಮೇಲೆ, ಸಮಾಧಾನವಾಯಿತು. ಆದರೆ ಒಂದು ತರದ ಸಂಕಟವಾಯಿತು. ನನ್ನ ಸಂತೋಷದಲ್ಲಿ ನಿನ್ನ ಸ್ಥಿತಿಯನ್ನು ಯೋಚನೆಮಾಡದೆ ಹೀಗೆಲ್ಲ ಬರೆದದ್ದು ಸರಿಯಲ್ಲ. ನನಗೆ ಏನೂ ತೋಚದೆ ಹೋಯಿತು. ಯಾರಿಗಾದರೂ ನನ್ನ ಸಂತೋಷವನ್ನು ಹೇಳಿಕೊಳ್ಳಬೇಕೆನ್ನಿಸಿತು. ಹಾಗೆ ಮಾಡುವುದರಿಂದ ನಿನಗೆ ನೋವುಂಟಾಗುವುದೆಂದು ಮಾತ್ರ ಯೋಚನೆಮಾಡದೆ ಎಂತಹ ತಪ್ಪುಮಾಡಿದೆ! ನನ್ನ ವಿಷಯ ಮಾತ್ರ ಯೋಚಿಸಿದೆನೇ ಹೊರತು ಮತ್ತೊಬ್ಬರ ವಿಷಯ ಯೋಚಿಸದೆ ಹೋದೆ. ಮನಸ್ಸಿಗೆ ಏನೂ ತಿಳಿದುಕೊಳ್ಳಬೇಡ. ಇನ್ನು ಮೇಲೆ ಕಾಗದ ಬರೆಯುವಾಗ ಕೊಂಚ ಹುಷಾರಾಗಿ ಬರೆಯುತ್ತೇನೆ. ಈ ಸಲ ತಪ್ಪು ಮಾಡಿದ್ದಕ್ಕೆ ಕ್ಷಮಿಸು.

ನಿನ್ನ ಕಾಗದದಲ್ಲಿ ಒಂದೆರಡು ಅಕ್ಷರಗಳು ಕಲಸಿಹೋಗಿದ್ದುದನ್ನು ನೋಡಿದೆ. ನೋಡಿದಾಗ ನನಗೆ ಬಹಳ ಸಂಕಟವಾಯಿತು. ನನ್ನ ಕಾಗದ ಓದುವಾಗಲೂ ನನಗೆ ಬರೆಯುವಾಗಲೂ ನೀನು ಬಹಳ ಅತ್ತಿರಬೇಕೆಂದೆನ್ನಿಸಿತು. ಇನ್ನೊಂದು ಬಾರಿ, ದಯವಿಟ್ಟು ಕ್ಷಮಿಸು ಎಂದು ಬೇಡಿಕೊಳ್ಳುತ್ತೇನೆ.

ಇಂತು ನಿನ್ನವಳು.

೭

ವೆಂಕು,

ಕಾಗದವನ್ನು ಕೈಗೆ ತೆಗೆದುಕೊಂಡ ಕೂಡಲೆ, ಏನು ಬರೆದಿರುವೆಯೋ ನಿನಗೆ ಎಷ್ಟು ನೋವುಂಟುಮಾಡಿರುವೆನೊ ಎಂದುಕೊಂಡು ಬಹಳ ಹೆದರಿದ್ದೆ. ಕಾಗದ ನೋಡಿದ ಮೇಲೆ ದುಃಖವು ಕಡಿಮೆಯಾಗದಿದ್ದರೂ ಮನಸ್ಸು ಸಮಾಧಾನಕ್ಕೆ ಬಂದಿತು.

"ನನಗೆ ನೋವೇನೊ ಉಂಟಾಯಿತು. ಆದರೆ ಆ ನೋವಿನಲ್ಲಿ ಒಂದು ಆನಂದವೂ ಇದೆ. ನನ್ನ ಭಾಗಕ್ಕಂತೂ ಆ ಆನಂದ ಸಿಗುವಂತಿಲ್ಲ. ಆದರೆ ನೀನು ಅನುಭವಿಸಿದ ಆನಂದವನ್ನು ನಿನ್ನ ಕಾಗದದಲ್ಲಿ ಓದಿದಾಗ ಅದೇ ತರದ ಒಂದು ಆನಂದವುಂಟಾಯಿತು. ಇಂತಹ ಒಂದು ಆನಂದವು ನನಗೆ ಉಂಟಾಗಬಾರದೆಂದು ನಿನ್ನ ಆಸೆಯಿದ್ದರೆ ನನಗೆ ಅಂತಹ ಕಾಗದ ಗಳನ್ನು ಬರೆಯಬೇಡ" ಎಂದು ಬರೆದಿದ್ದೀಯೆ. "ಹಾಗೆ ಮಾಡಿದಲ್ಲಿ ನನ್ನ ನಿನ್ನ ಸ್ನೇಹ ಕೊನೆಯಾಗುತ್ತದೆ" ಎಂದೂ ಬರೆದಿರುವೆ. ಇದರಿಂದ ನಾನು ಏನು ತಿಳಿದುಕೊಳ್ಳಬೇಕೋ ಕಾಣೆ.

ಇದು ಹಾಗಿರಲಿ. ಈಗಲೂ ನಿನ್ನ ಹಾಸ್ಯ ನೀನು ಬಿಟ್ಟಿಲ್ಲವಲ್ಲ! "ನೀನು ಕಾಗದ ಬರೆಯುವದನ್ನು ಬಿಟ್ಟರೆ ನಿನ್ನ ಕಾಗದಗಳ ಕಟ್ಟನ್ನೇ, ನಿದ್ದೆಮಾಡುತ್ತಿದ್ದ ವಿಷಯ ಬರೆದಿರುವೆಯಲ್ಲ ಅದನ್ನೂ, ನಿಮ್ಮ ಯಜಮಾ ನರಿಗೆ ಕಳುಹಿಸಿಬಿಡುತ್ತೇನೆ. ಜೋಕೆ" ಎಂದು ಹೆದರಿಸಿರುವೆ. ಸದ್ಯ ಅದು ಮಾತ್ರ ಮಾಡಬೇಡ, ಖಂಡಿತ ಕಾಗದ ಬರೆಯುತ್ತೇನೆ.

ಇಂತು ನಿನ್ನವಳು.

೮

ವೆಂಕು,

"'ಅವರ' ವಿಷಯವಿಲ್ಲದ ಕಾಗದವೊಂದನ್ನು ಬರೆಯಬಾರದೆ? ಯಾವುದರಲ್ಲಿ ನೋಡಿದರೂ ಅವರ ವಿಷಯವೆ. ಅವರ ವಿಷಯವಿಲ್ಲದ ಕಾಗದವೊಂದೂ ಇಲ್ಲ" ಎಂದಿರುವೆ. ಅದು ಏಕೋ ನನಗೆ ತಿಳಿಯದು. ಅವರ ಜೊತೆಯಲ್ಲಿರಬೇಕು. ಇಲ್ಲ, ಅವರ ವಿಷಯ ಯೋಚನೆಮಾಡುತ್ತಿರ ಬೇಕು. ಎರಡೂ ಅಲ್ಲದೆ ಸುಮ್ಮನೆ ಮಾತ್ರ ಒಂದು ಗಳಿಗೆಯೂ ಇರುವುದ ಕ್ಕಾಗುವುದಿಲ್ಲ. ಹೀಗಿರಲು, ಕಾಗದ ಬರೆಯುವಾಗ 'ಅವರ' ವಿಷಯ ಯೋಚನೆಮಾಡದೆ ಹೇಗಿರಲಿ? "ಅವರ ವಿಷಯವಿಲ್ಲದ ಕಾಗದವೊಂದನ್ನು ಬರೆಯಬಾರದೆ?" ಎಂಬ ನಿನ್ನ ಮಾತಿಗೆ ಉತ್ತರವಾಗಿ ನಾನೊಂದು ಬರಿಯ ಕಾಗದ ಕಳುಹಿಸಬೇಕಾಗುತ್ತದೆ. ಅದು ಏಕೋ ನನಗೆ ತಿಳಿಯದು, ಒಂದೊಂದುಸಲ ಚೆನ್ನಾಗಿ ಯೋಚಿಸಿದಾಗ ಅವರಿಲ್ಲದೇ ನಾನಿಲ್ಲ ಎನ್ನಿಸು ತ್ತದೆ. ಅದರ ಕಾರಣ ಹೇಳುವುದಕ್ಕೆ ಬಾರದು.

ಇನ್ನೊಂದು ವಿಷಯ. ನಿನಗಾಗಲೇ ಹೇಳಿದ್ದೇನೆ, ನಾನು ನಿತ್ಯವೂ ಊಟವಾದ ಮೇಲೆ ಅರ್ಧಘಂಟೆ ಅವರೊಡನೆ ರೂಮಿನಲ್ಲಿರುತ್ತೇನೆ ಎಂದು. ಅವರು ಯಾವಾಗಲೂ ಏನಾದರೂ ಓದುತ್ತಲೇ ಇರುವರು. ಅವರಿಗೆ ಓದುವ ಹುಚ್ಚು ಹೆಚ್ಚು. ಆದರೆ ನಾನು ರೂಮಿಗೆ ಹೋದರೆ ಪುಸ್ತಕ ಮುಚ್ಚಿಡುವರು.

ನೆನ್ನೆ ನಾನು ಎಂದೆ: "ನಾನು ಬಂದರೆ ನಿಮಗೆ ಓದುವುದಕ್ಕೆ ತೊಂದರೆ!"

"ಆದರೂ ಚಿಂತೆಯಿಲ್ಲ. ಅದೇ ನೆವಮಾಡಿಕೊಂಡು ಬರುವುದನ್ನು ಬಿಡಬೇಡ."

"ನಾನು ಬಂದರೆ ನೀವು ಓದುವುದೇಕೆ ನಿಲ್ಲಿಸುತ್ತೀರಿ? ನಿಮ್ಮಷ್ಟಿಗೆ ನೀವು ಓದುತ್ತಿರಿ."

"ನೀನೇನು ಮಾಡುತ್ತೀಯೆ?"

"ನಾನು ಸುಮ್ಮನೆ ನಿಮ್ಮನ್ನು ನೋಡುತ್ತಿರುತ್ತೇನೆ."

"ಇಲ್ಲ, ನಿನಗೆ ಸಿಟ್ಟುಬರುತ್ತದೆ. ಅಲ್ಲದೆ ನಿನ್ನನ್ನು ನೋಡುತ್ತಿದ್ದರೆ ಇರುವ ಆನಂದ ಪುಸ್ತಕ ಓದಿದರೆ ಬರುವುದಿಲ್ಲ."

"ಪುಸ್ತಕ ಓದಿದರೆ ಆನಂದವಿದೆಯೇ?" ಎಂದು ನಾನು ಕೇಳಿದೆ.

ಈಗ ನಾವು ಮಧ್ಯಾಹ್ನ ಸ್ವಲ್ಪ ಹೊತ್ತು ಪುಸ್ತಕಗಳನ್ನೋದುತ್ತೇವೆ. ಕನ್ನಡದ ಪುಸ್ತಕಗಳಾದರೆ ನಾನು ಓದುತ್ತೇನೆ; ಅವರು ಕೇಳುತ್ತಾರೆ. ಇಂಗ್ಲಿಷ್ ಅಥವಾ ಸಂಸ್ಕೃತ ಪುಸ್ತಕಗಳ ಕೆಲವು ಭಾಗಗಳನ್ನು ಅವರು ಓದಿ ಹೇಳುತ್ತಾರೆ. ಅವರು ಒಂದು ಸಲ ಹೇಳಿದರು.—"ವಿಶಾಲಿ, ಯಾವುದಾದರೂ ಚೆನ್ನಾಗಿರುವ ಪುಸ್ತಕ ಓದಿದರೆ ನಿನಗೂ ಅದನ್ನು ಓದಿ ಹೇಳದಿದ್ದರೆ ನನ್ನ ಮನಸ್ಸೇ ಸುಮ್ಮನಿರುವುದಿಲ್ಲ" ಎಂದು. ನಾನು ಅವರಷ್ಟೆ ಓದಿದ್ದರೆ ಎಷ್ಟು ಚೆನ್ನಾಗಿತ್ತು!

ನಿನ್ನ ಪ್ರೀತಿಯ ಗೆಳತಿ.

೯

ವೆಂಕು,

ಸರಿ, ಯಾವಾಗಲೂ ನೀನು ಹೀಗೆಯೇ. ಅದೇನು ಇನ್ನೊಬ್ಬರನ್ನು ಗೋಳು ಹೊಯ್ದುಕೊಳ್ಳಲು ನಿನಗೆ ಆಶೆಯೋ ನನಗೆ ಗೊತ್ತಿಲ್ಲ.

ನಮ್ಮ ಓದುಗಾರಿಕೆ ಕಮಲು ಅವಳ ಗಂಡನ ಕೈಲಿ ಹಿಂದಿ ಹೇಳಿಸಿಕೊಂಡ ಹಾಗೆ ಅಂತ ತಿಳಿದುಕೊಂಡೆಯಾ? ನೀನು ಬರೆದಿರುವುದನ್ನು ನೆನಸಿಕೊಂಡಾಗಲೆಲ್ಲ ನನಗೆ ನಗುಬರುತ್ತದೆ.

ನನಗೂ ತಿಳಿಯದು ಕಮಲೂಗೆ ಏಕೆ ಹಿಂದಿ ಬರುವುದಿಲ್ಲ ಎನ್ನುವುದಕ್ಕೆ ಕಾರಣ. ಅವಳಿಗೆ ಸಾಲದ್ದಕ್ಕೆ ನಿತ್ಯ ಎರಡು ಗಂಟೆ ಪಾಠ ಎಂದು ಹೇಳುತ್ತೀಯೆ. ಪ್ರಾರಂಭಿಸಿ ತಿಂಗಳಾದರೂ ಇನ್ನೂ ಬಾಲಬೋಧೆಯಲ್ಲಿ ನೆಟ್ಟಗೆ ಐದು ಪಾಠ ಬರುವುದಿಲ್ಲ ಅಂತೀಯೆ. ನಮ್ಮ ಜೊತೆ ಓದುತ್ತಿದ್ದಾಗ ಅವಳು ಕ್ಲಾಸಿನಲ್ಲಿ ಮೊದಲನೆಯವಳಾಗಿದ್ದಳು. ದೊಡ್ಡವರಾದ ಮೇಲೆ ಪಾಠ ಬರುವುದಿಲ್ಲವಂತೆ. ಹಾಗೇನಾದರೂ ಇರಬಹುದು, ಅಲ್ಲವೆ?

ಅದೇನೋ ಇದು ನಿನಗೆಷ್ಟು ಆಶ್ಚರ್ಯವುಂಟುಮಾಡಿದೆಯೋ ನನಗೂ ಅಷ್ಟೆ ಆಶ್ಚರ್ಯವನ್ನುಂಟುಮಾಡಿದೆ.

ಇಂತು ನಿನ್ನ ಗೆಳತಿ.

೧೦

ವೆಂಕು,

"ನೀವೆಲ್ಲ ಒಂದೇ ಜಾತಿ. ಒಬ್ಬರ ಗುಟ್ಟು ಒಬ್ಬರು ಬಿಡುವುದಿಲ್ಲ, ನನಗೆ ಗೊತ್ತಿತ್ತು" ಎಂದು ಬರೆದಿದೀಯೆ. ಅದು ಗೊತ್ತಿದ್ದೂ ನನ್ನೇಕೆ ಕೇಳಿದ್ದಿ? ನೀನೆಂತಹ ಕೀಟಲೆಯವಳು ಎನ್ನುವುದು ನನಗೆ ಗೊತ್ತಿಲ್ಲವೇನು?

ಇದು ಹಾಗಿರಲಿ. ನನಗೆ ಈಗ ನಿನಗೆ ಕಾಗದ ಬರೆಯುವುದಕ್ಕೇ ಬೇಜಾರು. ಹೀಗೆ ಬರೆದಿದ್ದೇನೆಂದು ನೀನೇನೂ ಮನಸ್ಸಿಗೆ ತಿಳಿದುಕೊಳ್ಳಬೇಡ. ನಿನ್ನ ಹತ್ತಿರ ನಿಜವನ್ನು ಮರೆಮಾಚಲು ನನಗೆ ಮನಸ್ಸು ಬಾರದು. ಅದಕ್ಕೇ ಕಾಗದ ಬರೆಯಲು ಬೇಜಾರು. ನನಗೆ ಮತ್ತೇನೂ ಬೇಕಾಗಿಲ್ಲ. ಇಲ್ಲ, ಅವರೊಡನೆ ಇರಬೇಕು. ಇಲ್ಲದಿದ್ದರೆ ಅವರಿಗೆ ಸಂತೋಷವಾಗುವ ಯಾವುದಾದರೊಂದು ಕೆಲಸ ಮಾಡುತ್ತಿರಬೇಕು. ಈಗ ನಮ್ಮ ರೂಮು ಹೇಗಿದೆ ಅನ್ನುವುದು ಗೊತ್ತೆ? ನಮ್ಮತ್ತೆ ನಮ್ಮ ರೂಮಿಗೆ ಬರುವುದೇ ಅಪರೂಪ. ಮೊನ್ನೆ ಸುಮ್ಮನೆ ಹಾಗೇ ಬಂದರು. ಯಾವುದೋ ಪಠಗಳನ್ನು ಬೇರೆ ಕಡೆಗೆ ತಗಲುಹಾಕುತ್ತಿದ್ದೆ. ಒಂದು ಘಳಿಗೆ ನಿಂತುಕೊಂಡ್ಡು ನೋಡಿದರು.

ಕೆನ್ನೆಯ ಮೇಲೆ ಕೈಯಿಟ್ಟುಕೊಂಡು “ ಬೆಳಗ್ಗೆಯಿಂದ ಸಾಯಂಕಾಲದ ವರೆಗೂ ಏನು ಕೆಲಸ ಮಾಡುತ್ತಾಳಪ್ಪ ಅಂತಿದ್ದೆ. ಈಗ ಗೊತ್ತಾಯಿತು ” ಎಂದರು. “ ಇದು ಯಾವಾಗ ಹಾಕಿದ್ದೆ ಈ ಮಣಿ ತೋರಣ? ಅವತ್ತು ಹಾಕುತ್ತಾ ಇದ್ದ ಕಸೂತಿ ಇದೇಯೋ ? ” ಅಂತ ಇನ್ನೂ ಏನೇನೊ ಕೇಳಿದರು.

ಈಗ ಬಟ್ಟೆ ಇಸ್ತ್ರಿ ಮಾಡುವುದನ್ನು ಕಲಿತುಕೊಂಡಿದೇನೆ. ಅಲ್ಲಿದ್ದಾಗ ನಾನು ಬಟ್ಟೆ ಒಗೆಯುತ್ತಿರಲಿಲ್ಲ ಅನ್ನುವುದೂ, ಒಂದು ಸಲ ನಾನು ಬಟ್ಟೆ ಒಗೆಯುವುದಿಲ್ಲ ಅಂದಿದ್ದಕ್ಕೆ ಅಮ್ಮನ ಕೈಲಿ ಬೈಸಿಕೊಂಡದ್ದೂ ನಿನಗೆ ಗೊತ್ತು. ಆದರೆ ಈಗ ಅವರ ಬಟ್ಟೆಯನ್ನೆಲ್ಲಾ ನಾನೇ ಒಗೆಯುತ್ತಿದ್ದೇನೆ. ಇಸ್ತ್ರಿ ಮಾಡುವಾಗ ಬೆರಳು ಸುಟ್ಟು ಬೊಬ್ಬೆ ಬಂದಿದೆ. ಆದರೂ ನನಗೆ ನೋವೇ ಆಗುತ್ತಿಲ್ಲ. ಯಾಕೆಂದರೆ ಇಂತಹ ಸಣ್ಣ ಕೆಲಸಕ್ಕೂ ಸಿಕ್ಕುವ ಬಹುಮಾನ ನೆನಸಿಕೊಂಡರೆ ಅದರ ಕಷ್ಟ ನೋವು ಒಂದೂ ಕಾಣುವುದೇ ಇಲ್ಲ.

ಇಂತು ನಿನ್ನ ಗೆಳತಿ.

## ೧೧

ವೆಂಕು,

ನೆನ್ನೆ ಒಂದು ವಿಷಯ ನಡೆಯಿತು—ನಿನಗೆ ಹೇಳುವುದೋ ಬೇಡವೋ ಅಂತಿದ್ದೆ. ಆದರೆ ಹೇಳಿಯೇ ಬಿಡಬೇಕೆಂದು ಮನಸ್ಸಾದ್ದರಿಂದ ಮೊನ್ನೆಯೇ ಕಾಗದ ಬರೆದಿದ್ದರೂ ಇನ್ನೊಂದು ಕಾಗದ ಇಷ್ಟು ಬೇಗ ಬರೆಯಲು ಕುಳಿತಿದ್ದೇನೆ.

ನೆನ್ನೆ ನಮ್ಮ ಅತ್ತೆ ಏನೋ ಗೊಣಗಿಕೊಳ್ಳುತ್ತಿದ್ದರು : “ ಎಷ್ಟು ದಿವಸವೆಂದು ಇವರ ಸೇವೆಮಾಡುವುದೋ ನಾನು ಕಾಣೆ. ಪುಣ್ಯಾತ್ಮರ ಮನೆಯಲ್ಲಿ ಸೊಸೆಯರು ಎಂದರೆ ಹೇಗಿರುತ್ತಾರೆ ! ಒಂದು ಉಪ್ಪುಗಾರಣ (ಕುಡಿಯುವ ಪಾತ್ರೆಗಳನ್ನು ತೊಳೆಯುವುದು) ಗೋಮ ಸಹಿತ ಮಾಡುವುದಿಲ್ಲ, ಮಹರಾಯಿತಿ....” ಎಂದು. ಇದು ‘ ಅವರ ’ ಕಿವಿಗೆ ಬಿತ್ತು.

ಅವರು ಬಹಳ ಸಿಟ್ಟಿನಿಂದ ಬಂದರು. ನಾನು ಅವರು ನಗುವುದು, ಒಳ್ಳೆಯ ಮಾತಾಡುವುದು, ಮಾತ್ರ ನೋಡಿದ್ದೆ, ಕೇಳಿದ್ದೆ; ಆದರೆ ಸಿಟ್ಟು

ಬಂದು ಹುಬ್ಬು ಗಂಟಿಕ್ಕಿಕೊಂಡು ಗಟ್ಟಿಯಾಗಿ ಮಾತಾಡಿದುದನ್ನು ಕೇಳಿದ್ದು ಇವತ್ತೆ. ನನಗನ್ನಿಸಿತು "ಅದೇಕೆ ಇವರು ಇದಕ್ಕೆ ಇಷ್ಟು ಸಿಟ್ಟುಮಾಡಿಕೊಳ್ಳುವುದು? ಒಳ್ಳೆ ಮಾತಿನಲ್ಲೇ ಹೇಳಿದರೆ ಆಗದೆ?" ಎಂದು. ನನಗೂ ಸಿಟ್ಟುಬಂದಿತು. "ನನಗೆ ಕೆಲಸಮಾಡುವುದಕ್ಕೆ ಬರುವುದಿಲ್ಲ" ಎಂದೆ. ಅವರು ಮಾತನಾಡಲಿಲ್ಲ. ರೂಮುಬಿಟ್ಟು ಹೊರಟುಹೋದರು. ಅವರು ಹೊರಟುಹೋದ ಮೇಲೆ ನನಗೂ ಏನೋ ಸಂಕಟವಾಯಿತು. ಸುಮ್ಮನೆ ಸ್ವಲ್ಪ ಹೊತ್ತು ಅತ್ತುಬಿಟ್ಟೆ.

ಇಂತು ನಿನ್ನ ಗೆಳತಿ.

## ೧೨

ವೆಂಕು,

ಸ್ವಲ್ಪ ದಿನಗಳ ಹಿಂದೆ ಇಂತಹ ಕಾಗದವನ್ನು ನಾನು ಬರೆಯುತ್ತೇನೆಂದು ತಿಳಿದುಕೊಂಡಿರಲಿಲ್ಲ. ಏನಿದ್ದರೂ ನಮ್ಮ ಚೆಲ್ಲಾಟದ ಸಂತೋಷದ ಸುದ್ದಿಗಳನ್ನೇ ಬರೆಯುತ್ತೇನೆಂದುಕೊಂಡಿದ್ದೆ. ಈಗ ಎಲ್ಲ ವಿಪರೀತಕ್ಕಿಟ್ಟುಕೊಂಡಿದೆ. ನನಗೂ ಒಂದು ಸಿಟ್ಟು, ಜಂಭ; ಬಹಳ ಬಿಗಿಯಾಗಿದ್ದೇನೆ. ನಮ್ಮತ್ತೆ ಹುಬ್ಬು ಗಂಟಿಕ್ಕಿಕೊಂಡು ಮುಖ ದಪ್ಪಗೆ ಮಾಡಿಕೊಂಡಿದಾರೆ. 'ಅವರು' ಹೆಚ್ಚು ಹೊತ್ತು ಮನೆಯಲ್ಲೇ ಇರುವುದಿಲ್ಲ. ಅವತ್ತಿನಿಂದ ಇದುವರೆಗೂ ನನ್ನೊಡನೆ ಒಂದು ಮಾತೂ ಆಡಿಲ್ಲ. ಯಾವೊತ್ತೂ ನನಗೂ ಅವರಿಗೂ ಸಂಬಂಧವೇ ಇಲ್ಲವೇನೊ ಅನ್ನುವ ಹಾಗಿದ್ದಾರೆ 'ಅವರು'. ಅವರು ಹೀಗೆ ಇರುವುದು ನೋಡಿದರೆ ನನಗೆ ಬಹಳ ಅಳು ಬರುತ್ತದೆ. ಒಬ್ಬೊಬ್ಬಳೇ ಇದ್ದಾಗ ಅತ್ತೂ ಅತ್ತೂ ಅಳುತ್ತೇನೆ. ಆದರೂ ಸೋಲುವುದಕ್ಕೆ ಮನಸ್ಸು ಬಾರದು.

ನಾನು ನಿನಗೆ ಹಿಂದೆ ಬರೆದಿದ್ದುದು ಜ್ಞಾಪಕವಿದೆಯೇ? "ನಾವು ಪುಸ್ತಕಗಳನ್ನೋದುತ್ತೇವೆ" ಎಂದು. 'ವೇಣೀ ಸಂಹಾರ' ವೆನ್ನುವುದೊಂದು ಸಂಸ್ಕೃತ ನಾಟಕ. ಅದು ಭಾರತದ ಕಥೆ. ಅದರಲ್ಲಿ ಭೀಮ ಒಂದು ಸಲ ಬಹಳ ಕೋಪದಲ್ಲಿರುತ್ತಾನೆ. ಆಗ ದ್ರೌಪದಿ ಹತ್ತಿರ ಬಂದು ನಿಂತುಕೊಂಡದ್ದು ಗೊತ್ತಾಗಲಿಲ್ಲ. ಗೊತ್ತಾದ ಮೇಲೆ "ಕೋಪದಲ್ಲಿ ನೋಡಲಿಲ್ಲ. ಕ್ಷಮಿಸು" ಎಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಅವಳು

ಹೇಳುತ್ತಾಳೆ, "ನೀವು ಕೋಪಗೊಂಡಿದ್ದರೆ ನನಗೆ ಕೋಪವಿಲ್ಲ. ನೀವು ಉದಾಸೀನವಾಗಿದ್ದರೆ ನನಗೆ ದುಃಖ" ಎಂದು.

ಈಗ ನಾನು ಅದೇ ಸ್ಥಿತಿಯಲ್ಲಿದ್ದೇನೆ. ಅವರು ಅಂದು ಕೋಪ ಬಂದಾಗ ಒಂದು ಏಟು ಹೊಡೆದಿದ್ದರೂ ನನಗೆ ಸಂಕಟವಾಗುತ್ತಿರಲಿಲ್ಲ. ಆದರೆ ಈ ಉದಾಸೀನವನ್ನು ಸಹಿಸುವುದು ಮಾತ್ರ ನನ್ನಿಂದಾಗದು.

ರೂಮಿನಲ್ಲಿ ಒಟ್ಟಿಗೆ ಕೂತು ಕಥೆಗಳನ್ನೋದುತ್ತಾ ನಗುತ್ತಾ ನಲಿಯುತ್ತಾ ಕಾಲ ಕಳೆಯುತ್ತಿದ್ದುದು ಹೇಗಿತ್ತು? ಎದುರಿಗೆ ಬಂದಾಗ ಒಬ್ಬರ ಮುಖ ಪೂರ್ವಕ್ಕೆ ಮಾಡಿಕೊಂಡರೆ ಇನ್ನೊಬ್ಬರು ಪಶ್ಚಿಮಕ್ಕೆ ಮಾಡಿಕೊಳ್ಳುವುದು ಹೇಗಿದೆ?

ದೊಡ್ಡ ಕಾಗದ ಬರೆದೆನೆಂದು ಬೇಜಾರುಪಟ್ಟುಕೊಳ್ಳಬೇಡ. ಬರೆಯದಿದ್ದರೆ ನನಗೆ ಸಮಾಧಾನವಾಗುತ್ತಿರಲಿಲ್ಲ. ಅದಕ್ಕಾಗಿ ಕ್ಷಮಿಸು.

ಇಂತು ನಿನ್ನ ಗೆಳತಿ.

೧೩

ವೆಂಕು,

ನಿನ್ನ ಕಾಗದ ಬಂತು. ನಾನು ಮನಸ್ಸಿನಲ್ಲಿ ಏನು ನಿರ್ಧರಿಸಿದ್ದೆನೋ ಅದನ್ನೇ ನೀನೂ ಬರೆದಿದ್ದೀಯೆ. ಇಂದು ಅವರೊಡನೆ ಮಾತಾಡಿ ನನ್ನ ತಪ್ಪು ಒಪ್ಪಿಕೊಂಡು ಅವರ ಮನಸ್ಸಿಗೆ ಒಪ್ಪುವಂತೆ ಮುಂದೆ ನಡೆದುಕೊಳ್ಳುವೆನೆಂದು ಹೇಳುವುದೆಂದು ಆಗಲೇ ಮನಸ್ಸು ಮಾಡಿದ್ದೆ.

ಇವತ್ತು ಊಟವಾದ ಮೇಲೆ ಅವರು ಬಟ್ಟೆ ಹಾಕಿಕೊಳ್ಳಲು ರೂಮಿನೊಳಕ್ಕೆ ಹೋದರು. ನಾನೂ ಹೋದೆ. ಹಿಂತಿರುಗಿ ನೋಡಿದರು. ನಾನು ಬಂದದ್ದನ್ನು ನೋಡಿ ಮುಖವನ್ನು ಅತ್ತಕಡೆ ತಿರುಗಿಸಿಕೊಂಡರು. ನಾನು ರೂಮು ಬಾಗಿಲು ಮುಚ್ಚಿಕೊಂಡು ಅದನ್ನೇ ಒರಗಿಕೊಂಡು ನಿಂತೆನು. ಅವರು ಬಾಗಿಲು ಮುಚ್ಚಿದ ಸದ್ದು ಕೇಳಿ ಮತ್ತೆ ತಿರುಗಿ ನೋಡಿದರು. ಹೊರಗೆ ಹೋಗಲಾಗದಂತೆ ಬಾಗಿಲು ಮುಚ್ಚಿಕೊಂಡು ನಿಂತಿರುವುದನ್ನು ನೋಡಿ ಮತ್ತೆ ಮೊದಲಿನಂತೆ ಮುಖ ತಿರುಗಿಸಿಕೊಂಡರು. ಹೊದೆದಿದ್ದ ಶಲ್ಯ ತೆಗೆದು ಮಡಿಸಿದರು, ಮತ್ತೆ ಮತ್ತೆ ಮಡಿಸಿದರು. ಇದನ್ನು ನೋಡಿ ನನಗೇನೂ ತಿಳಿಯಲಿಲ್ಲ; ಅಳು ಬಂತು. ಹಾಗೇ ತಲೆ ಬಗ್ಗಿಸಿ

ಕೊಂಡು ಅತ್ತುಬಿಟ್ಟೆ. ಎಷ್ಟು ಹೊತ್ತು ಅಳುತ್ತಿದ್ದೆನೋ ಗೊತ್ತಿಲ್ಲ. ಅವರು ಹತ್ತಿರ ಬಂದು "ಏಕೆ ಅಳುತ್ತೀಯ?" ಎಂದರು. ನಾನು ಮಾತಾಡಲಿಲ್ಲ. ಮಾತಾಡದಿದ್ದರೆ ಅವರು ಕೋಪಗೊಳ್ಳಬಹುದೆಂದು ಗೊತ್ತಿತ್ತು. ಆದರೂ ಮಾತನಾಡಲಾಗಲಿಲ್ಲ.

"ಅವತ್ತು ತಾನು ಗಟ್ಟಿಯಾಗಿ ಮಾತನಾಡಿದುದು ತಪ್ಪು; ಮನಸ್ಸಿಗೇನೂ ತಿಳಿದುಕೊಳ್ಳಬೇಡ" ಎಂದು ಹೆಗಲ ಮೇಲೆ ಕೈಯಿಟ್ಟರು. ನಾನು ಅವರು ಕೋಪಗೊಂಡು ಬಯ್ಯಬಹುದು, ಹೊಡೆಯಬಹುದೆಂದು ಕೊಂಡಿದ್ದೆ. ಹೀಗೆ ಮಾತಾಡಿದ್ದು ಕೇಳಿ ನನ್ನ ತಪ್ಪನ್ನು ನಾನೂ ಒಪ್ಪಿಕೊಂಡೆ. "ನೀವು ಅವತ್ತು ಹೊಡೆದಿದ್ದರೂ ಚಿಂತೆಯಿರಲಿಲ್ಲ. ಹೀಗೆ ಮಾಡಬಾರದಾಗಿತ್ತು" ಎಂದೆ.

"ಹೊಡೆಯಬೇಕಾಗಿತ್ತು, ಹೊಡೆಯಬೇಕಾಗಿತ್ತು" ಎಂದು ಎರಡು ಮೂರು ಬಾರಿ ತಮ್ಮಲ್ಲಿ ತಾವೇ ಮೆಲ್ಲಗೆ ಅಂದುಕೊಂಡರು. ಹೊಡೆಯುವುದು ತಮ್ಮ ಕೈಯಲ್ಲಾಗದ ಕೆಲಸವೆಂಬಂತೆ ತಲೆಯಲ್ಲಾಡಿಸಿದರು. ಇದನ್ನು ಕಂಡು ನನ್ನ ಮನಸ್ಸು ಪೂರ್ತಿ ಸೋತುಹೋಯಿತು. ನನ್ನ ಬಿಗುಮಾನ ತಪ್ಪೆಂದು ಗೊತ್ತಾಯಿತು. "ನನಗೆ ಕೆಲಸ ಮಾಡಲು ಬೇಜಾರು; ಅಭ್ಯಾಸವಿಲ್ಲ. ಕಲಿತುಕೊಳ್ಳುವುದಕ್ಕೆ ಆಸೆಯೂ ಉಂಟಾಗಲಿಲ್ಲ" ಎಂದೆ.

"ನಿನಗೆ ಬಟ್ಟೆಗಳನ್ನು ಇಸ್ತ್ರಿ ಮಾಡುವುದು ಬರುತ್ತಿತ್ತೆ? ಎಷ್ಟು ದಿನದಿಂದ ನೀನು ಮೇಜಿನ ಮೇಲಿದ್ದ ಪುಸ್ತಕಗಳನ್ನು ತೆಗೆದಿಟ್ಟು ಅಚ್ಚುಕಟ್ಟು ಮಾಡುವುದನ್ನು ಅಭ್ಯಾಸಮಾಡಿದ್ದೆ?" ಎಂದು ಕೇಳಿದರು.

"ಇಲ್ಲ; ಹಾಗೆ ಮಾಡಿದರೆ ನಿಮಗೆ ಸಂತೋಷವಾಗುವುದೆಂದು ತಿಳಿದುಕೊಂಡೆ. ಆದ್ದರಿಂದ ಕಲಿತುಕೊಂಡೆ."

"ಹಾಗಾದರೆ ನಾನು ಹೇಳುವುದು ಸ್ವಲ್ಪ ಕೇಳು. ನೀನು ಮನೆಯ ಕೆಲಸದಲ್ಲಿ ಅಮ್ಮನಿಗೆ ನೆರವಾದರೆ ಅವಳಿಗೂ ಸಂತೋಷವಾಗುತ್ತದೆ. ಅದನ್ನು ನೋಡಿದರೆ ನನಗೂ ನಿನ್ನಲ್ಲಿ ಪ್ರೀತಿ ಹೆಚ್ಚುತ್ತದೆ."

ವೆಂಕೂ, ಕೆಲಸಮಾಡಿದರೆ ಅವರಿಗೆ ನನ್ನಲ್ಲಿ ಪ್ರೀತಿ ಹೆಚ್ಚುತ್ತದೆ

ಯೆಂದುಕೊಳ್ಳುತ್ತಾ ನಾನು ಆದಷ್ಟು ಕೆಲಸಗಳಲ್ಲಿ ಅತ್ತೆಯವರಿಗೆ ನೆರ ವಾಗಲು ಮೊದಲು ಮಾಡಿದ್ದೇನೆ.

ಸಾಯಂಕಾಲ ನನ್ನ ನಗುಮುಖವನ್ನು ನೋಡಿ ಅತ್ತೆಯವರು, "ಮಹರಾಯಿತಿ, ನೀನೇನು ಕೆಲಸಮಾಡದಿದ್ದರೂ ಚಿಂತೆಯಿಲ್ಲ. ಸದ್ಯಕ್ಕೆ ನಗುನಗುತ್ತಾ ಓಡಾಡಿಕೊಂಡಿದ್ದರೆ ಸಾಕು. ಅವನು ಮುಖ ಸಿಂಡರಿಸಿ ಕೊಂಡು ನೀನು ಮುಖ ದಪ್ಪಮಾಡಿಕೊಂಡಿರುವುದನ್ನು ಯಾರು ನೋಡು ವುದಕ್ಕಾಗುತ್ತೆ, ಹೇಳು!'' ಎಂದರು.

ಇಂತು ನಿನ್ನ ಗೆಳತಿ.

## ೧೪

ವೆಂಕು,

ಮಳೆ ಬಂದಮೇಲೆ ಬಿಸಿಲು ಚೆನ್ನಾಗಿ ಬರುತ್ತಲ್ಲವೆ? ಈಗ ಹಾಗೆ ತಿರುಗಿ ಮೊದಲಿನ ಸುಖಕ್ಕಿಂತ ಹೆಚ್ಚಾದ ಸಂತೋಷದ ದಿನಗಳು ಬಂದಿವೆ.

ನೆನ್ನೆ ನಾನು ರೂಮಿಗೆ ಹೋದಾಗ ಅವರು ಮಂಚದ ಮೇಲೆ ಕುಳಿತಿದ್ದರು. ನಾನು ಒಳಗೆ ಹೋದ ಕೂಡಲೆ ನನ್ನ ಕೈಹಿಡಿದು ಪಕ್ಕದಲ್ಲಿ ಕೂಡಿಸಿಕೊಂಡರು. ನನ್ನ ಮುಂದಲೆಯನ್ನು ಹಿಂದಕ್ಕೆ ಸವರುತ್ತ "ವಿಶಾಲೀ, ಈಗ ನೋಡು, ನೀನು ಸರಿಯಾದ ಹುಡುಗಿ. ಅಮ್ಮ ನಿನ್ನನ್ನು ಹೊಗಳು ತ್ತಿದ್ದುದನ್ನು ಕೇಳಿದೆಯಾ?" ಎಂದರು.

ವೆಂಕು, ಅವರು ನನ್ನ ಮುಂದಲೆಯನ್ನು ಸರಿಮಾಡಿ ಹೇಗೆ ಮಾತ ನಾಡಿಸುವರೋ ಹಾಗೆ ನಾನೂ ಅವರ ಕ್ರಾಪಿನ ಕೂದಲನ್ನು ಸರಿಮಾಡಿ ಬನೀನಿನ ಕಾಲರನ್ನು ಸರಿಮಾಡಬೇಕೆನ್ನಿಸುತ್ತದೆ. ಆದರೆ ಅದು ಏನು ಕಾರಣವೋ ಕಾಣೆ, ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ಆಮೇಲೆ, ಅವರು ಹೊರಟುಹೋದ ಮೇಲೆ, ಏಕೆ ನಾನು ಹಾಗೆ ಮಾಡಲಿಲ್ಲವೆಂದು ನೊಂದು ಕೊಳ್ಳುತ್ತೇನೆ.

ನಾನು ಹೀಗೆಯೇ ಸರಿಯಾಗಿ ನಡೆದುಕೊಂಡರೆ ಬಹುಮಾನಕೊಡು ವೆನೆಂದಿದ್ದಾರೆ. ನಾನು ಒಂದು ಜೊತೆ ಬೊಂಬಾಯಿಬಳೆ ಬೇಕೆಂದು ಕೇಳಿದ್ದೇನೆ.

ಇಂತು ನಿನ್ನ ಗೆಳತಿ.

## ೧೫

ವೆಂಕು,

ನಮ್ಮ ಮನೆಯ ಪಕ್ಕದಲ್ಲಿ ಕಮಲಮ್ಮ ಅನ್ನುವರೊಬ್ಬರಿದ್ದಾರೆ. ಅವರಿಗೊಂದು ಮಗು ಇದೆ. ಅವರ ಯಜಮಾನರಿಗೆ ೨೦ ರೂಪಾಯಿ ಸಂಬಳದ ಕೆಲಸವಿದೆ. ಮನೆ ತಪ್ಪಿದ ನಾದಿನಿ, ಅತ್ತೆ, ಮಾವ, ಇದ್ದಾರೆ. ದೊಡ್ಡ ಸಂಸಾರ; ಸಂಬಳ ಸ್ವಲ್ಪ; ಹೊಟ್ಟೆಗಾದರೆ ಬಟ್ಟೆಗಿಲ್ಲ, ಬಟ್ಟೆಗಾದರೆ ಹೊಟ್ಟೆಗಿಲ್ಲ ಎನ್ನುವ ಹಾಗಿದ್ದಾರೆ. ಆದರೂ ಬಹಳ ನೆಮ್ಮದಿಯಾಗಿದ್ದಾರೆ. ನಗುತ್ತಾ ನಲಿಯುತ್ತಾ ಜೀವನ ಸಾಗಿಸುತ್ತಿದ್ದಾರೆ. ನಮ್ಮ ಬೀದಿಯ ಕೊನೆಯಲ್ಲಿ ರಾಜಮ್ಮ ಎಂದು ಇನ್ನೊಬ್ಬರಿದ್ದಾರೆ. ಅವರ ಯಜಮಾನರಿಗೆ ೫೦ ರೂಪಾಯಿಗಳ ಕೆಲಸವಿದೆ. ಮನೆಯಲ್ಲಿ ಎಲ್ಲೂ ಇಲ್ಲದ ಆಡಂಬರ. ಇರುವವರು ಗಂಡಹೆಂಡಿರಿಬ್ಬರೇ ಆದರೂ ಬರುವ ೫೦ ರೂಪಾಯಿಗಳು ಸಾಲದು; ಗಂಡಹೆಂಡರಿಬ್ಬರೂ ಒಳ್ಳೆಯ ಆಗರ್ಭ ಶ್ರೀಮಂತರಂತಿರರ ವುದಕ್ಕೆ ಆಸೆಪಡುತ್ತಿದಾರೆ.

ಇದನ್ನು ನೋಡಿ ನಾನು ಅವರನ್ನು ಕೇಳಿದೆ: "ಕಮಲಮ್ಮನವ ಮನೆಯುವರಿಗೆ ಬರುವುದು ೨೦ ರೂಪಾಯಿ ಸಂಬಳ. ಮನೆ ತುಂಬ ಜನ ಆದರೂ ಎಲ್ಲರೂ ಸಂತೋಷವಾಗಿದಾರೆ. ರಾಜಮ್ಮನ ಮನೆಯವರಿಗೆ ಬರುವುದು ೫೦ ರೂಪಾಯಿ ಸಂಬಳ, ಆದರೂ ನೆಮ್ಮದಿಯಿಲ್ಲ. ತಿಂಗಳಲ್ಲಿ ಎಂಟು ದಿನ ರಾಜಮ್ಮನವರ ಮುಖ ದಪ್ಪಗಿರುತ್ತದೆ. ಹದಿನೈದು ದಿನ ಅವರ ಯಜಮಾನರ ಮೋರೆ ಕಪ್ಪಿಟ್ಟಿರುತ್ತದೆ ಏಕೆ?"

ಅದಕ್ಕೆ ಅವರು ಹೇಳಿದರು: "ಆಚೆಯ ಬೀದಿಯ ನರಸಮ್ಮನವರ ಮಗಳನ್ನು ನೋಡಿದ್ದೀಯಾ?"

"ಹೌದು, ನೋಡಿದ್ದೇನೆ."

"ಆ ಹುಡುಗೀಗೆ ಹಲ್ಲುಬ್ಬು, ಹೌದೋ ಅಲ್ಲವೊ?"

"ಹೌದು."

"ಅವರ ಅಣ್ಣನ ಮಗನಿಗೆ ಆ ಹುಡುಗಿಕೊಟ್ಟದ್ದಾರೆ. ಮೊದಲು ಹುಡುಗ 'ಹುಡುಗಿಗೆ ಹಲ್ಲುಬ್ಬು; ನಾನೊಲ್ಲೆ' ಅಂದ. ಆಮೇಲೆ ಅವರಪ್ಪ ಅಮ್ಮ 'ಹಳೆ ನಂಟಸ್ತನ ಬಿಟ್ಟು ಹೋಗಬಾರದುಕಣೋ! ಇಷ್ಟರ ಮೇಲೆ

ಒಂದೇ ಹುಡುಗಿ; ಕೊಟ್ಟು ಬಿಟ್ಟು (ಕೊಡಬೇಕಾದ ಉಡುಗೆರೆಗಳನ್ನೆಲ್ಲಾ ಕೊಟ್ಟು) ಮಾಡುತ್ತಾರೆ' ಎಂದು ಹೇಳಿದ ಮೇಲೆ ಹುಡುಗ ಒಪ್ಪಿಕೊಂಡ. ಮೊನ್ನೆ ದೀಪಾವಳಿಗೆ ಬಂದಾಗ ಅವರತ್ತೆ ರಾಮಯ್ಯನವರ ಮಗಳನ್ನು ತೋರಿಸಿ 'ನಮ್ಮ ಸೀತು ಹಲ್ಲು ಇಷ್ಟು ಉಬ್ಬೇನೋ?' ಎಂದು ಕೇಳಿದ ರಂತೆ. ರಾಮಯ್ಯನವರ ಮಗಳ ಹಲ್ಲನ್ನು ನೋಡಿದ ಮೇಲೆ ಅವನಿಗೆಷ್ಟೋ ಸಮಾಧಾನವಾಗಿರಬೇಕು. ಈಗ ಹದಿನೈದು ದಿನಗಳ ಹಿಂದೆ ನನಗೆ ಮೈಸೂರಿನಲ್ಲಿ ಸಿಕ್ಕಿದಾಗ ಆ ಹುಡುಗ ಮಾತಿಗೆ ಮಾತು ಬಂದಾಗ ಹೇಳಿದ 'ನನ್ನ ಹೆಂಡತಿಯು ಉಬ್ಬು ಹಲ್ಲೇನೂ ಅಲ್ಲ ಅನ್ನಿ' ಎಂದು. ಹಾಗೆ, ನೋಡು. ಕಮಲಮ್ಮನವರು ತಮಗಿಂತ ಕಡಮೆಯಾಗಿರುವವರನ್ನೆಲ್ಲ ನೋಡಿಕೊಂಡು ನರಸಮ್ಮನವರ ಅಳಿಯನ ಹಾಗೆ ನಾವೆಷ್ಟೋ ವಾಸಿ ಎಂದುಕೊಂಡು ಸಂತೋಷವಾಗಿದಾರೆ. ರಾಜಮ್ಮನವರು ತಮಗೆ ಸಿಕ್ಕದ್ದಕ್ಕೆ ಆಸೆಪಟ್ಟು ಸುಮ್ಮನೆ ಒದ್ದಾಡುತ್ತಾರೆ" ಎಂದು ಹೇಳಿದರು.

ನನಗೆ ಅವರು ಹೇಳಿದುದು ಸರಿ ಎಂದು ತೋರಿತು. ನಾನು ಕಮಲಮ್ಮನವರ ಹಾಗಿರಬೇಕೆಂದು ಮನಸ್ಸುಮಾಡಿದೇನೆ. ಸರಿಯಲ್ಲವೆ ಹೇಳು. ಆಸೆಮಾಡುತ್ತಾ ಹೋದರೆ ಕೊನೆಯೆಲ್ಲಿ? ಕಾಗದ ಬಹಳ ಉದ್ದವಾಗಿದೆ; ಬೇಜಾರುಮಾಡಿಕೊಳ್ಳಬೇಡ.

ಇಂತು ನಿನ್ನ ಗೆಳತಿ.

## ೧೬

ವೆಂಕು,

"ನಿನ್ನ ಕಾಗದ ದೊಡ್ಡದಾಗಿದ್ದರೂ ಚೆನ್ನಾಗಿದೆ. ನೀನು ನನ್ನ ವಿಷಯ ಏನು ತಿಳಿದುಕೊಂಡಿದೀಯ? ನೀನು ದೊಡ್ಡ ಕಾಗದ ಬರೆದರೆ ನನಗೆ ಓದುವುದಕ್ಕೆ ಪುರುಸತ್ತಿಲ್ಲವೆಂದು ತಿಳಿದುಕೊಂಡೆಯಾ? ಆದರ ಬದಲು ನಿನ್ನ ಕಾಗದ ಬರುವುದನ್ನೇ ಕಾಯುತ್ತಿರುತ್ತೇನೆ. ಬೇಜಾರಾದಾಗ ನಿನ್ನ ಹಳೆಯ ಕಾಗದಗಳನ್ನೂ ಇನ್ನೊಂದಿನ್ನೊಂದು ಸಲ ಓದುತ್ತೇನೆ" ಎಂದು ಬರೆದಿರುವೆ.

ವೆಂಕು, ಈಗ ನನಗೆ ಕಾಗದ ಬರೆಯುವುದಕ್ಕೇ ಪುರುಸತ್ತಿಲ್ಲ. ಅವರು ಮನೆಯಲ್ಲಿದ್ದಾಗ ಹರಟೆ. ವೆಂಕು, ನಿನಗೆ ಹೇಳಬೇಕೆನ್ನುವುದು ಎಷ್ಟೋ

ಇದೆ. ಕೆಲವನ್ನು ನಿನಗೆ ಹೇಳಬೇಕೆಂದು ಜ್ಞಾಪಿಸಿಕೊಂಡಿರುತ್ತೇನೆ. ಆದರೆ ಬರೆಯುವುದಕ್ಕೆ ಕುಳಿತಾಗ ಎಲ್ಲೋ ಮರೆತುಹೋಗುತ್ತದೆ. ಇನ್ನು ಕೆಲವನ್ನು ನಿನಗೆ ಬರೆದು ತಿಳಿಸುವುದಕ್ಕೆ ಆಗುವುದಿಲ್ಲ.

ಮೊನ್ನೆ ಅವರು ಯಾವುದೋ ಒಂದು ಪುಸ್ತಕ ಓದುತ್ತಾ ಹೇಳಿದರು: ನೋಡು, ಇಲ್ಲೊಬ್ಬ ಕವಿ ಬರೆದಿರುವುದನ್ನು.—" ಅಯ್ಯೋ ಕವಿಗಳೆಲ್ಲಾ ತಾವು ಹೇಳಬೇಕೆಂದಿದ್ದದ್ದರಲ್ಲಿ ಅರ್ಧದಷ್ಟು ಹೇಳಿದ್ದರೆ...." ಎಂದು. ಹೌದು ಅದು ನಿಜವೆಂದು ಕಾಣುತ್ತದೆ. ನನಗೆಷ್ಟು ಸಂತೋಷವಾಗಿದೆಯೋ ಅದರರ್ಧದಷ್ಟೂ ನಿನಗೆ ಹೇಳುವುದಕ್ಕಾಗಲಿಲ್ಲ.

ಈಗ ನನಗೆ ಮನೆಯ ಕೆಲಸಗಳನ್ನು ಮಾಡಲು ಬಲು ಆಸೆ. ಏಕೆಂದರೆ ಕೆಲಸಮಾಡುವಾಗಲೆಲ್ಲ ಅವರು ಹೇಳಿದುದು ಜ್ಞಾಪಕಬರುತ್ತದೆ: "ನಾನು ನಿನ್ನನ್ನು ಹೆಚ್ಚು ಪ್ರೀತಿಸುತ್ತೇನೆ" ಎಂದದ್ದು. ಆಮೇಲೆ, ಬಹುಮಾನ ಬೇರೆ. ಇನ್ನೇನು ಬಹುಮಾನ ಸಿಕ್ಕುವ ದಿನ ಹತ್ತಿರ ಬಂತು. ಇದು ಹಾಗಿರಲಿ ಯಾವತ್ತೊ ಒಂದು ದಿನ ಸಿಗುವ ಬಹುಮಾನ. ನಿತ್ಯವೂ ಸಾಯಂಕಾಲ ಹತ್ತಿರ ನಿಲ್ಲಿಸಿಕೊಂಡು ಹೆಗಲ ಮೇಲೆ ಕೈಯಿಟ್ಟು ಅವರು ಮೆಲ್ಲಗಾಡುವ ಪ್ರೀತಿಯ ಮಾತುಗಳನ್ನು ನೆನಸಿಕೊಂಡರೆ ನನ್ನನ್ನೇ ನಾನು ಮರೆತುಹೋಗುತ್ತೇನೆ

ಇಂತು ನಿನ್ನ ಗೆಳತಿ.

## ೧೭

ವೆಂಕು,

ನಾನು ನಿನಗೆ ಹೇಳಿದ್ದೆ ಅಲ್ಲವೆ ಬಹುಮಾನದ ಬೊಂಬಾಯಿಬಳೆಯ ವಿಷಯವನ್ನು? ನೆನ್ನೆ ಬಹಳ ಜಗಳಮಾಡಿ—'ಜಗಳ' ಅಂದರೆ ಜಗಳ ಅಲ್ಲ—ನಾಳೆ ಕೊಟ್ಟೇಕೊಡಬೇಕೆಂದು ಒಪ್ಪಿಸಿದೆ. ಆಗಲಿ ಎಂದು ಹೇಳಿದರು.

ಇವತ್ತು ಬೆಳಗ್ಗೆ ಬೀದಿಯಲ್ಲಿ "ಬೊಂ ಬಾ ಯಿ ಬ ಳೇ" ಎಂದು ಕೂಗಿಕೊಂಡು, ಒಬ್ಬ ಬಳೆಗಾರ ಹೋಗುತ್ತಿದ್ದ. ಪಕ್ಕದಲ್ಲಿ ನಿಂತಿದ್ದ ತಮ್ಮ ತಂಗಿಯನ್ನು ಕರೆದು "ಲೇ ಬೇಗ ಹೋಗಿ ಬಳೆಯವನನ್ನು ಕರೆದು ವಿಶಾಲಿ ಕೈಗಾಗುವ ಎರಡು ಜೊತೆ ಬಳೆ ತೆಗೆದುಕೊಂಡು ಬಾ," ಎಂದು ನಾಲ್ಕಾಣೆ ಕೊಟ್ಟರು. ಅವಳು ತಂದಮೇಲೆ "ತೆಗೆದುಕೊ, ಒಂದು ಜೊತೆ ಕೇಳಿದ್ದಕ್ಕೆ

ಎರಡು ಜೊತೆ" ಎಂದರು. ನನಗಾಗ ಅರ್ಥವಾಯಿತು. ಬೊಂಬಾಯಿಬಳೆ ಎಂದು ನಾನು ಕೇಳಿದ್ದಕ್ಕೆ ಬೊಂಬಾಯಿಬಳೆ ಬಂತು. ಆದರೆ ಚಿನ್ನದ್ದು ಎಂದು ಮನಸ್ಸಿನಲ್ಲಂದುಕೊಂಡಿದ್ದಕ್ಕೆ ಗಾಜಿನದು ಬಂತು. ನನಗೆ ಬಹಳ ಸಿಟ್ಟುಬಂತು. ನಾನು ಅಲ್ಲಿ ಒಂದು ಘಳಿಗೆಯೂ ನಿಲ್ಲದೆ ಹೊರಟುಬಂದೆ.

ಇಂತು ನಿನ್ನ ಗೆಳತಿ.

೧೮

ವೆಂಕು,

ನಾನು ಅವರನ್ನಿದುವರೆಗೂ ಮಾತಾಡಿಸಿಲ್ಲ. ರೂಮಿಗೂ ಹೋಗಿಲ್ಲ. ಏನೋ ನನಗೆ ಸಿಟ್ಟು. ಮೊನ್ನೆ ನಾನು ಹಜಾರದಿಂದ ಅಡಿಗೆಮನೆಗೆ ಹೋದಾಗ ಅವರು ಬಾಗಿಲ ಬಳಿ ನಿಂತಿದ್ದರು. ಹತ್ತಿರದಲ್ಲಿ ಅವರ ತಂಗಿ ಇದ್ದಳು. "ಏನೇ, ನಿಮ್ಮತ್ತಿಗೆಗೇಕೇ ಸಿಟ್ಟುಬಂದಿದೆ? ನನ್ನನ್ನೇಕೆ ಮಾತಾಡಿಸುವುದಿಲ್ಲ? ನೋಡು, ಹೇಗೆ ನಾಗರಹಾವಿನ ಹಾಗೆ ಹೋಗುತ್ತಾಳೆ!" ಎಂದರು. ಅಲ್ಲದೆ ನನ್ನನ್ನು ನೋಡಿದಾಗಲೆಲ್ಲ ನನಗೆ ಸಿಟ್ಟು ಬರುವಹಾಗೆ ಒಂದು ತರಹ ನಗುತ್ತಾರೆ. ನನಗಿನ್ನೂ ಸಿಟ್ಟು ಹೆಚ್ಚುತ್ತದೆ.

ನೆನ್ನೆ ಸಾಯಂಕಾಲ ನಾನೊಬ್ಬಳೇ ಮನೆಯಲ್ಲಿದ್ದೆ. ಅವರು ಬಂದರು. ಅವರು ಬಂದದ್ದು ನೋಡಿ ನಾನು ಅಡಿಗೆ ಮನೆಗೆ ಹೋದೆ. ಅವರು ಅಲ್ಲಿಗೂ ಬಂದರು. ಅಡಿಗೆ ಮನೆಯ ಒಂದು ಕೊನೆಗೆ ಹೋದೆ, ಅಲ್ಲಿಗೂ ಬಂದರು. ನಾನಿನ್ನೆಲ್ಲಿಗೂ ಹೋಗಲಾಗಲಿಲ್ಲ. ಗೋಡೆಯ ಕಡೆಗೆ ಮುಖ ತಿರುಗಿಸಿಕೊಂಡೆ. ಅವರು ನನ್ನೆರಡು ತೋಳುಗಳನ್ನೂ ಹಿಡಿದುಕೊಂಡು ತಮ್ಮ ಕಡೆಗೆ ತಿರುಗಿಸಿದರು. ನನಗಿದ್ದ ಕೋಪವೆಲ್ಲ ಹೋಗಿ ನಗುಬಂತು; ನಕ್ಕುಬಿಟ್ಟೆ. ಅವರೂ ನಕ್ಕುಬಿಟ್ಟರು. ಆಮೇಲೆ ನನ್ನ ಕೈಹಿಡಿದು ರೂಮಿಗೆಳೆದುಕೊಂಡು ಹೋದರು. ಮಂಚದ ಮೇಲೆ ಒಂದು ಕೊನೆಯಲ್ಲಿ ಕೂಡಿಸಿ ಪಕ್ಕದಲ್ಲಿ ಕೂತುಕೊಂಡರು. ಓಡಿಹೋಗದ ಹಾಗೆ ಎರಡು ಕೈಗಳನ್ನೂ ಹಿಡಿದುಕೊಂಡರು. 'ಏನು ಸಿಟ್ಟು?' ಎಂದು ಕೇಳಿದರು.

ನಾನು ಮಾತಾಡಲಿಲ್ಲ. ಆದರೆ ನಗುಮಾತ್ರ ತಡೆಯುವುದಕ್ಕಾಗದಷ್ಟು ಬರುತ್ತಿತ್ತು.

" ಮಾತನಾಡುವುದಿಲ್ಲವೆ ? " ಎಂದು ಕೇಳಿದರು. ' ಉಹು ' ಎನ್ನುವಂತೆ ತಲೆಯಲ್ಲಾಡಿಸಿದೆ. ' ಮಾತನಾಡುವ ಹಾಗೆ ಮಾಡಲೋ ? ' ಎಂದು ಜೇಬಿನಿಂದ ಒಂದು ಕಾಗದದ ಪೊಟ್ಟಣ ತೆಗೆದರು. ಕಾಗದ ಬಿಚ್ಚಿ ಒಂದು ಜೊತೆ ಚಿನ್ನದ ಬಳೆ ತೆಗೆದರು. ' ತೆಗೆದುಕೊ ' ಎಂದರು. ' ಈಗ ಮಾತಾಡುತ್ತೀಯಾ ? ' ಎಂದರು. ನಕ್ಕುಬಿಟ್ಟೆ. " ಈಗ ನಾನೊಂದು ಮಾತು ಕೇಳುತ್ತೇನೆ, ಹೇಳುತ್ತೀಯ ? ' ಎಂದರು.

' ಹು ' ಎಂದೆ.

' ನಿನಗೆ ಬಳೆ ಏಕೆ ? '

' ಹಾಕಿಕೊಳ್ಳುವುದಕ್ಕೆ. '

' ಏಕೆ ಹಾಕಿಕೊಳ್ಳಬೇಕು ? '

' ಚೆನ್ನಾಗಿ ಕಾಣುವುದಕ್ಕೆ. '

' ಯಾರ ಕಣ್ಣಿಗೆ ? '

' ಇನ್ನು ಯಾರ ಕಣ್ಣಿಗೆ ' ಎಂದು ನಾನವರ ಕಡೆ ನೋಡಿದೆ.

' ನಾನೊಂದು ಮಾತು ಹೇಳುತ್ತೇನೆ. ಏನೂ ತಿಳಿದುಕೊಳ್ಳುವುದಿಲ್ಲವೊ ? '

' ಇಲ್ಲ, ಹೇಳಿ. '

' ಹಾಗಾದರೆ ಹೇಳುತ್ತೇನೆ. ನೋಡು, ಚೆನ್ನಾಗಿ ಕಾಣುವುದರಲ್ಲಿ ಮೂರು ತರವಿದೆ. ಒಳ್ಳೆಯ ಒಡವೆ ಬಟ್ಟೆ ಹಾಕಿಕೊಳ್ಳುವುದರಿಂದ ಚೆನ್ನಾಗಿ ಕಾಣಬಹುದು, ಹೌದೊ ? '

' ಗೊತ್ತಾಯಿತು ' ಅನ್ನುವಂತೆ ತಲೆಯಲ್ಲಾಡಿಸಿದೆ.

' ಇದು ಚೆನ್ನಾಗಿರುವುದೇ ಆದರೂ ಇದು ಮನುಷ್ಯರು ಮಾಡಿಕೊಳ್ಳುವ ಅಲಂಕಾರ. ಇದಕ್ಕಿಂತಲೂ ದೇವರು ಕೊಟ್ಟಿರುವ ಅಲಂಕಾರ ಒಂದಿದೆ. ಅದು ಇನ್ನೂ ಚೆನ್ನಾಗಿರುತ್ತೆ. ಯಾವುದು, ಗೊತ್ತೆ ? ಕೈಕಾಲು ಚೆನ್ನಾಗಿದ್ದು ಕಣ್ಣು ಮೂಗು ನೇರವಾಗಿದ್ದು ಬೆಳ್ಳಗೆ ತೆಳ್ಳಗೆ ಇರುವುದು. ಶಾಕುಂತಲ ನಾಟಕ ನಾವು ಓದಿದೆವಲ್ಲ, ಅದರಲ್ಲಿ ದುಷ್ಯಂತ ಶಕುಂತಲೆಯನ್ನು ಋಷ್ಯಾಶ್ರಮದಲ್ಲಿ ನೋಡಿದಾಗ ತನ್ನಲ್ಲೇ ಹೇಳಿಕೊಂಡದ್ದು ಜ್ಞಾಪಕವಿದೆಯೋ "....ಸ್ವಭಾವವಾಗಿ ಚೆನ್ನಾಗಿರುವವರಿಗೆ ಅಲಂಕಾರ

ಏಕೆ" ಎಂದು? ಇದು ಅಲ್ಲದೆ ಇನ್ನೂ ಒಂದಿದೆ. ಇದೇ ಎಲ್ಲದಕ್ಕಿಂತಲೂ ಚೆನ್ನಾದದ್ದು. ಪಡೆಯಬೇಕು ಎಂದು ಕಷ್ಟಪಟ್ಟು ತಪಸ್ಸು ಮಾಡಿದವರಿಗೆ ಇದು ಸಿಕ್ಕುತ್ತದೆ. ಅದೇನು ಅಂದರೆ ಒಳ್ಳೆಯ ಗುಣ, ಒಳ್ಳೆಯ ನಡತೆ. ಕಣ್ಣು ಮೂಗು ನೇರವಾಗಿದ್ದವರನ್ನೇನೋ ನೋಡಿದಾಗ 'ಎಷ್ಟು ಚೆನ್ನಾಗಿದ್ದಾರೆ' ಎನ್ನಿಸಬಹುದು. ಆದರೆ ಅವರ ನಡೆ ನುಡಿ ಸರಿಯಾಗಿಲ್ಲವೆಂದ ಮೇಲೆ ಅವರನ್ನು ಕಂಡರೆ ಏನೋ ಒಂದು ಬಗೆಯ ಅಸಹ್ಯವಾಗುತ್ತದೆ. ನನ್ನ ಈ ಉಪನ್ಯಾಸ ಕೇಳಿ ನಿನಗೆ ಬೇಜಾರಾಗುತ್ತೇನು?'

'ಇಲ್ಲ' ಎಂದೆ. ಅದೇನೋ ನನಗೆ ಅವರು ಮಾತಾಡುತ್ತಿದ್ದರೆ ಕೇಳುವುದಕ್ಕೆ ಬೇಜಾರಾಗುವುದಿಲ್ಲ. ಆಮೇಲೆ, ಇದಕ್ಕೆಲ್ಲ ಏನೇನೋ ದೊಡ್ಡ ದೊಡ್ಡ ಹೆಸರು ಹೇಳಿದರಮ್ಮ, ನನಗೆ ಜ್ಞಾಪಕಕ್ಕೆ ಬರುವುದಿಲ್ಲ. ಹು, ಈಗ ಗೊತ್ತಾಯಿತು. ನೋಡು—"ಅಲಂಕಾರ ಸೌಂದರ್ಯ", "ಅಂಗಸೌಂದರ್ಯ" ಮತ್ತು "ಆತ್ಮಸೌಂದರ್ಯ" ಎಂದು.

"ನೋಡು, ಈಗ ನೀನೊಪ್ಪಿದರೆ ಇದಿಟ್ಟುಕೊ, ಇಲ್ಲದಿದ್ದರೆ ವಾಪಸು ಕೊಡು, ಬೇರೆ ತರೋಣ. ನಾನು ಅಂಗಡಿಯವನಿಗೆ, 'ತೋರಿಸಿಕೊಂಡು ಬರುತ್ತೇನೆ' ಎಂದು ಹೇಳಿ ತಂದಿದ್ದೇನೆ" ಎಂದರು.

ನನಗೇಕೋ ಬಳೆ ಬೇಡ ಅನ್ನಿಸಿತು. 'ಹಿಂದಕ್ಕೆ ಕೊಟ್ಟುಬಿಡಿ, ನನಗೆ ಬಳೆ ಬೇಡ' ಅಂದೆ.

"ಏಕೆ ಬೇಡ?"

"ಇದಕ್ಕಿಂತಲೂ ಚೆನ್ನಾಗಿರುವ ಅಲಂಕಾರ ನಾನೇ ಸಂಪಾದಿಸುತ್ತೇನೆ" ಎಂದೆ.

"ಅದೀಗ ಸರಿ; ನೀನು ಒಳ್ಳೆಯ ಹುಡುಗಿ" ಎಂದು ನನ್ನ ಕೆನ್ನೆಯ ಮೇಲೆ ಮೆತ್ತಗೊಂದು ಏಟುಕೊಟ್ಟರು.

ಇಂತು ನಿನ್ನವಳು.

## ೧೯

ವೆಂಕು,

ಅದೇನೋ ನನಗೆ ತಿಳಿಯದು, ಏನಾದರೂ ಹೊಸದಿದ್ದರೆ ನಿನಗೆ ಕಾಗದ ಬರೆಯದಿದ್ದರೆ ನನಗೆ ಸಮಾಧಾನವೇ ಇರುವುದಿಲ್ಲ. ಏನಾದರೂ

ದುಃಖವಾದರೆ ನಿನಗೆ ಹೇಳಿಕೊಂಡರೆ ಇದ್ದದ್ದರಲ್ಲಿ ಮನಸ್ಸು ಸಮಾಧಾನ ಗೊಂಡ ಹಾಗೆ ಆಗುವುದು. ಸಂತೋಷವಾದದ್ದನ್ನು ಬರೆದರೆ ಮಾಡಬೇಕಾದ ಕೆಲಸವನ್ನು ಮಾಡಿದುದರಿಂದ ಬರುವ ತೃಪ್ತಿ ಉಂಟಾಗುವುದು.

ನಿನ್ನೆ ಮಧ್ಯಾಹ್ನ ಕಾಫಿ ತೆಗೆದುಕೊಂಡು ರೂಮಿಗೆ ಹೋದೆ. ಅವರು ಕಿಟಕಿಯಲ್ಲಿ ಏನೋ ನೋಡುತ್ತಿದ್ದರು. ನಾನು ಏಕೆ ಕೂಗಲಿ ಎಂದು ಮೇಜಿನ ಮೇಲೆ ಕಾಫಿ ಇಟ್ಟು ಒಂದುಕಡೆ ನಿಂತುಕೊಂಡೆ. ಸ್ವಲ್ಪ ಹೊತ್ತಾದ ಮೇಲೆ ಕೂಡ ಅವರು ತಿರುಗಿ ನೋಡಲಿಲ್ಲ; ಏನು ನೋಡು ತ್ತಿರಬಹುದೆಂದು ಹಾಗೇ ನೋಡಿದೆ. ನಮ್ಮ ಮನೆಯ ಎದುರಿಗೆ ಪಕ್ಕದ ಮನೆಯ ಒಂದು ಕಿಟಕಿ ಇದೆ. ಅದರಲ್ಲಿ ಆ ಮನೆಯ ಹುಡುಗಿಯೊಂದು ಕನ್ನಡಿಯಿಟ್ಟುಕೊಂಡು ತಲೆಬಾಚಿಕೊಳ್ಳುತ್ತಾ ನಿಂತಿತ್ತು. ಇಷ್ಟರಲ್ಲಿ ಅವರು ಹಿಂತಿರುಗಿ ನೋಡಿ,

" ಯಾವಾಗ ಬಂದೆಯೆ? ಎಂದರು.

" ನಾನು ಬಂದದ್ದು ಹೋದದ್ದು ನಿಮಗೇನು ಬೇಕು, ಹೇಳಿ! " ಎಂದೆ.

ಕಾಫಿ ಕೈಗೆ ತೆಗೆದುಕೊಂಡು " ಕಾಫಿ ತಣ್ಣಗಾಗಿದೆಯಲ್ಲೆ? " ಎಂದು ಕೇಳಿದರು.

" ನಿಮಗೆ ಕಾಫಿ ತಾನೆ ಏಕೆ ಬೇಕಾಗುತ್ತೆ! " ಎಂದೆ.

" ಹೌದು, ನೀನು ಬಹಳ ಹೆಚ್ಚಿಕೊಂಡಿದ್ದೀಯೆ, ನಿನಗೆ ಬುದ್ಧಿ ಕಲಿಸಬೇಕು " ಎಂದು ನನ್ನನ್ನು ಹಿಡಿದುಕೊಳ್ಳಲು ಬಂದರು. ನಾನು ಬಾಗಿಲಿನಿಂದಾಚೆ ಇದ್ದೆ.

ಇಂತು ನಿನ್ನವಳು.

## ೨೦

ವೆಂಕು,

ಈಚೆಗೆ ಅವರು ಬದಲಾಯಿಸಿರುವ ಹಾಗೆ ಕಾಣುತ್ತದೆ. ನನ್ನನ್ನು ಮೊದಲಿನಂತೆಯೇ ಮಾತನಾಡಿಸುತ್ತಾರೆ. ಹಾಗೆಯೇ ಪ್ರೀತಿಸುವಂತೆಯೂ ಕಾಣುತ್ತಾರೆ. ಆದರೂ ಏನೋ ಬದಲಾಯಿಸಿರುವ ಹಾಗೆ ನನಗೆ ಕಾಣುತ್ತದೆ.

ನಿನ್ನೆ ದಿವಸ ಕೂಡ ಅವರು ಅದೇ ಕಿಟಕಿಯ ಬಳಿ ನಿಂತುಕೊಂಡು ನೋಡುತ್ತಿದ್ದರು. ಆ ಹುಡುಗಿಯೂ ತಮ್ಮ ಮನೆ ಕಿಟಕಿಯಲ್ಲಿ ನಿಂತು ನೋಡುತ್ತಿದ್ದಳು. ನಿಜವಾಗಿಯೂ ನನಗೆ ಮೈಯೆಲ್ಲ ಉರಿದುಹೋಯಿತು. ರೂಮಿನೊಳಕ್ಕೆ ಹೋಗಿದ್ದವಳು, ಬಾಗಿಲನ್ನು ಧೊಪ್ಪನೆ ಹಾಕಿಕೊಂಡು ಹಿಂದಕ್ಕೆ ಹೊರಟುಬಂದೆ. ನಮ್ಮ ಮನೆಯ ಹಿತ್ತಲಿನಲ್ಲಿ ಒಂದು ದಾಳಿಂಬರೆ ಹಣ್ಣಿನ ಗಿಡವಿದೆ. ಅದರ ಕೆಳಗೆ ನಿಂತುಕೊಂಡೆ. ತಡೆಯಲಾರದೆ ಹೋಯಿತು. ಒಂದು ಕೊಂಬೆಯನ್ನು ಹಿಡಿದು ನಿಂತುಕೊಂಡು ಅತ್ತುಬಿಟ್ಟೆ.

ಆ ಮೇಲೆ ಒಳಕ್ಕೆ ಬಂದೆ. ನಮ್ಮ ಮನೆಯ ದೊಡ್ಡ ಕನ್ನಡಿಯಲ್ಲಿ ನೋಡಿಕೊಂಡೆ. ನನಗೆ ಅನ್ನಿಸಿತು, "ನಾನು ಆ ಹುಡುಗಿಗಿಂತ ಎಷ್ಟು ಚೆನ್ನಾಗಿದೇನೆ. ಅವರು ಏಕೆ ಆ ಹುಡುಗಿಯನ್ನು ನೋಡುವುದು?" ಎಂದು. ನನ್ನ ಕೈ ನೋಡಿಕೊಂಡೆ. ಇಷ್ಟು ಬೆಳ್ಳಗಿದ್ದಾಳೆಯೇ ಅವಳು ಎಂದುಕೊಂಡೆ. ಅಷ್ಟು ಹೊತ್ತಿಗೆ ಅದೇನೋ ಆ ಹುಡುಗಿಯೇ ನಮ್ಮ ಮನೆಗೆ ಬಂದಳು. "ಏನ್ರೀ ವಿಶಾಲಾಕ್ಷಮ್ಮ, ಚೌಕದಲ್ಲಿ ಎಳೆ ತೆಗೆಯುವುದನ್ನು ಹೇಳಿಕೊಡುತ್ತೀರೇನ್ರಿ? ನಿಮಗೆ ಚೆನ್ನಾಗಿ ಬರುತ್ತಂತಲ್ರಿ, ಎದುರು ಮನೆ ಸೀತಮ್ಮ ಹೇಳಿದರು ಕಣ್ರಿ" ಎಂದಳು.

ನಾನು ಆ ಹುಡುಗಿಯೊಡನೆ ಯಾವತ್ತೂ ಮಾತಾಡಿರಲಿಲ್ಲ. ಮಾತಾಡಿದ್ದು ಇವತ್ತೇ ಮೊದಲನೆಯ ದಿನ. ಆದರೂ ನನಗೆ ಅವಳನ್ನು ನೋಡಿ ಎಲ್ಲೂ ಇಲ್ಲದ ಸಿಟ್ಟುಬಂತು. "ನನಗೇನೂ ಬರುವುದಿಲ್ಲಮ್ಮ! ಬಂದರೂ ನನಗೆ ಈಗ ಹೇಳಿಕೊಡುವುದಕ್ಕಾಗುವುದಿಲ್ಲಮ್ಮ!" ಎಂದು ಸಿಡುಕಲಾಗಿ ಹೇಳಿದೆ. ಆ ಹುಡುಗಿ ಪೆಚ್ಚಾಗಿ ಹೊರಟುಹೋದಳು. ನಿಜವಾಗಿಯೂ ಆ ಹುಡುಗಿಯಮೇಲೆ ಏಕೆ ಕೋಪಿಸಿಕೊಂಡೆನೋ ನನಗೆ ತಿಳಿಯದು.

ಇಂತು ನಿನ್ನ ದುಃಖಪಡುತ್ತಿರುವ ಗೆಳತಿ.

## ೨೧

ವೆಂಕು,

ನಿನ್ನ ಎರಡು ಕಾಗದಗಳಿಗೂ ಉತ್ತರಕೊಡದಿದ್ದುದಕ್ಕೆ ಕ್ಷಮಿಸು. ನನಗೇಕೋ ಮೈಯಲ್ಲಿ ಸ್ವಸ್ಥವಿರಲಿಲ್ಲ. ಮೈಯಲ್ಲೇನು, ಮನಸ್ಸಿನಲ್ಲಿ

ಎಂದರೆ ಸರಿಹೋಗುತ್ತೆ. ಎತ್ತ ಕಡೆ ತಿರುಗಿದರೂ ನನ್ನ ಕಣ್ಣಿಗೆ ಅದೇ ನೋಟ ಕಾಣುತ್ತಿದೆ. "ಅವರು ನಮ್ಮ ಮನೆಯ ಕಿಟಕಿಯಿಂದ ಅವಳನ್ನು ನೋಡುತ್ತಿರುವುದು. ಅವಳು ತಮ್ಮ ಮನೆಯ ಕಿಟಕಿಯಿಂದ ಅವರನ್ನು ನೋಡುತ್ತಿರುವುದು." ಒಬ್ಬೊಬ್ಬಳೇ ಇದ್ದಾಗ ಇದ್ದಕ್ಕಿದ್ದ ಹಾಗೆಯೇ ತಡೆಯಿಲ್ಲದಂತೆ ಕಣ್ಣಿನಲ್ಲಿ ನೀರು ಹರಿದುಬರುವುದು. ಒರಸಿಕೊಂಡಷ್ಟೂ ಹೆಚ್ಚು ಹೆಚ್ಚು ಬರುವುದು. ಅವರು ಬಂದಾಗ, ಆ ಕಡೆಗೆ ತಿರುಗಿ ನೋಡಲು ಕೂಡ ಮನಸ್ಸು ಬರುತ್ತಿರಲಿಲ್ಲ.

ಹೀಗೆ ಎರಡುಮೂರು ದಿನಗಳಾದವು. ಒಂದು ದಿನ ತಡೆಯಲಾರ ದಷ್ಟು ಜ್ವರ ಬಂದಿತು. ರೂಮಿಗೆ ಹೋಗಿ ಹಾಸಿಗೆ ಹಾಕಿಕೊಂಡು ಮಲಗಿದೆ. ಅವರು ಬಂದರು. ಅವರು ಒಳಗೆ ಬಂದದ್ದನ್ನು ನೋಡಿ ಮುಸುಕುಹಾಕಿಕೊಂಡೆ. ಅತ್ತ ಕಡೆ ಮುಖ ತಿರುಗಿಸಿಕೊಂಡೆ. ನಾನು ಮುಸುಕು ತೆಗೆದು ಮಾತನಾಡಿಸಬಹುದೆಂದು ಅವರು ಬಹಳ ಹೊತ್ತು ಹತ್ತಿರ ನಿಂತಿದ್ದರೆಂದು ಕಾಣುತ್ತದೆ. ನಾನು ಬಹಳ ಹೊತ್ತಿನ ವರೆಗೂ ಮುಸುಕು ತೆಗೆಯಲಿಲ್ಲ. ಆಮೇಲೆ ಒಂದುಸಲ ಮುಸುಕು ತೆಗೆದು ನೋಡಿ ದಾಗ ಅವರು ಮಂಚದ ಪಕ್ಕದಲ್ಲೆ ಒಂದು ಕುರ್ಚಿ ಎಳೆದುಕೊಂಡು ಕುಳಿತು ಕೊಂಡಿದ್ದರು. ಮುಖ ಸಪ್ಪಗಿತ್ತು. ತಲೆ ಬಗ್ಗಿಸಿಕೊಂಡು ಏನೂ ಬೇಡದವ ರಂತೆ, ಬಹಳ ಯೋಚನೆಮಾಡುವಂತೆ, ಕಾಣುತ್ತಿತ್ತು. ಮತ್ತೆ ನಾನು ಮುಸುಕು ತೆಗೆದಾಗ ಸಾಯಂಕಾಲವಾಗಿತ್ತು. ಅವರು ಮಾತ್ರ ಹಾಗೆಯೇ ಕುಳಿತಿದ್ದರು. ನಮ್ಮತ್ತೆ ಹೊರಗಿನಿಂದ "ಊಟ ಬೇಡವೇನೋ ಮಗು ಇನ್ನೂ?" ಎಂದು ಕೂಗಿದರು. ಅವರು ಮಾತನಾಡಲಿಲ್ಲ. "ಏನಾದರೂ ಮಾಡಿಕೊಳ್ಳಿ, ನಿಮಗೆ ಯಾರು ಹೇಳುವುದಕ್ಕಾಗುತ್ತದೆ!" ಎಂದು ಗೊಣಗಿ ಕೊಂಡರು.

ಅವರು ಅಷ್ಟುಹೊತ್ತು ಹಾಗೆಯೇ ಊಟಮಾಡದೆ ಕುಳಿತಿರುವುದನ್ನು ಕಂಡು ನನಗೆ ಸಂಕಟವಾಯಿತು. ದಿಂಬಿನ ಮೇಲೆ ತಲೆಯಿಟ್ಟುಕೊಂಡು ಅತ್ತುಬಿಟ್ಟೆ. ಇದ್ದ ಅಸಮಾಧಾನವೆಲ್ಲ ಕರಗಿಹೋಯಿತು. ನಾನು ಅಳು

ತ್ತಿರುವುದನ್ನು ನೋಡಿ ಅವರು ಹತ್ತಿರ ಬಂದು ತಲೆಯ ಮೇಲೆ ಕೈಯಿಟ್ಟು "ಯಾಕೆ, ಏನಾಯಿತು?" ಎಂದರು.

ನಾನು ಮಾತನಾಡಲಿಲ್ಲ. "ನಾನು ಬಂದರೆ ಮುಖ ಮುಚ್ಚಿಕೊಳ್ಳು ತ್ತೀಯೆ. ಮಾತಾಡಿಸಿದರೆ ಮಾತನಾಡುವುದಿಲ್ಲ. ನಾನು ಅಂತಹ ತಪ್ಪೇನು ಮಾಡಿರುವುದು?" ಎಂದರು.

"ನಿಮಗೆ ನನ್ನಲ್ಲಿ ಪ್ರೀತಿಯಿಲ್ಲ. ನಾನೊಂದು ಅಡ್ಡಿ ನಿಮ್ಮ ದಾರಿ ಯಲ್ಲಿ" ಎಂದು ಬಹಳ ಕಷ್ಟದಿಂದ ಹೇಳಿದೆ.

"ನಾನು ಹಾಗೆಂದು ಯಾವತ್ತು ಹೇಳಿದೆ?"

"ನೀವು ಹೇಳಬೇಕೆ? ನನಗೇ ಗೊತ್ತಾಯಿತು."

"ಹೇಗೆ?"

"ಅದೂ ಹೇಳಬೇಕೆ? ನೀವು ಆ ಮನೆಯ ಹುಡುಗಿಯನ್ನೇಕೆ ನೋಡು . . ." ಎಂದೆ.

"ಇಷ್ಟೆತಾನೆ! ಇದಕ್ಕೇ ಇಷ್ಟೆಲ್ಲ ಕೋಪ? ಅದಕ್ಕೆ ಜ್ವರವೇ? ವಿಶಾಲೀ, ನಾನು ಹೇಗೆ ಇದು ಸುಳ್ಳು ಎನ್ನುವುದನ್ನು ತೋರಿಸಲಿ? ಇಷ್ಟು ದಿನ ಜೊತೆಯಲ್ಲಿದ್ದರೂ ನನ್ನನ್ನು ನೀನು ತಿಳಿದುಕೊಳ್ಳಲಾರದೆ ಹೋದೆ ಯಲ್ಲ! ನಾನು ಎಲ್ಲೋ ಸುಮ್ಮನೆ ನೋಡಿದೆನೊ ಇಲ್ಲವೋ ಅದಕ್ಕೇ ನೇನೋ ಕಥೆ ಕಟ್ಟುವೆಯಲ್ಲ! ವಿಶಾಲೀ, ನಿಜವಾಗಿಯೂ ನಿನ್ನಾಣೆಗೂ ಇದರಲ್ಲೇನೇನೂ ನಿಜವಿಲ್ಲ" ಎಂದು ನನ್ನ ಕೈ ಹಿಡಿದುಕೊಂಡು ಸಂಕಟ ದಿಂದ ಹೇಳಿದರು. ಎರಡುತೊಟ್ಟು ಕಣ್ಣೀರು ನನ್ನ ಕೈಮೇಲೆ ಬಿದ್ದಿತು. ಕತ್ತೆತ್ತಿ ನೋಡಿದೆ; ಅವರು ಅಳುತ್ತಿದ್ದರು. ನನಗೆ ತಡೆಯುವುದಕ್ಕಾಗಲಿಲ್ಲ. ಬೆಳಗಿನಿಂದ ಏಳುವುದಕ್ಕಾಗದಿದ್ದವಳು—ಹೇಗೊ ಏನೋ ತಿಳಿಯದು—ಥಟ್ಟನೆ ಎದ್ದು ಅವರ ಭುಜದ ಮೇಲೆ ತಲೆಯಿಟ್ಟು ಅಳುತ್ತಾ, "ಇಲ್ಲ, ನಾನು ಮಾಡಿದುದು ತಪ್ಪಾಯಿತು" ಎಂದು ನಾನೇ ಕೇಳಿಕೊಂಡೆ.

ವೆಂಕು, ಅದೇನು ವಿಷಯವೊ ನನಗೆ ತಿಳಿಯದು. ನಾನು ಅವರಲ್ಲಿ ಎಷ್ಟು ಬೇಗ ಅನುಮಾನಪಟ್ಟೆನೋ, ಸಿಟ್ಟುಮಾಡಿಕೊಂಡೆನೋ, ಅಷ್ಟೇ ಬೇಗ ಅನುಮಾನವೆಲ್ಲಾ ಮಾಯವಾಗಿ ದೃಢವಾದ ನಂಬಿಕೆ ಬಂತು.

ಈಗ ಆರೋಗ್ಯವಾಗಿದೇನೆ. ಹಿಂದಿನದೆಲ್ಲ ನೆನಸಿಕೊಂಡರೆ ಈಗ ಅದೆಲ್ಲಾ ಹುಚ್ಚು ಎನ್ನಿಸುತ್ತದೆ. ಏನಾದರೂ ಮಾತಿಗೆ ಮಾತು ಬಂದರೆ ಅವರು ಒಂದೊಂದು ಸಲ ಹೇಳುತ್ತಾರೆ. "ನೋಡು, ಆ ಮನೆಯ ಹುಡುಗಿಯನ್ನು ಈವತ್ತು ಮಾತಾಡಿಸುತ್ತೇನೆ. ಜೋಕೆ" ಎಂದು. ಆದರೆ ನನಗೆ ಗೊತ್ತು, ಆ ಹುಡುಗಿ ಎದುರಿಗೆ ಬಂದರೂ ಅವರು ತಲೆಯೆತ್ತಿ ನೋಡುವುದಿಲ್ಲವೆಂದು.

ಇಂತು ನಿನ್ನವಳು.

೨೨

ವೆಂಕು,

ಒಂದು ಹೊಸ ಸಮಾಚಾರ. ಅದು ನಿನಗೆ ಸಂಬಂಧಿಸಿದ್ದೆ. ನಮ್ಮ ಯಜಮಾನರ ಹಳೆಯ ಸ್ನೇಹಿತರೊಬ್ಬರು ಬಂದಿದಾರೆ. ಅವರು ಯಾವುದೋ ದೊಡ್ಡ ಪರೀಕ್ಷೆಯಲ್ಲಿ ಪಾಸಾಗಿ ಬೊಂಬಾಯಿನಲ್ಲಿ ಕೆಲಸದಲ್ಲಿದ್ದಾರೆ. ೫೦೦ ರೂಪಾಯಿಗಳ ಸಂಬಳ ಬರುತ್ತಿದೆ. ಅವರಿಗಿನ್ನೂ ಮದುವೆಯಿಲ್ಲ. ಈಗ ಮದುವೆಮಾಡಿಕೊಳ್ಳಬೇಕೆಂದು ಅಪೇಕ್ಷಿಸಿದ್ದಾರೆ. ನಾನೂ ಅವರೂ ಆಗಾಗ್ಗೆ ನಿನ್ನ ಮಾತು ಆಡುತ್ತಿರುತ್ತೇವೆ. ಇವತ್ತು ಅವರಿಗೆ ನಾನು ಹೇಳಿದೆ. "ನಿಮ್ಮ ಸ್ನೇಹಿತರು ಬಾಲವಿಧವೆಯನ್ನು ಮದುವೆಮಾಡಿಕೊಳ್ಳಬೇಕೆಂದಿದಾರಲ್ಲ, ನಮ್ಮ ವೆಂಕೂನೇ ಮಾಡಿಕೊಂಡರೆ ಎಷ್ಟು ಚೆನ್ನಾಗಿರುತ್ತೆ!" ಎಂದೆ. ಅವರು ತಮ್ಮ ಸ್ನೇಹಿತರೊಡನೆ ಪ್ರಸ್ತಾಪ ಮಾಡಿದರೆಂದು ಕಾಣುತ್ತದೆ. ಸ್ವಲ್ಪ ದಿನದಲ್ಲೆ ನಿಮ್ಮೂರಿಗೆ ಬರಬಹುದು; ನಿಮ್ಮ ತಂದೆತಾಯಿಗಳೊಡನೆ ಮಾತಾಡಿಕೊಂಡು ನಿನ್ನನ್ನು ನೋಡಿಕೊಂಡು ಬರಬಹುದು.

ವೆಂಕು, ಇದೇನಾದರೂ ಆದರೆ ಎಷ್ಟು ಚೆನ್ನಾಗಿರುತ್ತೆ! ನಮ್ಮ ಮನೆಯವರು ಆಗಾಗ್ಗೆ ತಮ್ಮ ಸ್ನೇಹಿತರ ವಿಷಯ ಮಾತಾಡುತ್ತಿರುತ್ತಾರೆ. ಬಹಳ ಒಳ್ಳೆಯವರೆಂದು ಕಾಣಬರುತ್ತದೆ. ನಿನ್ನ ಕಾಗದವನ್ನು ಎದುರು ನೋಡುತ್ತಿದ್ದೇನೆ.

ಇಂತು ನಿನ್ನವಳು.

೨೩

ವೆಂಕು,

ನಿನ್ನ ಕಾಗದ ಓದುತ್ತಲೂ ಬಹಳ ಸಂಕಟವಾಯಿತು. ದೇವರು ದೊಡ್ಡವನು. ಎಲ್ಲವನ್ನೂ ಸರಿಮಾಡುವಂತೆ ಕಾಣುತ್ತದೆ. ನೀನು ಬರೆದಿರುವದನ್ನೂ ನಾನು ಮರೆಯುವಂತಿಲ್ಲ: " ನನಗೆ ಗಂಡನೆಂದರೇನೋ ಸರಿಯಾಗಿ ಗೊತ್ತಿಲ್ಲ. ನಿನ್ನ ಕಾಗದಗಳನ್ನು ಓದಿದ ಮೇಲೆ, ಅಯ್ಯೋ ನನಗೂ ಅಂತಹವರೊಬ್ಬರು ಬೇಕೆನ್ನಿಸುತ್ತದೆ; ಇಲ್ಲದಿದ್ದರೆ ಬದುಕಿರುವುದೇ ಕಷ್ಟ ಎನ್ನುವಹಾಗಾಗುತ್ತದೆ. ಎಲ್ಲರೂ 'ಈ ಹುಡುಗಿಗೆ ಗಂಡನಿಲ್ಲ' ಎನ್ನುತ್ತಾರೆ. ನನಗೆ ಅಂತಹವರೊಬ್ಬರಿದ್ದರು ಎನ್ನುವ ಜ್ಞಾಪಕವೇ ಚೆನ್ನಾಗಿಲ್ಲ.''

ವೆಂಕು, ನೀನೇನು ಇನ್ನು ಯೋಚನೆಮಾಡಬೇಕಾಗಿಲ್ಲ. ನಿಮ್ಮ ತಂದೆತಾಯಿ ಇಬ್ಬರೂ ಹೇಳಿದರಂತೆ " ಈ ದುಃಖ ನಮ್ಮ ಕೈಲಿ ನೋಡಲಾಗುವುದಿಲ್ಲ. ಎಲ್ಲಾದರೂ ಚೆನ್ನಾಗಿದ್ದರೆ ಸರಿ" ಎಂದು. ನಿನ್ನದೂ ಅಡ್ಡಿಯಿಲ್ಲ. ಅವರೂ ನಿನ್ನನ್ನು ಒಪ್ಪಿದ್ದಾರೆ. ಆದರೆ ಹೆಸರು ಚೆನ್ನಾಗಿಲ್ಲವಂತೆ. 'ಮೀನಾಕ್ಷಿ' ಎಂದು ನಿನಗೆ ಬೇರೆ ನಾಮಕರಣವಾಗಬಹುದು. ವೆಂಕೂ, ನಿಮ್ಮ ಯಜಮಾನರು ನಿನ್ನನ್ನು "ಮೀನಾ" ಎಂದು ಕರೆಯಬಹುದಲ್ಲವೆ?

ಮೀನಾಕ್ಷಮ್ಮನವರೆ, ಬೊಂಬಾಯಿಗೆ ಹೋಗಿ ಸಾಹೇಬರ ಹೆಂಡತಿಯಾದ ಮೇಲೆ ನಮ್ಮನ್ನೆಲ್ಲ ದಯವಿಟ್ಟು ಮರೆತುಬಿಡಬೇಡಿ. ಬಡವರ ಮೇಲೆ ದಯೆಯಿರಲಿ.

ಇಂತು ನಿನ್ನವಳು.

೨೪

ವೆಂಕು,

ನೀನು ಅಂತಹ ಹುಡುಗಿಯಲ್ಲ ಅನ್ನುವುದು ನನಗೆ ಗೊತ್ತಿಲ್ಲವೆ? ಸುಮ್ಮನೆ ಬರೆದೆ ಅಷ್ಟೆ. ನೀನು ನಿಮ್ಮ ಯಜಮಾನರಿಗೆ ಮೀನಾಕ್ಷಿಯಾದರೂ ನನಗೆ ನನ್ನ ಹಳೆಯ ವೆಂಕುವೇ. ಆಮೇಲೆ, ನಿನಗೆ

ಇನ್ನೊಂದು ವಿಷಯ ಬರೆಯಲೇ ಇಲ್ಲ. ನೀನು ಬೊಂಬಾಯಿಗೆ ಹೋಗುವುದಕ್ಕೆ ಮುಂಚೆ ನಾನು ಊರಿಗೆ ಬರುತ್ತೇನೆ. ನಮ್ಮತ್ತೆ ನೆರೆಮನೆಯವರೊಬ್ಬರೊಡನೆ ಹೇಳುತ್ತಿದ್ದರು: "ನಮ್ಮ ವಿಶಾಲಾಕ್ಷೀನ ಅವರ ತವರುಮನೆಯವರು ಕರೆದುಕೊಂಡು ಹೋಗಬಹುದು. ಅವರೂ ನಮ್ಮ ಹಾಗೇ ಅಲ್ಲವೆ? ಈಗ ನಮ್ಮ ಹುಡುಗೀನ ನಾವು ಕರೆದುಕೊಂಡು ಬರಲಿಲ್ಲವೆ? ಮೊನ್ನೆ ಪೌರ್ಣಮಿಗೆ ಐದು ತಿಂಗಳು ತುಂಬಿತು" ಎಂದು.

ನಮ್ಮತ್ತಿಗೆ ಬಂದಿದ್ದಾರೆ. ಅವರ ಮಗು ಕಿಟ್ಟು ಎಷ್ಟು ಚೆನ್ನಾಗಿದೆ ಅಂತಿಯಾ? ಅದಕ್ಕೆ ನನ್ನ ಕಂಡರೆ ಪ್ರಾಣ. ಅವರಮ್ಮನನ್ನೂ ಕೂಡ ಮರೆತು ನನ್ನ ಹತ್ತಿರ ಇರುತ್ತೆ.

ನನ್ನಲ್ಲಿರುವ ದೊಡ್ಡ ಕರ್ಪೂರದ ಬೊಂಬೆ ನೋಡಿರುವೆಯಲ್ಲ? ಅದಕ್ಕೆ ನಿನ್ನೆ ಒಂದು ಸಿಲ್ಕಿನ ಅಂಗಿ ಹೊಲಿಯುತ್ತಿದ್ದೆ. ಅವರು ಬಂದರು.

"ಏನೆ, ಅದಕ್ಕೇನು ವೈಭವ ಮಾಡಿಸುತ್ತೀಯೆ, ಜೀವವಿಲ್ಲದ ಬೊಂಬೆಗೆ?" ಎಂದರು.

"ನಿಮಗೇನು, ನಾನೇನಾದರೂ ಮಾಡಿಕೊಳ್ಳುತ್ತೇನೆ!" ಎಂದೆ. ಅಷ್ಟು ಹೊತ್ತಿಗೆ ಕಿಟ್ಟು ಬಂದು ತೊಡೆಯ ಮೇಲೆ ಕುಳಿತುಕೊಂಡಿತು. ನಾನು ಬೊಂಬೆ ಆ ಕಡೆಗಿಟ್ಟು ಅವನನ್ನೆತ್ತಿಕೊಂಡೆ. ಇದನ್ನು ನೋಡಿ ಅವರು, "ಅದೇನು ಹುಚ್ಚೋ ಈ ಹುಡುಗೀರಿಗೆ, ಯಾವುದಾದರೂ ಮಕ್ಕಳನ್ನು ಕಂಡರೆ ಪ್ರಾಣ ಬಿಡುತ್ತಾರೆ. ನಿನಗೂ ಒಂದು ಮಗು ಬೇಕೆನ್ನಿಸುತ್ತೆ, ಅಲ್ಲವೆ?"

"ನಿಮಗಿನ್ನೇನೂ ಕೆಲಸವಿಲ್ಲ. ನನ್ನ ಮಾತಾಡಿಸಬೇಡಿ, ಹೋಗಿ" ಎಂದೆ.

"ಅಲ್ಲ, ಬೇಕೆ, ಹೇಳು."

"ಬೇಕಾದರೆ ನೀವೇನು ಕೊಡ್ತೀರಾ" ಎಂದು ಕೇಳಿದೆ.

"ಓಹೋ! ಅಕ್ಕನಿಗೆ ಹೇಳಿ ಕಿಟ್ಟೂನೆ ಕೊಡಿಸುತ್ತೇನೆ" ಎಂದರು.

"ನನಗೆ ಕಿಟ್ಟು ಕಂಡರೇನೋ ಪ್ರೀತಿ ಇದೆ. ಆದರೆ ನನ್ನ ಮಗುವನ್ನೇ ಎತ್ತಿಕೊಂಡು ಆಡಿಸಿ, ತೊಡೆಯ ಮೇಲೆ ಮಲಗಿಸಿಕೊಂಡು ತಟ್ಟಿ

ಮಲಗಿಸಬೇಕು ಎನ್ನಿಸುತ್ತೆ. ನಮ್ಮತ್ತಿಗೆ ಕಿಟ್ಟ್ವನ ತೊಡೆ ಮೇಲೆ ಮಲಗಿಸಿಕೊಂಡು ಹಾಲು ಕುಡಿಸುತ್ತಿರುವಾಗ ಅದು ಸಂತೋಷದಿಂದ ಕೈಕಾಲು ಕುಣಿಸುತ್ತಾ ಇರುವುದನ್ನು ನೋಡಿದರೆ, ಆಗ ನಮ್ಮತ್ತಿಗೆಯ ಮುಖ ನೋಡಿದರೆ, ನಾನು ತಾಯಿಯಾಗಬೇಕು ಎನ್ನಿಸುತ್ತೆ."

"ಸರಿ, ಇನ್ನೇನು, ನಿನಗೂ ಒಂದು ಮಗು ಆಗುತ್ತಲ್ಲ. ಆ ಮೇಲೆ ನನ್ನನ್ನೇನು ನೀನು ಮಾತಾಡಿಸುವ ಹಾಗೆ ಕಾಣುವುದಿಲ್ಲ. ಈ ಬೊಂಬೆಯನ್ನು ಇಷ್ಟು ಮಟ್ಟಿಗೆ ಕುಣಿಸುವುದನ್ನೂ ಕಿಟ್ಟು ಎಡೆಬಿಡದೆ ಇರುವುದನ್ನೂ ನೋಡಿದರೆ ಮಗುವಾದ ಮೇಲೆ ನೀನು ನನ್ನನ್ನೇಕೆ ಮಾತಾಡಿಸುತ್ತೀ ಹೇಳು? ಇದೆಲ್ಲ ಯೋಚನೆಮಾಡಿಕೊಂಡರೆ ನಾನೇ ಆ ಮಗು ಆಗಬಾರದೆ ಅನ್ನಿಸುತ್ತೆ ನನಗೆ" ಎಂದರು.

ನಾನು "ಸಾಕು, ಸುಮ್ಮನಿರಿ" ಎಂದೆ.

ಆಮೇಲೆ ನಾನು ಇನ್ನು ಸ್ವಲ್ಪ ಹೊತ್ತು ರೂಮಿನಲ್ಲಿದ್ದೆ. ಅವರೂ ಇದ್ದರು. ಆದರೆ ಮುಂದೇನು ನಡೆಯಿತೋ ನನಗೆ ಜ್ಞಾಪಕವಿಲ್ಲ. ಇಲ್ಲದಿದ್ದರೆ, ಊರಿಗೆ ಬಂದಾಗ ಹೇಳುತ್ತೇನೆ. ಅದೆಲ್ಲ ಕಾಗದದಲ್ಲಿ ಬರೆಯಬಾರದು. ನಾನು ತಾನೆ ಏನು ಹೇಳಬೇಕು? ಇನ್ನು ಸ್ವಲ್ಪ ದಿನಕ್ಕೆ ನೀನೇ ನನಗೆಲ್ಲ ಹೇಳಿಕೊಡುತ್ತೀಯೆ!

ಊರಿಗೆ ಇನ್ನೆರಡು ಮೂರು ದಿನದಲ್ಲೇ ಬರಬಹುದು; ಅವರೂ ಬರುತ್ತಾರೆ. ನಿಮ್ಮ ಯಜಮಾನರೇನೂ ನಮ್ಮ ಜೊತೆಯಲ್ಲಿ ಬರುವುದಿಲ್ಲ, ಹೆದರಬೇಡ.

ಇಂತು ನಿನ್ನ ಗೆಳತಿ—ವಿಶಾಲಾಕ್ಷಿ.

# ಇಂದಿರೆಯ ಕಾಗದಗಳು

೧

ಕಮಲು,

ಈಗ ನಾನು ಕಾಗದ ಬರೆಯುತ್ತಿರುವುದು ಹಳ್ಳಿಯಿಂದ; ಮೈಸೂರಿನಿಂದಲ್ಲ. ಮೈಸೂರಿನಿಂದ ಇಲ್ಲಿಗೆ ಬಂದು ಕೆಲವು ದಿನಗಳಾದುವು. ಇನ್ನು ಮುಂದೆ ಇಲ್ಲಿಯೇ ನಿಲ್ಲುವಂತೆ ಕಾಣುತ್ತದೆ.

ಈ ಹಳ್ಳಿ ನನ್ನ ಮನಸ್ಸಿಗೆ ಒಪ್ಪಿದೆ. ಸಣ್ಣ ಊರು; ಊರಿನ ತುಂಬ ಹೆಚ್ಚು ತಿಳಿವಳಿಕೆಯಿಲ್ಲದ ಜನರು. ರಸ್ತೆಯಿಂದ ಊರಿಗೆ ಬರುವಾಗ ಒಂದು ತೋಪಿದೆ. ಅಲ್ಲಿ ಎಂಟು ಹತ್ತು ದೊಡ್ಡ ಮರಗಳಿವೆ. ನಾವು ಬಂದ ದಿನ ಈ ಮರಗಳ ನೆರಳಿನಲ್ಲಿ ಹುಲ್ಲಿನ ಮೇಲೆ ಸ್ವಲ್ಪ ಹೊತ್ತು ಕುಳಿತಿದ್ದು ತಂದ ತಿಂಡಿಯನ್ನು ಮುಗಿಸಿ ಊರು ಸೇರಿದೆವು.

ಮನೆ ಮಹಡಿಮನೆಯಲ್ಲ. ಮಂಗಳೂರು ಹೆಂಚು ಹಾಕಿಲ್ಲ. ಸಗಣಿಯಿಂದ ಸಾರಿಸಿದ ನೆಲ. ಮುಂಭಾಗದಲ್ಲಿ ಜಗುಲಿಯಿದೆ. ಮನೆಯ ಹತ್ತಿರದಲ್ಲಿಯೇ ಒಂದು ಬಾವಿಯಿದೆ; ಹಿಂದುಗಡೆ ಹೊಲಗಳು. ಅವುಗಳಿಗೂ ಹಿಂದೆ ತೆಂಗಿನ ತೋಟಗಳು. ಇನ್ನೊಂದು ಕಡೆಗೆ, ಊರಿಗೆ ಹತ್ತಿರದಲ್ಲೇ ಒಂದು ಕೊಳ; ಒಂದು ಆಂಜನೇಯನ ದೇವಸ್ಥಾನ. ಸ್ವಲ್ಪ ದೂರದಲ್ಲಿ ಕೆರೆ. ನಮ್ಮ ಮನೆಗೆ "ಲೇಕ್ ವ್ಯೂ" ಎಂದು ಹೆಸರಿಟ್ಟಿದ್ದೇನೆ. ಏಕೆ ಗೊತ್ತೆ? ನಮ್ಮ ಮನೆಯ ಜಗುಲಿ ಮೇಲೆ ನಿಂತುಕೊಂಡರೆ ಕೆರೆ ಕಾಣುತ್ತದೆ.

ಇಷ್ಟೇ, ಇನ್ನೂ ನಾನು ನೋಡಿರುವುದು. ಚೆನ್ನಾಗಿದೆಯಲ್ಲವೆ ನಮ್ಮ ಊರು?

ಇಂತು ನಿನ್ನ ಗೆಳತಿ
ಇಂದಿರಾ.

೨

ಕಮಲು,

ಈ ಊರನ್ನು ನೋಡಿದೊಡನೆಯೇ ಏನೋ ಸಂತೋಷವಾಯಿತು. ಮಾತಾಡಿದರೆ ಅಮ್ಮನ ಹತ್ತಿರವೋ ಅಪ್ಪನ ಹತ್ತಿರವೋ ಮಾತನಾಡಬೇಕು. ನಮ್ಮ ತಂದೆ ಕೇಳಿದರು, "ಹೇಗಿದೆ ಊರು? ಬೇಜಾರಾಗುವುದಿಲ್ಲವೆ?" ಎಂದು. "ಇಲ್ಲ, ಚೆನ್ನಾಗಿದೆ" ಎಂದೆ. ಅಮ್ಮನಿಗೆ ಆಂಜನೇಯನ ದೇವಸ್ಥಾನ ಕೊಳ ಚೆನ್ನಾಗಿದೆ. ತಣ್ಣೀರು ಮಡಿಗೆ ಕೆರೆ ಚೆನ್ನಾಗಿದೆ. ಹಳ್ಳಿಯಾದುದರಿಂದ ದನ ಸಾಕಬಹುದು. ಗೋಸೇವೆಗೆ ಅವಕಾಶವಾಯಿತು. ದೇವರ ಪೂಜೆಗೆ ಕೇಳಿದಷ್ಟು ಹೂ ಸಿಗುತ್ತದೆ. ತರಕಾರಿಗೆ ಗೋಳಿಲ್ಲ. ಇವರೊಡನೆ ಮಾತಾಡಿದರೂ ತೃಪ್ತಿಯಾಗಲಿಲ್ಲ.

ಮೈಸೂರಿನಲ್ಲಿ ಇಷ್ಟು ದಿನವೂ ಇದ್ದು ಬೇಜಾರಾದುದರಿಂದಲೋ ಏನೊ ಈ ಊರು ಅಷ್ಟು ಚೆನ್ನಾಗಿ ಕಾಣುವುದು. ಮನೆಯಿಂದ ಮೂರು ಮಾರು ಹೋದರೆ ಬಯಲು. ಯಾರೂ ಕೇಳುವವರಿಲ್ಲ. ಅಲ್ಲೊ ಇಲ್ಲೊ ಒಬ್ಬೊಬ್ಬರು ತಮ್ಮ ಕೆಲಸದಲ್ಲಿರುತ್ತಾರೆ. ಹೊರಡಬೇಕಾದರೆ ಸಿಂಗರಿಸಿ ಕೊಂಡು ಹೋಗಬೇಕಾಗಿಲ್ಲ. ಅವರು ಇವರು ನೋಡುತ್ತಾರೆನ್ನುವ ಹೆದರಿಕೆ ಇಲ್ಲ. ನಮಗೆ ಬೇಕಾದಂತೆ ಓಡಾಡಬಹುದು. ಹೀಗೆ ಬಯಲಲ್ಲಿ ಹೋಗುತ್ತಿದ್ದರೆ, ನನಗೆ ಒಂದೊಂದು ಸಲ ಮಕ್ಕಳ ಹಾಗೆ ಓಡಬೇಕು ಕುಣಿಯಬೇಕು ಎನ್ನಿಸುತ್ತದೆ. ಎಲ್ಲಾದರೂ ಮರಳ ಮೇಲೋ, ಹಸುರು ಹುಲ್ಲ ಮೇಲೋ ಕುಳಿತು ಹಾಡಬೇಕು ಎನ್ನಿಸುತ್ತದೆ. ಮರದ ಕೊಂಬೆಗೆ ಹಗ್ಗ ಕಟ್ಟಿ ಉಯ್ಯಾಲೆ ಆಡಬೇಕೆಂದು ಮನಸ್ಸಾಗುತ್ತದೆ. ಆಕಾಶದಲ್ಲಿ ತೇಲುತ್ತಿರುವ ಮೋಡಗಳನ್ನು ನೋಡುತ್ತಾ ಹುಲ್ಲಿನ ಮೇಲೆ ಮಲಗಿರ ಬೇಕೆನ್ನಿಸುತ್ತದೆ. ಮೈಸೂರಿನಲ್ಲಿ ಹೀಗೆ ಮಾಡುವುದಕ್ಕಾಗುತ್ತದೆಯೆ?

ಯಾರಾದರೂ ಸರಿಯಾದ ಒಬ್ಬ ಗೆಳತಿ ಇದ್ದರೆ, ಎಲ್ಲವನ್ನೂ ಮರೆತು, ಎಷ್ಟು ದಿನ ಬೇಕಾದರೂ ಯೋಚನೆ ಇಲ್ಲದೆ ಇಲ್ಲಿ ಸುಖವಾಗಿ ಕಾಲ ಕಳೆಯಬಹುದೆಂದು ಅನ್ನಿಸುತ್ತದೆ.

ಇಂತು ನಿನ್ನ ಗೆಳತಿ.

೩

ಕಮಲು,

ಇಷ್ಟು ದಿನಗಳೂ ಕಾಗದ ಬರೆಯದೆ ಈಗ ಬರೆದುದಕ್ಕೆ, ನಿನಗೆ ಸಂತೋಷ. ಹಿಂದೆ ನಾವು ಒಟ್ಟಿಗೆ ಕಾಲ ಕಳೆದುದೆಲ್ಲ ಜ್ಞಾಪಕಕ್ಕೆ ಬರುತ್ತದೆ ಅಲ್ಲವೆ? ಏನೋ ಅದು ಒಂದು ಕಾಲ ಚೆನ್ನಾಗಿತ್ತು. ಹುಡುಗುತನವೇ ಚೆನ್ನಾ ಎನ್ನಿಸುತ್ತದೆ ನನಗೆ. ಒಂದೊಂದು ಸಲ ಆಗ ಮಾಡಿದ ಹುಡುಗಾಟಗಳನ್ನು ನೆನಸಿಕೊಂಡರೆ ಈಗಲೂ ನಗುಬರುತ್ತದೆ. ಆದರೂ ಆಗ ಅದೆಷ್ಟು ಚೆನ್ನಾಗಿತ್ತು! ಏನು ಜ್ಞಾಪಿಸಿಕೊಂಡರೆ ಏನು? ಆಗಿನ ದಿನಗಳು ಮತ್ತೆ ಬರುವಂತಿಲ್ಲ; ಲೇಡೀಸ್ ರೂಮಿನಲ್ಲಿ ಕುಳಿತು ಹರಟೆ ಹೊಡೆಯುವ ಹಾಗಿಲ್ಲ. ಮೇಷ್ಟರುಗಳನ್ನು ಅಣಕಿಸುವುದು, ಜಂಭದಿಂದ ಮೆರೆಯುವ ಹುಡುಗರನ್ನು ಹಾಸ್ಯಮಾಡುವುದು, ಇವೆಲ್ಲವನ್ನೂ ಮರೆಯಬೇಕು. ಇಲ್ಲವೇ, ಜ್ಞಾಪಿಸಿಕೊಂಡು ಅದೂ ಒಂದು ಕಾಲ ಆಗಿ ಹೋಯಿತು ಎಂದು ನಿಟ್ಟುಸಿರು ಬಿಡಬೇಕು. ಹಾಗೆ ಜ್ಞಾಪಿಸಿಕೊಂಡು ನಿಟ್ಟುಸಿರು ಬಿಡುವುದರಲ್ಲೂ ಒಂದು ಬಗೆಯ ಸಂತೋಷವಿದೆಯಲ್ಲವೆ?

ಇಂತು ನಿನ್ನ ಗೆಳತಿ.

೪

ಕಮಲು,

ನೀನು ಬರೆದಿರುವುದರ ಅರ್ಥ ನನಗೆ ಗೊತ್ತಾಗಲಿಲ್ಲ. ನನಗೇನೋ ಒಂದು ಬಗೆಯ ವಿಚಿತ್ರವಾಗಿಯೇ ಇದ್ದೀಯೆ. ಅಂದರೆ, ನಿನ್ನನ್ನು ಕಂಡರೆ ನನಗೆ ಪ್ರೀತಿಯಿಲ್ಲವೆಂದಲ್ಲ. ಬಹುಶಃ ನೀನು ವಿಚಿತ್ರವಾಗಿ ಕಂಡುದರಿಂದಲೇ ನಿನ್ನಲ್ಲಿ ನನಗೆ ಸ್ನೇಹವೆಂದು ಕಾಣುತ್ತದೆ. ನಾವು ಕಾಲೇಜಿನಲ್ಲಿದ್ದಾಗ ನಾವಿಬ್ಬರೂ ಯಾವಾಗಲೂ ಒಟ್ಟಿಗೆ ಇರುವುದನ್ನು ಕಂಡು ಲಕ್ಷ್ಮಿ ಹಾಸ್ಯಮಾಡಿದುದು ಜ್ಞಾಪಕವಿದೆಯೆ? "ಇದೆಲ್ಲ ಎಷ್ಟು ದಿನ; ಇನ್ನು ಸ್ವಲ್ಪ ದಿನ ಹೋಗಲಿ, ಗೊತ್ತಾಗುತ್ತದೆ" ಎಂದಿದ್ದಳು. ಹುಡುಗರಿಗೆ ಕೂಡ ನಾವು ಜೊತೆಯಲ್ಲೇ ಇರುತ್ತೇವೆಂದು ಗೊತ್ತಾಗಿತ್ತು. ಅದಕ್ಕೇ, ಅವರು ನಮ್ಮನ್ನು 'ಟ್ವಿನ್ಸ್' ಎಂದು ಕರೆಯುತ್ತಿದ್ದರು.

ನಾವು ಜೊತೆಯಲ್ಲಿದ್ದಾಗ ನಿನ್ನ ವರ್ತನೆ ನನಗೆ ಎಷ್ಟು ವಿಚಿತ್ರ ವಾಗಿತ್ತೊ, ಈಗಲೂ ನೀನು ಬರೆದಿರುವ ಮಾತುಗಳು ಅಷ್ಟು ವಿಚಿತ್ರವಾಗಿ ಇವೆ. ಹುಡುಗತನದ ಅದೇ ಆನಂದ ಇಲ್ಲವೆಂಬುದನ್ನು ಒಪ್ಪಿಕೊಳ್ಳು ತ್ತೀಯೆ. ಆದರೆ, ಇನ್ನೊಂದು ಬಗೆಯ ಅಷ್ಟೇ ಆನಂದ, ಇಲ್ಲ, ಇನ್ನು ಹೆಚ್ಚಿನ ಆನಂದ ಜೀವನದಲ್ಲಿದೆ ಎಂದು ಹೇಳುತ್ತೀಯೆ. ಇದರ ಅರ್ಥ ವೇನೋ ಪರಮಾತ್ಮನಿಗೇ ಗೊತ್ತು.

ನನಗೆ ಅದಕ್ಕಿಂತ ಹೆಚ್ಚಿನ ಆನಂದ ಬೇರೆ ಇಲ್ಲವೆನ್ನಿಸುತ್ತದೆ. ಮನೆ ಯಲ್ಲಿ ಸ್ವಲ್ಪ ಕೆಲಸ ಮಾಡುವುದು, ಒಳ್ಳೆ ಪುಸ್ತಕಗಳನ್ನೋದುವುದು, ಯಾರಾದರೂ ಸ್ನೇಹಿತರೊಡನೆ ಹರಟೆ ಹೊಡೆಯುತ್ತ ಅಲ್ಲಿ ಇಲ್ಲಿ ಯಾರ ಅಂಕೆಯೂ ಇಲ್ಲದೆ ಅಲೆಯುವುದು, ಏನೂ ಯೋಚಿಸದೆ ಹೇಗೆ ಕಾಲ ಕಳೆ ಯುತ್ತೇವೆನ್ನುವುದರ ಅರಿವೂ ಇಲ್ಲದಂತೆ ಸಮಪ್ರದೇಶದಲ್ಲಿ ಹರಿಯುವ ಹೊಳೆಯ ಹಾಗೆ ಬದುಕು ಸಾಗಿಸುವುದು; ಇವಕ್ಕಿಂತ ಇನ್ನೂ ಹೆಚ್ಚಿನ ಸುಖವಿಲ್ಲವೆನ್ನಿಸಿದೆ.

ಇಂತು ನಿನ್ನ ಗೆಳತಿ.

೫

ಕಮಲು,

ಏನು ನಿನ್ನ ಕೆಲಸ? ಹೇಗೆ ಹೊತ್ತು ಕಳೆಯುತ್ತೀಯೆ? ಎಂದು ಕೇಳಿರುವೆ. ಹೌದು ಪುಸ್ತಕಗಳನ್ನೇನೋ ಓದುತ್ತೇನೆ. ತಲೆ ಕೆಡಿಸುವ ಪುಸ್ತಕಗಳನ್ನೋದುವುದಿಲ್ಲ. ಅವುಗಳನ್ನೆಲ್ಲಾ ಪರೀಕ್ಷೆ ಮುಗಿದ ದಿನವೇ ಮೂಲೆಗೆ ಎಸೆದೆ. ಕಥೆಯನ್ನೋ, ಕಾದಂಬರಿಯನ್ನೋ, ಸಣ್ಣ ಸಣ್ಣ ಪದ್ಯಗಳ ಪುಸ್ತಕಗಳನ್ನೋ, ನಾಟಕಗಳನ್ನೋ ಕೊಂಚ ಕೊಂಚ ಓದು ತ್ತೇನೆ. ನನ್ನ ಮೆಚ್ಚಿನ ಕೆಲವು ಪುಸ್ತಕಗಳನ್ನು ಮತ್ತೆ ಮತ್ತೆ ಓದುತ್ತೇನೆ. ಇನ್ನು ಹಳ್ಳಿಯ ಹೆಂಗಸರೊಡನೆ ಅವರ ಮನೆಯ ಮಾತು ಕಥೆಗಳನ್ನಾಡಿ ಹೊತ್ತು ಕಳೆಯುತ್ತೇನೆ. ಪುಸ್ತಕಗಳಲ್ಲಿ ಬರೆದಿರುವುದಕ್ಕಿಂತ ಏನೂ ತಿಳಿಯದ ಈ ಹಳ್ಳಿಯ ಹೆಂಗಸರು ಆಡುವ ಮಾತುಗಳೇ ಚೆನ್ನ. ಅದಕ್ಕೇ ಯಾರಾದರೂ ಮಾತಿಗೆ ಸಿಕ್ಕಿದರೆ ಪುಸ್ತಕ ಮುಚ್ಚುತ್ತೇನೆ. ಹೆಚ್ಚು ಹೊತ್ತು, ನಮ್ಮ ಮನೆಗೆ ಕೆಲಸಕ್ಕೆ ಬರುವ ನಂಜಿಯೊಡನೆ ಹರಟೆ ಕೊಚ್ಚುತ್ತೇನೆ.

ಇಷ್ಟೇ ಅಲ್ಲ. ಆಗಲೇ ಮನೆಗೆಲಸಗಳನ್ನೆಲ್ಲಾ ಕಲಿತುಬಿಟ್ಟಿದ್ದೇನೆ.

ಅಮ್ಮನಿಗೆ ಅಡಿಗೆ ಕೆಲಸದಲ್ಲಿ ನೆರವಾಗುತ್ತೇನೆ. ಕುಟ್ಟುವುದು, ತಿರುವುವುದು, ಬೀಸುವುದು, ಇಂತಹ ಕಷ್ಟದ ಕೆಲಸಗಳೆಲ್ಲ ನನ್ನ ಪಾಲು. ಅಮ್ಮ ತುಳಸೀ ಪೂಜೆ, ಗೌರೀ ಪೂಜೆಗಳನ್ನು ಮಾಡಲು ದಿನವೂ ತಪ್ಪುವುದಿಲ್ಲ. ಆರತಿ ಮಾಡುವಾಗ ನನ್ನನ್ನೂ ಕರೆಯುತ್ತಾಳೆ. ಗೌರಮ್ಮನಿಗೆ ಅರಿಶಿನ ಕುಂಕುಮವಿಡು ಎನ್ನುತ್ತಾಳೆ. ನಾನು ಅವಳು ಹೇಳಿದಂತೆ ಮಾಡುತ್ತೇನೆ. ಆದರೆ ಮನಸ್ಸಿನಲ್ಲಿ ಮಾತ್ರ—ಏಕೆ ಮಾಡಬೇಕು? ಮಾಡದಿದ್ದರೆ ಏನು ಉಳಿದು ಹೋಗುತ್ತದೆ? ಎಂದು ಅಂದುಕೊಳ್ಳುತ್ತೇನೆ. ಆಮೇಲೆ ಅವಳ ಮನಸ್ಸು ನೋಯಿಸಬಾರದು; ಅದಕ್ಕಾದರೂ ಅವಳು ಹೇಳಿದ ಹಾಗೆ ಮಾಡಬೇಕು ಎಂದು ಸಮಾಧಾನ ಹೇಳಿಕೊಳ್ಳುತ್ತೇನೆ.

ಸಾಯಂಕಾಲ ಬಚ್ಚಲು ಮನೆಗೆ ನೀರು ತುಂಬಿಕೊಳ್ಳುವುದು. ನಿನಗೆ ಗೊತ್ತೇ ಇವೆಯಲ್ಲ, ಇಲ್ಲಿ ನಲ್ಲಿ ಇಲ್ಲವೆಂಬುದು. ಅಮ್ಮನೂ ನಾನೂ ಜೊತೆ ಹಿಡಿದು ನೀರು ಸೇದುತ್ತೇವೆ. ನಾನು ಹಂಡೆಗೆ ನೀರು ಹನಿಸುತ್ತೇನೆ. ಆ ಮೇಲೆ ನಂಜಿಯ ಜೊತೆಯಲ್ಲಿ ಎಲ್ಲಾದರೂ ಸುತ್ತಿಕೊಂಡು ಬರುವುದು; ಕೆರೆಯ ಸೋಪಾನದ ಮೇಲೆ ಕುಳಿತು ಗಾಳಿಯಲ್ಲಿ ನೀರು ಅಲೆ ಅಲೆಯಾಗಿ ಎದ್ದು ದಡಕ್ಕೆ ಬಡಿಯುತ್ತಿರುವುದನ್ನು ನೋಡುತ್ತಾ ಕುಳಿತಿರುವುದು. ಒಂದೊಂದು ದಿನ ಅಪ್ಪನ ಜೊತೆ ಹೋಗುತ್ತೇನೆ.

ಇನ್ನೊಂದು ವಿಷಯ ನಿನಗೆ ಬರೆಯಲೇ ಇಲ್ಲ. ನಮ್ಮ ಮನೆಯಲ್ಲಿ ಒಂದು ಹಸು ಇದೆ. ಒಂದು ಮುದ್ದಾದ ಕರುವೂ ಇದೆ. ಈಗ ಹಾಲು ಕರೆಯುವವಳೂ ನಾನೇ. "ಹಾಲನ್ನು, ಹೆಪ್ಪು ಹಾಕಿದರೆ ಮೊಸರಾಗುವುದು; ಮೊಸರು ಕಡೆದರೆ ಬೆಣ್ಣೆ ಬರುವುದು. ಬೆಣ್ಣೆಯನ್ನು ಕಾಸಿದರೆ ತುಪ್ಪವಾಗುವುದು." ಎಂಬುದು ನನಗೆ ಗೊತ್ತಾಗಿದೆ. ಯಾರನ್ನೂ ತಿಳಿದುಕೊಂಡುದಲ್ಲ. ಪುಸ್ತಕದಲ್ಲಿ ಓದಿ ತಿಳಿದದ್ದಲ್ಲ. ಮಾಡಿ ಕಂಡುಕೊಂಡ ಸತ್ಯ. ಹಸು ಕರುಗಳಿಗೂ ನನಗೂ ಏನೋ ನಂಟು ಆಗಲೆ ಉಂಟಾಗಿದೆ. ನಾನು ಹತ್ತಿರ ಬಂದರೆ ಹಸು ಹುಲ್ಲು ಮೇಯುವುದನ್ನು ಬಿಟ್ಟು ನನ್ನ ಮುಖ ನೋಡುತ್ತಾ ಹೂಂಕರಿಸುವುದು. ಕರು, ಮಕ್ಕಳ ಹಾಗೆ ಹತ್ತಿರ ಬಂದು ಕೈನೆಕ್ಕುತ್ತದೆ. ಇವೆರಡೂ ನನ್ನ ಮೂಕ ಸ್ನೇಹಿತರು.

ಇಂತು ನಿನ್ನ ಗೆಳತಿ.

೬

ಕಮಲು,

ಏನು! ಮಕ್ಕಳ ಗಲಾಟೆ! ಅದಕ್ಕೆ ಕಾಗದ ಬರೆಯಲಾಗಲಿಲ್ಲವೆ! ಅಯ್ಯೋ ಹುಡುಗಿ, ನಿನ್ನ ಪಾಡು ಯಾವತ್ತೂ ಇಷ್ಟೆ. "ಸಾಯಂಕಾಲ ಪೇಟೆಗೆ ಹೋಗೋಣ ಬರುತ್ತೀಯಾ? ಸಿನಿಮಾ ಮ್ಯಾಟನಿಗೆ ಬರುತ್ತೀಯಾ?" ಎಂದು ಹಿಂದೆ ನಾವೆಲ್ಲ ಕರೆಯುತ್ತಿದ್ದಾಗ ನಿನ್ನ ಗಂಡನನ್ನು ಕೇಳಬೇಕಾಗಿತ್ತು. ಈಗ ಗಂಡನ ಜೊತೆಗೆ ಮಕ್ಕಳು ಬೇರೆ! ಮೊಮ್ಮಕ್ಕಳೊಂದು ಕಡಿಮೆ ನಿನಗೆ. ನಿನಗೆ ಮದುವೆಯಾದ ಹಾಗೆ ನಿನ್ನ ಮಗಳಿಗೂ ಮದುವೆ ಮಾಡಿದರೆ—ಅದೇನು ಬಹಳ ದೂರದಲ್ಲಿಲ್ಲ.

ಏನಾದರೂ ಆಗಲಿ, ತಡವಾದರೂ ಚಿಂತೆಯಿಲ್ಲ. ಕಾಗದ ಬರೆದೆಯಲ್ಲ. ನಾನು ಈ ಹಳ್ಳಿಯಲ್ಲಿ ಬಹಳ ದಿನವಿರುವುದಿಲ್ಲವೆಂದು ನಿನ್ನ ಭಾವನೆ. ಅಯ್ಯೋ ಹುಚ್ಚಿ,! ಇನ್ನೆಲ್ಲಿಗೆ ಹೋಗುವೆನೆಂದು ತಿಳಿದಿದ್ದೀಯೆ? ಒಬ್ಬಳೇ ಎಲ್ಲಿ ಹೋಗಿ ಇರಲೂ ಇಷ್ಟವಿಲ್ಲ ನನಗೆ. ಅಲ್ಲದೆ ಏಕೆ ಹೋಗಬೇಕೋ ತಿಳಿಯದು. ಹಳ್ಳಿ ಬೇಜಾರಾಗಬಹುದೆಂದು ಊಹಿಸಿದ್ದರೆ, ಅದೂ ತಪ್ಪು. ಮೊದಮೊದಲು ನೋಡೋಣ ಹೇಗಿರುತ್ತದೆ ಎಂದು ಪ್ರಾರಂಭಿಸಿದ ಕೆಲಸಗಳಲ್ಲೆಲ್ಲ ಏನೋ ಒಂದು ತರಹ ಆಸಕ್ತಿ ಬಂದಿದೆ. ಕೆಲಸ ಮಾಡುವುದರಲ್ಲೇ ಒಂದು ಸಂತೋಷ.

ಮನೆಗೆಲಸ; ಅದು ಮುಗಿದರೆ ನಂಜಿ. ಅವಳ ಜೊತೆಯಲ್ಲಿ ಅಲ್ಲಿ ಇಲ್ಲಿ ತೋಟಕ್ಕೋ ಹೊಲಕ್ಕೋ ಅಲೆಯುವುದು. ಇವು ದಿನವೆಲ್ಲ ಆಗುತ್ತದೆ. ಬೇಜಾರಿಗೆ ಅವಕಾಶವೇ ಇಲ್ಲ.

ನೀನು ಕೇಳಿರುವುದು ಒಳ್ಳೆಯ ಪ್ರಶ್ನೆ: 'ಮುಂದೆ ಏನು ಮಾಡುವೆ?' ಏನು ಮಾಡಬೇಕು! ನೀನೇನು ಮಾಡುತ್ತಿರುವುದು? ಉಳಿದವರೇನು ಮಾಡುತ್ತಿರುವುದು? ನಾನೂ ಹಾಗೇ,-ಊಟ, ನಿದ್ದೆ, ಓಡಾಡುವುದು, ಮಲಗುವುದು, ಕೂರುವುದು ಇಷ್ಟೇ ಮಾಡುವುದು.

ನಾನು ಏನು ಮಾಡಬೇಕೆಂಬುದು ನಿನ್ನ ಉದ್ದೇಶ:–ನನಗೆ ತಿಳಿಯಲಿಲ್ಲ. ಬಿಡಿಸಿ ಹೇಳಬಾರದೆ?

ಇಂತು ನಿನ್ನ ಗೆಳತಿ.

೭

ಕಮಲು,

"ಈಗ ಹಾಸ್ಯಮಾಡು. ಮುಂದೆ ನನಗೂ ಕಾಲ ಬರುತ್ತದೆ. ಗೊತ್ತೆ ಇದೆಯಲ್ಲ ಗಾದೆ, 'ಅತ್ತೆಗೊಂದು ಕಾಲ ಸೊಸೆಗೊಂದು ಕಾಲ," ಎಂದು ಬರೆದಿದ್ದೀಯೆ. ಇರಲಿ ನೋಡೋಣ, ಅದೇನು ಕಾಲ ನಿನಗೆ ಬರುತ್ತದೊ, ನಾನೇನು ನಿನ್ನ ಕೈಲಿ ಸಿಕ್ಕಿಕೊಳ್ಳುತ್ತೇನೋ ಎಂಬುದನ್ನು.

ನಂಜಿಯ ಕಥೆ. ಪಾಪ ಅವಳದು ಕಷ್ಟದ ಬಾಳು. ಅವಳ ಗಂಡನ ಮನೆ ಈ ಊರಿಗೆ ದೊಡ್ಡ ಒಕ್ಕಲಾಗಿತ್ತು. ಅವಳ ಮಾವ ಇದ್ದ ಆಸ್ತಿಯನ್ನೆಲ್ಲ ಹಾಳುಮಾಡಿದ. ಈಗ ಅವಳ ಗಂಡ, ತನ್ನ ಅಪ್ಪ ಮಾಡಿದ ಸಾಲ—ಆಸ್ತಿ ಹೋದ ಮೇಲೂ ಉಳಿದ ಸಾಲ, ಅದನ್ನು ತೀರಿಸಲು ಜೀತದ ಆಳಾಗಿ ಸೇರಿದ್ದಾನೆ. ಅವಳು, ಅವಳ ಅತ್ತೆ ಕೂಲಿನಾಲಿ ಮಾಡಿ ಕಾಲ ಹಾಕುತ್ತಿದ್ದಾರೆ. ಒಂದು ಗಂಡು ಒಂದು ಹೆಣ್ಣು ಎರಡು ಮಕ್ಕಳು ಬೇರೆ ಇವೆ. ತಮ್ಮ ಹೊಟ್ಟೆ ಹೊರೆಯುವುದೇ ಕಷ್ಟವಾಗಿರುವಾಗ ಮಕ್ಕಳು ಬೇರೆ! ನನಗೆ ಅವಳ ಕಥೆ ಕೇಳಿ ಬಹಳ ಮರುಕವುಂಟಾಗಿದೆ. ನಮ್ಮ ತಂದೆಗೆ ಹೇಳಿ, ಅವಳ ಗಂಡನ ಸಾಲ ತೀರಿಸಿ, ಅವನನ್ನು ನಮ್ಮ ಜಮೀನು ನೋಡಿಕೊಳ್ಳಲು ನಮ್ಮ ಹತ್ತಿರದಲ್ಲೇ ಇಟ್ಟುಕೊಳ್ಳುವ ಹಾಗೆ ಮಾಡಬೇಕು ಅನ್ನಿಸಿದೆ.

ಇಂತು ನಿನ್ನ ಗೆಳತಿ-

೮

ಕಮಲು,

ನಮ್ಮ ಮನೆಗೆ ನೆಂಟರು ಬಂದಿದ್ದರು. ದೂರದವರಲ್ಲ. ನನ್ನ ಚಿಕ್ಕಮ್ಮನ ಮಗಳು, ಅವಳ ಗಂಡ. ಚಿಕ್ಕವರಾಗಿದ್ದಾಗ ನಾನೂ ಅವಳೂ ಒಟ್ಟಿಗೆ ಆಟವಾಡಿದವರು. ಬುದ್ಧಿ ಬಂದ ಮೇಲೂ ಸ್ವಲ್ಪ ದಿನ ಒಟ್ಟಿಗೆ ಇದ್ದೆವು. ಅವಳ ಹೆಸರು ಪುಟ್ಟಮ್ಮ. ಅವಳ ಗಂಡ ಅವಳನ್ನು "ಪುಟ್ಟು, ಪುಟ್ಟು" ಎಂದು ಕರೆಯುತ್ತಾನೆ. ನಾನು, ಅಪ್ಪ, ಪುಟ್ಟು, ಅವಳ ಗಂಡ ಪಗಡೆಯಾಡಿದೆವು. ನಮ್ಮ ತೋಟಕ್ಕೆ ಹೋಗಿ ಎಳನೀರು ಕುಡಿದೆವು. ಒಂದು ದಿನ ಹುಳಿಯನ್ನ ಮೊಸರನ್ನ ಮಾಡಿಕೊಂಡು ಹೋಗಿ ತೋಟದಲ್ಲಿ

ವನಭೋಜನ ಮಾಡಿದೆವು. ಹುಣ್ಣಿಮೆಯ ರಾತ್ರಿ ನಮ್ಮ ಬೃಂದಾವನದ ಹತ್ತಿರ ಕೂತು, ಬೆಳದಿಂಗಳಿನಲ್ಲಿ ಈರುಳ್ಳಿ ಬೇಳೆಹುಳಿ ಸಂಡಿಗೆ ಇವುಗಳೊಡನೆ ಬೆಳದಿಂಗಳೂಟವೂ ಆಯಿತು. ಪುಟ್ಟು ಗಂಡ ಬಹಳ ಮಾತಾಡುತ್ತಾನೆ ಅವನ ಹೆಂಡತಿಯನ್ನಂತೂ ಗೋಳುಹುಯ್ದುಕೊಂಡುಬಿಡುತ್ತಾನೆ. ದಿನಕ್ಕೆ ನೂರುಸಾರಿ "ಲೇ ಪುಟ್ಟು, ಲೇ ಪುಟ್ಟು" ಎಂದು ಕೂಗುತ್ತಿರುತ್ತಾನೆ. ಅವರಿಬ್ಬರಿರುವವರೆಗೂ ನಮ್ಮ ಮನೆಯಲ್ಲಿ ಗಲಾಟೆಯೋ ಗಲಾಟೆ. ಸದಾ ನಗು. ಇದ್ದ ಎರಡು ಮೂರು ದಿನಗಳೂ ಒಂದು ಗಳಿಗೆಯಂತೆ ಕಳೆದು ಹೋದವು. ಹೋಗುವಾಗ ಅವನು, "ಮರೆಯಬೇಡಮ್ಮ. ನೀನು ಮರೆತರೂ ನಾನು ಪುಟ್ಟೂ ಎಲ್ಲಿದ್ದರೂ, ನಿನ್ನ ಮದುವೆಗೆ ಕರೆಯದೇ ಇದ್ದರೂ ಬಂದುಬಿಡುತ್ತೇವೆ". ಪುಟ್ಟೂ ಕಡೆ ತಿರುಗಿ, "ಲೇ ಪುಟ್ಟು, ಅಲ್ಲವೇನೆ?"ಅಂದ. ನಮ್ಮಮ್ಮ ಇದ್ದವಳು "ಆದ ಕಾಲಕ್ಕೆ ನೋಡೋಣ" ಎಂದಳು.

ಅವರಿಬ್ಬರೂ ಹೋದ ಮೇಲೆ ಮನೆಯೆಲ್ಲ ಬರಿದೋ ಬರಿದಾಗಿ ಕಂಡುಬಂತು. ಆಗಿನ ಸಂತೋಷ ಹಾಗಿರಲಿ, ಏನೋ ಒಂದು ಬಗೆಯ ಮಂಕು ಮನೆಗೆ ಕವಿದುಕೊಂಡಿರುವ ಹಾಗೆ ಕಂಡಿತು. ಏನೋ ಬೇಜಾರು. ಏನೋ ನಾನು ಒಂಟಿ, ಯಾರೂ ಜೊತೆಯಲ್ಲಿಲ್ಲ ಅನ್ನಿಸಿದ ಹಾಗಿದೆ. ಅಮ್ಮ ಇದ್ದಾಳೆ, ಅಪ್ಪ ಇದ್ದಾನೆ. ಮೊದಲು ಅವರೂ ಇದ್ದರು. ಆದರೆ ಪುಟ್ಟು, ಪುಟ್ಟು ಗಂಡ ಇದ್ದಾಗ ಮನಸ್ಸು ಒಂದು ತರಹ ಹಗುರವಾಗಿತ್ತು. ನಮ್ಮ ವಯಸ್ಸಿನವರೇ ಒಬ್ಬರಾದರೂ ಜೊತೆಗಾರರಿದ್ದರೆ ಇಷ್ಟು ಬೇಸರವಾಗುವುದಿಲ್ಲವೆನ್ನಿಸುತ್ತದೆ. ನಂಜಿ ಇದ್ದಾಳೆ. ಅವಳು ನನಗೆ ಬೇಕಾದವಳು. ಅವಳನ್ನು ಕಂಡರೆ ನನಗೆ ಪ್ರೀತಿ. ಆದರೂ ಸಮಾಧಾನವಾಗಿರಲು ಇನ್ನೂ ಏನೋ ಬೇಕು ಅನ್ನಿಸಿದೆ ಮನಸ್ಸಿಗೆ. ಕೆಲವು ವೇಳೆ ಎಲ್ಲರಿಗೂ ಹೀಗಾಗುತ್ತದೆ ಅಲ್ಲವೆ? ಏನೋ ಬೇಕು ಅನ್ನಿಸುತ್ತದೆ, ಆದರೆ ಏನು ಎಂದು ಕೇಳಿದರೆ ಹೇಳುವುದಕ್ಕೆ ಬಾರದು. ಮಾತುಬರದ ಮಕ್ಕಳ ಹಾಗಿರುವುದು ನಮ್ಮ ಸ್ಥಿತಿ. ಈ ಅವ್ಯಕ್ತ ಚಿಂತೆಯೇನು?

ಇಂತು ನಿನ್ನ ಗೆಳತಿ.

೯

ಕಮಲು,

ಈ ಕಾಗದ ನಾನು ಇಷ್ಟು ಬೇಗ ಬರೆದಿರುವುದು ನಿನಗೆ ಆಶ್ಚರ್ಯವನ್ನುಂಟುಮಾಡಬಹುದು. ಅದಕ್ಕೆ ಕಾರಣವಿದೆ.

ನೆನ್ನೆ ನನ್ನ ತಂದೆಯೊಡನೆ ನನ್ನ ತಾಯಿ ಏನೋ ಗಟ್ಟಿಯಾಗಿ ಮಾತನಾಡುತ್ತಿದ್ದಳು. ನಾನು ಮನೆಯಲ್ಲಿಲ್ಲವೆಂದು ತಿಳಿದುಕೊಂಡು ಅಮ್ಮ ಮಾತನಾಡಲು ಆರಂಭಿಸಿರಬೇಕು. ಆದರೆ ನಾನು ನಂಜಿಯೊಡನೆ ಮಾತಾಡುತ್ತ ಹಿತ್ತಿಲ ಬಾಗಿಲಿನ ಬಳಿ ಕುಳಿತಿದ್ದೆ.

" ಹೆಚ್ಚು ಓದಿಸಬೇಡಿ. ಬೇಗ ಮದುವೆ ಮಾಡಿಬಿಡಿ ಅಂತ ನಾನು ಎಷ್ಟು ಹೇಳಿದರೂ ಕೇಳಲಿಲ್ಲ. ಓದು ಮುಗಿಯಲಿ, ಈಗ ಮದುವೆ ಬೇಡ ಎಂದು ದಿನ ತಳ್ಳಿದಿರಿ. ಈಗ ತಿಳಿಯುತ್ತದೆ ನಿಮಗೆ ಕಷ್ಟ. ಓದಿದ ಹುಡುಗಿ, ವಯಸ್ಸಾದ ಹುಡುಗಿ ಎಂದು ಎಲ್ಲರೂ ತಂದುಕೊಳ್ಳಲು ಹೆದರುತ್ತಾರೆ. ಮುಂದೇನು ಗತಿ. ನಾವು ತಾನೆ ಇನ್ನೆಷ್ಟು ದಿನ ಬದುಕಿರುತ್ತೇವೆ."

ನಂಜಿ, " ಯಾಕರವ್ವ, ಮದುವೆ ಮಾಡಿಕೊಂಡಿಲ್ಲ ? " ಎಂದು ಕೇಳಿದಳು.

ನಾನು, " ಸುಮ್ಮನಿರು ನಿನಗೆ ಗೊತ್ತಾಗುವುದಿಲ್ಲ " ಎಂದೆ. ಅವಳು ನನ್ನ ಮುಖವನ್ನು ಹಾಗೆ ಮಿಟಮಿಟನೆ ನೋಡುತ್ತಿದ್ದಳು. ನಾನು ಅವಳಿಗೆ ಬಹಳ ವಿಚಿತ್ರವಾಗಿ ಕಾಣಿಸಿರಬೇಕು.

ಇಂತು ನಿನ್ನ ಗೆಳತಿ.

೧೦

ಕಮಲು,

ನನ್ನ ತಾಯಿಯ ಮಾತುಗಳು ಮತ್ತು ನಿನ್ನ ಕಾಗದ ಇವೆರಡೂ ನನ್ನನ್ನು ಬಹಳ ಯೋಚನೆಗೆ ಗುರಿಮಾಡಿವೆ. ಈ ಯೋಚನೆ ನನಗೆ ಮುಂಚೆ ಬಂದಿರಲಿಲ್ಲವೆಂದಲ್ಲ. ಆದರೆ, ಆಗ, ಇದು ಅಷ್ಟು ಮುಖ್ಯವೆಂದು ಕಾಣಲಿಲ್ಲ. ಈಗೇಕೋ ನಿಜವಾಗಿಯೂ ನನ್ನ ಮನಸ್ಸಿಗೆ, ನಾನು ಇದು ವರೆಗೂ ಏನು ಮಾಡಿರುವುದು ? ಮುಂದೆ ಏನು ಮಾಡಬೇಕು ? ಏತ

ಕ್ಕೋಸ್ಕರ ಈ ಓದು ಮೊದಲಾದ ಸಿದ್ಧತೆಗಳು? ಎಂಬ ಯೋಚನೆಗಳು ಮನಸ್ಸಿಗೆ ಮತ್ತೆಮತ್ತೆ ತೋರುತ್ತಿವೆ. ಇದಕ್ಕೆ ಮುಂಚೆ ಏಕೆ ಈ ವಿಷಯ ಗಳು ಅಷ್ಟು ಮುಖ್ಯವಾಗಿ ಅಷ್ಟು ದೊಡ್ಡದಾಗಿ ಕಾಣಲಿಲ್ಲವೋ ತಿಳಿಯದು. ಬಹುಶಃ ನನ್ನ ಓದು, ಜೊತೆಯವರೊಡನೆ ಓಡಾಟ, ಹುಡುಗುತನದ ಹುಡುಗಾಟ ಇವುಗಳಲ್ಲಿ ಅವಕಾಶ ಸಿಕ್ಕದಿರಬಹುದು. ಇಲ್ಲಿ ಸಮಾಧಾನ ವಿರುವ, ಪುರಸತ್ತಿರುವ ಜೀವನ ಕಾರಣವಿರಬಹುದೆ? ಅಲ್ಲ, ಈ ಯೋಚನೆಗಳು ಬರಲು ಇದೇ ಸರಿಯಾದ ಕಾಲವೋ. ಏನೊಂದೂ ತಿಳಿ ಯದು. ಅಂತೂ ಯೋಚನೆ ಬಲವಾಗಿದೆ.

ಹಳ್ಳಿಯ ಹುಡುಗಿ ನಂಜಿ ಏನಾದರೂ ದಾರಿ ತೋರಿಸುವಳೋ ಎಂದು ನೆನ್ನೆ ಅವಳೊಡನೆ ಇದೇ ಮಾತಾಡಲು ಆರಂಭಿಸಿದೆ.

"ನಂಜೀ, ನಾನು ಏಕೆ ಮದುವೆ ಮಾಡಿಕೊಳ್ಳಬೇಕು?"

ತಕ್ಷಣ ಹೀಗೆ ಕೇಳುತ್ತಲೂ ಅವಳು ಬೆಚ್ಚಿಬಿದ್ದಳು. ಆಶ್ಚರ್ಯದಿಂದ ಕಣ್ಣುಗಳನ್ನು ಅಗಲಮಾಡಿಕೊಂಡು,

"ಸರಿ ಇದೀಗ ಒಳ್ಳೆ ಮಾತು ಕಣ್ರವ್ವಾ."

"ಏಕೆ ಮಾಡಿಕೊಳ್ಳಬೇಕು? ನೀನು ಏಕೆ ಮಾಡಿಕೊಂಡೆ, ಹೇಳು."

ಅವಳು ಸ್ವಲ್ಪ ಯೋಚಿಸಿ "ನನಗೆ ತಿಳೀದ್ರವ್ವ; ನನ್ನ ಅಪ್ಪ ಅಮ್ಮ ಮಾಡಿದರು. ನನ್ನ ಮದುವೆ ಆಯಿತು."

"ಏಕೆ? ನಿಮಗೆ ಇಷ್ಟವಿರಲಿಲ್ಲವೆ?"

"ಇತ್ತು ಅವ್ವ, ಆದರೆ ಹೆಣ್ಣುಮಕ್ಕಳು ಯೇಳ್ತಾರಾ?"

"ಸರಿ ನಿನಗೇನೋ ಸರಿಯಾದ ಗಂಡ ಸಿಕ್ಕಿದ, ಸರಿಹೋಯಿತು. ನಿನಗೆ ಒಪ್ಪದ ಗಂಡು ಗೊತ್ತುಮಾಡಿದ್ದರೆ ಏನು ಮಾಡುತ್ತಿದ್ದೆ?"

"ಆಗ ಸುಮ್ಕಿರೋಕ್ಕಾಗ್ತದ? ಬೇಡ ಅನ್ನುತ್ತಿದ್ದೆ".

"ದೊಡ್ಡವರು ಬಲವಂತ ಮಾಡಿದ್ದರೆ ಏನು ಮಾಡುತ್ತಿದ್ದೆ."

"ನಮ್ಮ ಅವ್ವ ಮದುವೆ ಮುಂಚೆ ಕೇಳಿದಳು, 'ಊಂ' ಅಂದೆ; ಆಮೇಲೇ ಆದ್ದು ಮದ್ವೆ."

“ ನಿಮ್ಮ ಅಮ್ಮ ನಿನ್ನನ್ನು ಕೇಳದೆ ಇದ್ದಿದ್ದರೆ.”

“ ಹೆಂಗೆ ಕೇಳದೆ ಇದ್ದಾಳವ್ವ, ಅವಳೂ ಹೆಣ್ಣಲ್ಲವೆ ? ”

“ ಒಂದು ಪಕ್ಷ ಅಪ್ಪ ಅಮ್ಮ ಇಬ್ಬರೂ ಹಂಗೆ ಮಾಡಿದ್ದರೆ ಏನು ಮಾಡುತ್ತಿದ್ದೆ ” ?

“ ಏನೋ ನಂಗೆ ಗೊತ್ತಾಗೋಕಿಲ್ಲ....ತಾಳಿ ಯೇಳ್ತೀನಿ.— ನಮ್ಮೂರ ಚೆನ್ನಿ ಹಾಗೆ ಕೊಳ್ಳ ಬಿದ್ದುಬಿಡುತ್ತಿದ್ದೆ.’’

“ ಅದು ತಪ್ಪಲ್ಲವೆ ನಂಜಿ ?

“ ಏನವ್ವ, ಅಪ್ಪ ಅಮ್ಮಂಗೆ ನಾವು ಬೇಡ, ಕೂಡೋ ಗಂಡ ನಮಗೆ ಬೇಡ, ಇನ್ನು ಯಾಕೆ ಇರಬೇಕು ನಾವು ಭೂಮ್ಯಾಗೆ ? ”

ಇಲ್ಲಿಗೆ ಮಾತು ನಿಲ್ಲಿಸಿದೆ.

“ ಮದುವೆ ಮಾಡ್ಕೊಂತೀರೇನವ್ವಾ ? ದೊಡ್ಡವ್ರೋರಿಗೆ ಹೇಳ್ಲಾ ? ಅವರು ಸುಮ್ನೆ ಗೋಳಾಡ್ತಾರೆ.” ಎಂದು ಕೇಳಿದಳು.

ನಾನು ಸುಮ್ಮನಿದ್ದೆ. ಅವಳಿಗೆ ಮತ್ತೆ ಮಾತಾಡಲು ಧೈರ್ಯ ಬರಲಿಲ್ಲ. ಅಲ್ಲಿಗೇ ಮಾತು ನಿಂತಿತು. ನಿನ್ನ ಕಾಗದದಲ್ಲಿ ಈ ವಿಷಯ ಯೋಚನೆ ಮಾಡಬೇಕಾದದ್ದು ಎಂದು ಬರೆದಿದ್ದೀಯೆ ಹೊರತು ಏನು ಮಾಡಬೇಕೆಂಬುದನ್ನು ತಿಳಿಸಿಲ್ಲ. ಮುಂದಿನ ಕಾಗದದಲ್ಲಾದರೂ ಬರೆ.

ಇಂತು ನಿನ್ನ ಗೆಳತಿ.

## ೧೧

ಕಮಲು,

ನೀನು ಹೇಳಿರುವುದು ಸರಿಯೆ. ಇರುವುದು ಎರಡೇ ಮಾರ್ಗ. ಮದುವೆ ಮಾಡಿಕೊಳ್ಳುವುದು, ಇಲ್ಲವೇ ಒಂಟಿಯಾಗಿರುವುದು. ಒಂಟಿಯಾಗಿರಬೇಕಾದರೆ ಯಾವುದಾದರೂ ಕೆಲಸ ಹುಡುಕಿ ಸೇರಬೇಕು. ಏಕೋ ಇದು ಮನಸ್ಸಿಗೆ ಸರಿಹೋಗದು. ಅದು ಮನಸ್ಸಿಗೆ ಒಪ್ಪದುದರಿಂದಲೇ ಇಲ್ಲಿ ಬಂದಿದ್ದೇನೆ. ಇಲ್ಲದಿದ್ದರೆ ಯಾವತ್ತೊ ಕೆಲಸಕ್ಕೆ ಸೇರಿ ಬಿಡಬಹುದಾಗಿತ್ತು. ಸುಮ್ಮನಿರುವುದಂತೂ ಸಾಧ್ಯವಿಲ್ಲ. ಇದೇ ಯೋಚನೆಯಲ್ಲಿದ್ದಾಗ ನಂಜಿ ಬಂದಳು. ಮತ್ತೆ ಅವಳೊಡನೆ ಮಾತು ಆರಂಭಿಸಿದೆ.

" ನಂಜೀ ಮದುವೆಯಾದ ಮೇಲೆ ನೀನು ಸುಖವಾಗಿದ್ದೀಯಾ ? " ಅವಳಿಗೆ ಮದುವೆ ಮಾತು ಕೇಳಿ ಉತ್ಸಾಹ ಬಂದಿತು. ಎರಡನೇ ಬಾರಿ ನಾನು ಅವಳೊಡನೆ ಈ ಮಾತು ಆಡುತ್ತಿದ್ದುದು.

" ಹಾಗಂದರೇನವ್ವ, ಮದ್ವೆ ಇನ್ನೇಕಾಗ್ತಾರವ್ವ ? "

" ಮದುವೆಗೆ ಮುಂಚೆ, ನೀನು ಇನ್ನೊಬ್ಬರ ಮನೆಯಲ್ಲಿ ಕೆಲಸಕ್ಕೆ ಸೇರಿದ್ದೆಯಾ ? "

" ಇಲ್ಲ "

" ಮತ್ತೆ ಈಗ ನಿನ್ನ ಅತ್ತೆ, ನಿನ್ನ ಮಕ್ಕಳ ಮತ್ತು ನಿನ್ನ ಜೀವನಕ್ಕೆ ಕಷ್ಟಪಡುತ್ತಿದ್ದೀಯಲ್ಲ ಇದು ಸುಖವೆ ? "

" ಬಿಡವ್ವಾ ಸುಖ ಅಂದರೇನು ? ಬಿಮ್ಮಗೆ ಮನೆಯಲ್ಲೇ ಕುಳಿತು ಹಿಟ್ಟುಣ್ಣುವುದಾ ? "

" ಅಷ್ಟಲ್ಲದೆ ಇನ್ನೇನು ? ಹಿಟ್ಟಿಗೋಸ್ಕರ ಕಂಡವರ ಮನೆ ಕೂಲಿ ಮಾಡುವುದು ಸುಖವೆಂದುಕೊಂಡೆಯಾ ? "

" ಅದೆಂತ ಬಾಳ್ರವ್ವ ಮೈಮುರಿದು ಕೆಲಸ ಮಾಡದೆ ಇರೋದು ? ನಮ್ಮ ದೊಡ್ಡ ಗೌಡರ ತಾಯಿ ಅವಳೆ ನೋಡಿ. ಅವಳಿಗೆ ಎಪ್ಪತ್ತೈದು ವರ್ಷ. ಮಕ್ಕಳು ಮೊಮ್ಮಕ್ಕಳು ಆಳುಕಾಳು ಎಲ್ಲ ಅವ್ರೆ. ಗೌಡ್ರು 'ನಿನ್ನ ಕೈಲಾಗಾಕಿಲ್ಲ ಸುಂಕಿರು ಕೆಲಸ ಮಾಡಬೇಡಾ' ಂತಾರೆ. ಆದರೂ ಒಂದು ಗಳಿಗೇನಾದರೂ ಕೆಲಸಮಾಡದಲೆ ಸುಂಕೆ ಕುಂತಾತ ಮುದುಕಿ. ಆ ಮುದುಕಿ ಕೇಳಿ ಸುಖ ಅಂದರೇನೂಂತ. "

ಇವಳ ಉಪನ್ಯಾಸ ಕೇಳಿ ನನಗೆ ನಗು ಬಂತು.

" ಅದೆಲ್ಲ ಅವಳ ಮನೆ ಬದುಕು, ಅದಕ್ಕೋಸ್ಕರ ಮಾಡುತ್ತಾಳೆ. ಆದರೆ ಬೇರೆಯವರ ಮನೆ ಕೆಲಸ ಮಾಡುವುದು ಬೇರೆ."

" ಮನೆ ಹೊಲ ಇದ್ದರೆ ಮನೇಲಿ ಕೆಲಸ ಮಾಡೋದು. ಇಲ್ಲದಿದ್ದರೆ ಇನ್ನೊಬ್ಬರ ಮನೆಯಲ್ಲಿ ಮಾಡೋದು."

" ಇಷ್ಟೆಲ್ಲ ಕಷ್ಟಪಡೋದು ಏಕೋ ನನಗೆ ತಿಳಿಯದು ! "

" ನಾವೂ ಹತ್ತು ಜನದಂತೆ ಹಟ್ಟಿ ಬಾಕಲು ಮಾಡಿಕೊಳ್ಳಾಕೆ."

" ಮದುವೆಯಾಗದೆ ದುಡಿದರೆ ಇನ್ನೂ ಬೇಗ ಮಾಡಿಕೊಳ್ಳ ಬಹುದಲ್ಲ."

" ಹುಟ್ಟಿದ ಮೇಗೆ ಹೆಂಗಿದ್ದರೂ ದುಡೀಬೇಕು. ಹಂಗಿರುವಾಗ ಗಂಡ ಮಕ್ಕಳು ನಂಟರು ಇವರಿಗೋಸ್ಕರ ದುಡಿಯೋಣ ಕಣವ್ವಾ. ಹಂಗಿಲ್ಲದೆ ಮದುವೆಯಾಗದೆ ದುಡಿದರೆ ಯಾರಿಗೇಂತ ಇಟ್ಟು ಹೋಗೋಣ."

" ಸರಿ, ಸರಿ. "

" ಮರ ಹುಟ್ಟಿ ಮರ ಬಿದ್ದೋದಂಗೆ ಇರೋದೇನು ನನಗೆ ಸರೀಗೆ ಕಾಣೋಕಿಲ್ಲವ್ವ. "

" ಹಾಗಾದರೆ ನನ್ನನ್ನು ಮದುವೆ ಮಾಡಿಕೋಂತೀಯ ? ನಂಜೀ. ನಿನಗೆ ಅದು ಸರಿಯೆಂದು ಕಾಣಿಸುತ್ತದೆಯೆ ? ನಾನು ಮದುವೆ ಮಾಡಿಕೊಳ್ಳದಿದ್ದರೂ ನನ್ನ ಅನ್ನ ನಾನು ಸಂಪಾದಿಸಿಕೊಳ್ಳಬಲ್ಲೆ....ಯೋಚನೆ ಮಾಡಿ ಹೇಳು."

" ನನಗೇನು ತಿಳೀತದವ್ವ. ನೀವು ಓದಿದೋರು " ಎಂದು ಹೇಳಿ ಮಾತು ನಿಲ್ಲಿಸಿಬಿಟ್ಟಳು.

ಕಮಲು, ನಂಜಿ ಹೇಳಿದುದು ಸರಿ. ಆದರೂ ನನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲ. ನೀನಾದರೂ, ಏನಾದರೂ ಖಂಡಿತವಾಗಿ ಹೇಳಬಲ್ಲೆಯಾ ? ನಿನ್ನ ಕಾಗದ ಎದುರು ನೋಡುತ್ತಿದ್ದೇನೆ.

ಇಂತು ನಿನ್ನ ಗೆಳತಿ.

## ೧೨

ಕಮಲು,

ಇದೀಗ ಆಶ್ಚರ್ಯ. ನಿನಗೆ ಮದುವೆಯಾಗಿ ಇಷ್ಟು ದಿನಗಳಾಗಿವೆ. ಒಂದು ದಿನವೂ ಏಕೆ ಮದುವೆ ಮಾಡಿಕೊಂಡೆಯೆಂಬುದನ್ನು ಯೋಚಿಸಿಲ್ಲ. ಮದುವೆಯಾಯಿತು ಮಕ್ಕಳಾಗಿದೆ. ನಿನ್ನ ಅನುಭವದಲ್ಲಿ ಮದುವೆ ಮಾಡಿಕೊಳ್ಳದಿದ್ದರೆ ಚೆನ್ನಾಗಿತ್ತು ಎಂದು ಅನ್ನಿಸಿಲ್ಲ. ನೀನು ಉಳಿದವರಿಗೆ ಬೇಡವೆಂತ ಹೇಗೆ ಹೇಳೀಯೆ ?

ಇಲ್ಲ, ನಿಜವಾಗಿಯೂ ನೀನು ಹೇಳಿರುವುದನ್ನು ಬೇರೆ ದೃಷ್ಟಿಯಿಂದ ನೋಡುವುದಿಲ್ಲ. ಬಾಲ ಕಳೆದುಕೊಂಡ ನರಿಯು ಹಾಗಾಗಲಿ ಚೇಳು ಕೈಲಿ ಕುಟುಕಿಸಿಕೊಂಡ ಕೋವುಟಿಯು ಹಾಗಾಗಲಿ ನೀನು ಮಾತಾಡು ತ್ತಿದ್ದೀಯೆಂದು ಭಾವಿಸುವುದಿಲ್ಲ. ನಿನ್ನ ಅನುಭವದಿಂದ ನಿನಗೆ ಮದುವೆ ಸರಿಯೆಂದು ತೋರಿದ್ದರಿಂದ ಹಾಗೆ ಹೇಳಿದ್ದೀಯೆ.

ನನ್ನ ಪ್ರಶ್ನೆಗೆ ಉತ್ತರ ಯೋಚಿಸಲು ಎರಡು ದಿನ ತಡವಾಯಿತೆ? ತಡವಾದರೇನಂತೆ ನಿನ್ನ ಕಾರಣ ನನ್ನ ಮನಸ್ಸಿಗೆ ಒಪ್ಪಿಗೆಯಾಗಿದೆ. ಯಾಕೆ ಹುಟ್ಟಿದೇವೆ. ಎಲ್ಲಿಗೆ ಹೋಗುತ್ತೇವೆ ಎನ್ನುವುದನ್ನು ಮನುಷ್ಯ ಬುದ್ಧಿ ಬಂದ ದಿನದಿಂದ ಆಲೋಚಿಸುತ್ತಿದ್ದಾನೆ, ಬುದ್ಧಿ ಹೋಗುವವರೆಗೂ ಆಲೋ ಚನೆ ಬಿಡುವುದಿಲ್ಲ. ಅದು ಮುಗಿಯುವುದೂ ಇಲ್ಲ. ಒಬ್ಬೊಬ್ಬರೂ ಒಂದೊಂದು ತರಹ ಹೇಳುತ್ತಾರೆ. ಅದಕ್ಕೆ ಕೊನೆಯಿಲ್ಲ, ನೆಲೆಯಿಲ್ಲ. ಹಾಗೆ ಸತ್ಯ ಮಿಥ್ಯವೂ ಅಷ್ಟೆ. ಆದರೆ ಹುಟ್ಟಿದ ಮೇಲೆ ಸಾಯುವವರೆಗೂ ಬದುಕು ನಿಜ. ನಮಗೆಲ್ಲ ಬದುಕು ಬೇಕು, ನಾವೆಲ್ಲ ಬದುಕಬೇಕು ಅನ್ನು ವುದೇ ಬದುಕಿನ ಗುರಿ. ಬದುಕುವಾಗ ನಂಜಿ ಹೇಳುವ ಹಾಗೆ ನಾಲ್ಕು ಜನಕ್ಕಾಗಿ ಬದುಕುವುದರಿಂದ ನಾವೂ ಬದುಕುತ್ತೇವೆ, ಅವರೂ ಬದುಕು ತ್ತಾರೆ.

ಕಮಲು, ಇದುವರೆಗೆ ನಿನ್ನ ಕಾಗದಗಳನ್ನು ಮಕ್ಕಳು, ಮರಿ, ಗಂಡ, ಮನೆ ಇವುಗಳಲ್ಲಿ ಸಿಕ್ಕಿಕೊಂಡಿರುವವಳ ಹಾಗೆ ಬರೆಯುತ್ತಿದ್ದೆ. ಇವತ್ತು ತತ್ತ್ವಜ್ಞಳ ಹಾಗೆ ಬರೆದಿದ್ದೀಯೆ. ಕಾಲೇಜಿನಲ್ಲಿ ಓದಿದ್ದು ಈಗ ಲಾದರೂ ಸಾರ್ಥಕವಾಯಿತಲ್ಲ. ಉಳಿದವರ ತತ್ತ್ವಕ್ಕಿಂತ ನಿನ್ನ ತತ್ತ್ವ ದಲ್ಲಿ ಬೆಲೆ ಹೆಚ್ಚು. ತಿಳಿವಳಿಕೆ ಅನುಭವ ಎರಡೂ ಕೂಡಿದೆ. ಓದಿದುದರ ಪರಿಣಾಮವೋ ಏನೋ ಎಲ್ಲದರಲ್ಲೂ ನಾವು ಕಾರಣ ಹುಡುಕುತ್ತೇವೆ. ಎಲ್ಲದಕ್ಕೂ ಸಮಾಧಾನ ಹೇಳಲು ಪ್ರಯತ್ನ ಪಡುತ್ತೇವೆ. ನಂಜಿ ಒಪ್ಪಿ ಕೊಂಡ ಹಾಗೆ ಒಪ್ಪಿಕೊಳ್ಳಲಾಗುವುದಿಲ್ಲ. ಕೊನೆಯಲ್ಲಿ ಮಾತ್ರ ನಂಜಿ ಮಾಡಿದ ಹಾಗೇ ಮಾಡುತ್ತೇವೆ. ಅವಳು ವಿದ್ಯೆಯಿಲ್ಲದ ಜ್ಞಾನಿ. ನಾವು ಮಾತುಬಲ್ಲವರು.

ನಿನ್ನ ಕಾಗದ ಓದಿದ ಮೇಲೆ ಏನು ಅನ್ನಿಸುವುದು ತಿಳಿಸು ಎಂದು ಬರೆದಿದ್ದೀಯೆ. ನೀನು ಕಾಗದ ಏನು ಉದ್ದೇಶದಿಂದ ಬರೆದಿದ್ದೀಯೋ ಅದು ಆಯಿತು ಅಂತ ತಿಳಿದುಕೊ.

ಇಂತು ನಿನ್ನ ಗೆಳತಿ.

೧೩

ಕಮಲು,

ನನ್ನ ಕಾಗದ ನೋಡಿ ನಿನಗೆ ಸಂತೋಷವಾಗಿದೆ. ನಾನು ಮದುವೆ ಮಾಡಿಕೊಳ್ಳುವುದು ಸರಿಯೆಂದು ಒಪ್ಪಿಕೊಂಡಿರುವುದು ನಿನ್ನ ಸಂತೋಷಕ್ಕೆ ಕಾರಣ.

ಅದೆಲ್ಲ ಸರಿಯೆ. ಮದುವೆ ಮಾಡಿಕೊಳ್ಳುವುದಕ್ಕೆ ಒಪ್ಪಿಗೆ. ಆದರೆ ನಮಗೆ ಸರಿಹೋಗುವಂತಹ, ನನ್ನನ್ನು ಮದುವೆ ಮಾಡಿಕೊಳ್ಳುವರು ಸಿಕ್ಕಬೇಕಲ್ಲ? ನಿನ್ನನ್ನು ನಾನು ಹಾಸ್ಯ ಮಾಡುತ್ತಿದ್ದೆ. ಈಗ ನೀನೇ ಪುಣ್ಯವಂತೆ ಅನ್ನಿಸುತ್ತದೆ. ನಂಜಿ ತಿಳಿವಳಿಕೆಯಿಲ್ಲದವಳಾದರೂ ಅವಳ ಅದೃಷ್ಟ ಒಳ್ಳೆಯದು. ಪಾಲಿಗೆ ಬಂದುದು ಪಂಚಾಮೃತ ಅನ್ನುವ ನಂಬಿಕೆ ಅವಳಿಗಿದೆ.

ಅಂತು, ಈ ಯೋಚನೆಗಳೆಲ್ಲ ಹೇಗೆ ಬಗೆಹರಿಯುತ್ತವೊ ಕಾಣೆ. ಅಮ್ಮ ಸಿಡಿಮಿಡಿಯಾಗಿದ್ದಾಳೆ. ಅಪ್ಪ ಸಪ್ಪಗಿದ್ದಾನೆ. ಅವರಿಬ್ಬರ ವಿಚಿತ್ರ ವರ್ತನೆಯೇ, ಅವರ ಮೌನವೇ, ಅವರ ಮಾತುಗಳಿಗಿಂತ ನನ್ನ ಮನಸ್ಸನ್ನು ಬದಲಾಯಿಸಿವೆ.

ಹಿಂದೆ ಅವರು ಮದುವೆ ಮಾತು ಎತ್ತಿದಾಗಲೆಲ್ಲ ನಾನು ಹಟ ಮಾಡಿದುದು ಈಗ ಜ್ಞಾಪಕಕ್ಕೆ ಬಂದು ವ್ಯಥೆಯಾಗುತ್ತದೆ. ನೋಡೋಣ ಏನಾಗುತ್ತದೋ.

ಇಂತು ನಿನ್ನ ಗೆಳತಿ.

೧೪

ಕಮಲು,

ಮದುವೆ ವಿಷಯದಲ್ಲಿ ಒಪ್ಪಿಸಿದ್ದಾಯಿತು. ಇನ್ನು ಗಂಡಿನ ವಿಷಯದಲ್ಲೂ ಒಪ್ಪಿಸುವ ಪ್ರಯತ್ನ ಮಾಡುತ್ತಿರುವ ಹಾಗಿದೆ.

ನೀನು ಹೇಳಿರುವ ಮಾತು ಸೊಗಸಾಗಿದೆ. "ಸರಿಯಾದವರು ಸಿಕ್ಕಿದರೆ ಮದುವೆಯಾಗುವುದು. ಸಿಕ್ಕದಿದ್ದರೆ ಸಿಕ್ಕುವವರೆಗೂ ಮದುವೆಯಾಗದೆ ಹಾಗೆ ಇರುವುದು." ಈಗ ನಾವು ಓದಿದ್ದು ಸಾರ್ಥಕವಾಯಿತು. ಪ್ರಶ್ನೆಗಳನ್ನು ಎಷ್ಟು ಸುಲಭವಾಗಿ ಬಿಡಿಸಬಹುದು! ಯಾವನೋ ಕವಿ, ಹೊಟ್ಟೆಗಿಲ್ಲದಾಗ ಒಂದೆರಡು ಸೊಗಸಾದ ಹಾಸ್ಯಗಳನ್ನು ಹೆಣೆದು, ಅವನ್ನು ಹೇಳಿಕೊಂಡು ಹೊಟ್ಟೆತುಂಬ ನಕ್ಕು ಹಸಿವು ಮರೆಯುತ್ತಿದ್ದನಂತೆ. ಹಾಗಾಯಿತು ನಮ್ಮ ಪಾಡೂ. ನೀನು ಹೇಳಿದುದರಲ್ಲಿ ಸರಿಯಾದ ತರ್ಕವಿದೆ; ಯುಕ್ತಿಯಿದೆ. ಅಷ್ಟೇ ಸಮಾಧಾನ. ಆದರೆ ಒಂದು ನಿಜ. ಸರಿಯಲ್ಲದವನಿಗೆ ನನ್ನನ್ನು ಯಾರೂ ಮದುವೆ ಮಾಡಲಾರರು. ಅಂತಹ ಸಂದರ್ಭದಲ್ಲಿ ನಾನು ಚೆನ್ನಿಯ ಹಾಗೆ ಕೊಳದ ತಳವನ್ನು ಆಶ್ರಯಿಸಬೇಕಾಗಿಲ್ಲ. ದುಃಖವಿದ್ದರೆ ಅದರ ಉದ್ವೇಗ ಕಡಿಮೆ ಮಾಡಿಕೊಳ್ಳಲು, ರಕ್ಷಕರಿಲ್ಲವೆಂದು ಗೋಳಾಡದಿರುವುದಕ್ಕೂ ನಾವು ಓದಿದ ವಿದ್ಯೆ ಸಾಕಾದಷ್ಟು ಸಾಮರ್ಥ್ಯ ಕೊಟ್ಟಿದೆ.

ನೀನು ಹೇಳಿದಂತೆ ಆಗಲಿ. ಮದುವೆ ಮಾತು ಬಂದರೆ ಒಪ್ಪಿಕೊಳ್ಳುತ್ತೇನೆ. ಗಂಡನ್ನು ಒಪ್ಪುವ ವಿಷಯ ಆಮೇಲೆ.

ಇಂತು ನಿನ್ನ ಗೆಳತಿ.

೧೫

ಕಮಲು,

ಗಂಡನ್ನು ಒಪ್ಪುವ ವಿಷಯದಲ್ಲಿ ನಂಜಿ ಸಲಹೆ ತೆಗೆದುಕೊಳ್ಳಬೇಕೆಂದು ಸೂಚಿಸಿದ್ದೀಯೆ. ನಂಜಿಯನ್ನು ಕಂಡರೆ ನಿನಗೆ ನಗುವೇನು? ನನಗೆ ಅವಳಲ್ಲೊಂದು ಬಗೆ ಪ್ರೀತಿಯಿದೆ. ನಿನ್ನ ಬಳಿಯೂ ಕೆಲವು ದಿನಗಳು ಅವಳಿದ್ದರೆ ನಿನಗೂ ಹಾಗನ್ನಿಸುತ್ತದೆ.

ನಂಜಿಗೂ ನನಗೂ ಬಹಳ ಸ್ನೇಹ ಅನ್ನುವುದನ್ನು ಬೇರೆ ಹೇಳಬೇಕಾಗಿಲ್ಲ. ನೆನ್ನೆ ಸಾಯಂಕಾಲದವರೆಗೂ ನಂಜಿ ನನಗೆ ಸಿಕ್ಕಲಿಲ್ಲ. ಅದರ ಹಿಂದಿನ ದಿನವೂ ನಮ್ಮ ಮನೆಗೆ ಬಂದಿರಲಿಲ್ಲ. ಅಮ್ಮನನ್ನು ಕೇಳಿದೆ. "ಎಲ್ಲಿ ಹೋದಳು ಯಾರಿಗೆ ಗೊತ್ತು? ನಮ್ಮದೇ ಹಾಸಿಕೊಂಡು ಹೊದ್ದು

ಕೊಳ್ಳುವಷ್ಟು ಇದೆ. ಅದರ ಮೇಲೆ ಊರೋರನ್ನೆಲ್ಲ ವಿಚಾರಿಸುವುದಕ್ಕೆ ಹೋಗುತ್ತೇನೆ" ಎಂದು ಸಿಟ್ಟಿನಿಂದ ಹೇಳಿದಳು. ಇನ್ನು ಮಾತು ಎಲ್ಲಿಂದ ಎಲ್ಲಿಗೆ ಹೋಗುತ್ತದೊ ಎಂದುಕೊಂಡು ಹೆದರಿ ಅಲ್ಲಿಂದ ಹೊರಟುಬಿಟ್ಟೆ.

ಹಿತ್ತಿಲ ಬಾಗಿಲಿನಿಂದ ಸ್ವಲ್ಪದೂರದಲ್ಲಿರುವ ಆಲದ ಮರದ ಕೆಳಗೆ ಹಾಕಿದ್ದ ಒಂದು ಹಾಸುಕಲ್ಲಿನ ಮೇಲೆ ಕುಳಿತುಕೊಂಡೆ. ಇಲ್ಲೇ ನಾನು ನಂಜಿ ಮಾತಿಗೆ ಸೇರುತ್ತಿದ್ದುದು. ಒಬ್ಬಳೇ ಕುಳಿತು ಯೋಚಿಸುತ್ತಿದ್ದೆ. ಅಳುವಷ್ಟೇನು ದುಃಖವಿರಲಿಲ್ಲ, ಆದರೂ ಮನಸ್ಸಿನ ಮೇಲೆ ಒಂದು ದೊಡ್ಡ ಹೊರೆ ಬಿದ್ದಹಾಗಿತ್ತು. ಹೀಗೆ ಬಹಳ ಹೊತ್ತು ಕೂತಿದ್ದಿರಬೇಕು.

"ಇದೇನ್ರವ್ವಾ ಹಿಂಗೆ ಕೂತಿದ್ದೀರಿ" ಎಂದು ಹಿಂದಿನಿಂದ ಕೇಳಿಬಂತು.

ಹಿಂತಿರುಗಿ ನೋಡಿದೆ. ನಂಜಿ ಬಹಳ ಸಂತೋಷದಲ್ಲಿದ್ದಂತೆ ಕಂಡು ಬಂತು.

"ನಂಜಿ ಎಲ್ಲಿಗೆ ಹೋಗಿದ್ದೆ ?"

"ಜಾತ್ರೆಗೆ ಹೋಗಿದ್ದೆ"

"ನನಗೇಕೆ ಹೇಳಲಿಲ್ಲ"

"ಹೇಳಿದ್ದರೆ ಬರುತ್ತಿದ್ದಿರಾ ?"

"ಹೂಂ"

"ತೆಗಿರವ್ವ, ನಿಜವಾಗೂ ಬರುತ್ತಿದ್ದಿರಾ ?"

"ಅಲ್ಲ ನಂಜಿ, ನನಗೆ ಹೇಳದೆ ಹೋಗಬಹುದೇ ?"

"ಇಲ್ಲಿಂದ ಮನೆಗೆ ಹೋದನಲ್ಲ ಮೊನ್ನೆ. ಗೌಡರು ಬಂದಿದ್ದರು."

"ಗೌಡರು ! ಯಾವೂರ ಗೌಡರು ?"

"ಹಂಗಾದರೆ ನಾನು ಹೇಳೋಕಿಲ್ಲ."

"ಯಾರು ನಿನ್ನ ಗಂಡನೆ ?"

"ಹೂಂ."—

ಸರಿ. 'ರಾಯರು' ಅನ್ನುವುದಕ್ಕೆ 'ಗೌಡರು' ಗ್ರಾಮ್ಯ ಅಂದು ಕೊಂಡೆ.

"ನಡಿ ಜಾತ್ರೆಗೆ ಹೋಗೋಣ ಅಂದರು. ಅವರು ಒಂದು ಮಗ

ಹೆಗಲ ಮೇಲೆ ಕೂಡಿಸಿಕೊಂಡರು. ನಾನು ಸಣ್ಣದನ್ನು ಕಂಕುಳಲ್ಲಿಟ್ಟು ಕೊಂಡೆ. ಹೊರಟುಬಿಟ್ಟೆವು."

"ಅದಕ್ಕೆ ನಮ್ಮನ್ನೆಲ್ಲ ಮರೆತುಬಿಟ್ಟೆ. ಗಂಡನ ಮುಖ ನೋಡಿದರೆ ಪ್ರಪಂಚವೇ ಮರೆತುಹೋಗುತ್ತೆ ಅಲ್ಲವೆ ನಂಜಿ ?''

"ಬಿಡ್ರವ್ವ. ಹಾಸ್ಯ ಮಾಡಬೇಡಿ'' ಅಂತ ಅವಳು ತಲೆ ಬಗ್ಗಿಸಿ ಕೊಂಡಳು.

"ಜಾತ್ರೆಗೆ ಹೋಗುತ್ತೇನೆ ಅಂದಿದ್ದರೆ ನಾನು ದುಡ್ಡು ಕೊಡುತ್ತಾ ಇದ್ದೆ. ಖರ್ಚಿಗಾಗುತ್ತಿತ್ತೊ ಇಲ್ಲವೊ ?"

"ನಮ್ಮ ಹತ್ತಿರದಲ್ಲೇ ಧುಡ್ಡಿತ್ತು ಸಾಕಾಯ್ತು.

ಅವಳ ಮುಖ ನೋಡಿದರೆ, ಅವಳಿಗೆ ದುಡ್ಡಿಲ್ಲದೆ ಇದ್ದರೂ ಜಾತ್ರೆ ಚೆನ್ನಾಗಿರುತ್ತಿತ್ತು ಅಂತ ಕಾಣಿಸಿತು.

"ತಿರುಗಿ ಯಾವತ್ತು ಬರುತ್ತಾರೆ ನಿನ್ನ ಗೌಡರು, ನಂಜಿ ?"

"ಗೊತ್ತಿಲ್ಲಕಣ್ರವ್ವ''—ನಂಜಿ ಮುಖ ಸಪ್ಪಗಾಯಿತು. ಪಾಪ, ಅವಳ ಗಂಡ ಅವಳ ಹತ್ತಿರ ಇದ್ದುಬಿಟ್ಟರೆ ಸಾಕು, ಇನ್ನೇನೂ ಅವಳು ಕೇಳುವುದಿಲ್ಲ ಅನ್ನುವಹಾಗೆ ತೋರಿತು.

ನಾನು 'ಅಯ್ಯೋ ಹೆಣ್ಣೆ' ಎಂದುಕೊಂಡೆ.

ಇಂತು ನಿನ್ನ ಗೆಳತಿ.

## ೧೬

ಕಮಲು,

ನಿನ್ನಿಂದ ಇಂತಹ ಸೊಗಸಾದ ಕಾಗದ ಈ ಸಮಯದಲ್ಲಿ ನಾನು ನಿರೀಕ್ಷಿಸಿರಲಿಲ್ಲ. ಆದರೆ ಇಂತಹ ಸುಖದಲ್ಲಿ ನನ್ನನ್ನು ಮರೆಯದೆ ಕಾಗದ ಬರೆಯುತ್ತಿರುವೆಯಲ್ಲ ಅದೂ ಒಂದು ಸಂತೋಷ. ನನಗೆ ಅನುಭವದಿಂದ ತಿಳಿಯದು; ಆದರೂ ಊಹಿಸಬಲ್ಲೆ: ಎಷ್ಟುಕಷ್ಟ ಬಂದರೂ ಮರೆಯು ವಂತಹ ಸುಖಸನ್ನಿವೇಶಗಳು ಎಲ್ಲ ಸಂಸಾರಗಳಲ್ಲೂ ಇದ್ದೇಇರುತ್ತವೆ.

ಈ ಕಾಗದ ಓದಿದಮೇಲೆ ಕಾಲೇಜಿನಲ್ಲಿ ಓದಿದ ಹುಡುಗಿಯರೂ ಒಳ್ಳೆಯ ಗರತಿಯರಾಗಬಹುದು ಅನ್ನಿಸುತ್ತದೆ. ಆದರಲ್ಲೂ ಮೊದಲಿನಿಂ ದಲೂ ನಿನ್ನ ಸ್ವಭಾವವೇ ಒಂದು ಬಗೆಯದು. ನೀನು ಓದಿದುದೂ ನಿನ್ನ

ಗಂಡನನ್ನು ಒಲಿಸುವುದಕ್ಕೆ. ನಿನ್ನ ಗಂಡನಂತಹವರು ನಿಜವಾಗಿಯೂ ಅಪರೂಪ. ಓದಿದ ಹುಡುಗಿಯರನ್ನು ಮದುವೆಯಾಗಲು ಎಲ್ಲರೂ ಹೆದರುವಾಗ ನಿನ್ನನ್ನು ಓದಬೇಕೆಂದು ಅವನು ಪ್ರೋತ್ಸಾಹಿಸಿದ.

ನಿಮ್ಮ ಕಾರ್ಯಕ್ರಮ ಚೆನ್ನಾಗಿದೆ. ಒಂದೊಂದು ದಿನ ಮಕ್ಕಳೂ ನೀವೂ ಒಟ್ಟಿಗೆ ಸಿನಿಮಾಕ್ಕೆ ಹೋಗುತ್ತೀರಿ. ಸಾಯಂಕಾಲ ಹಾಗೆ ಸ್ವಲ್ಪ ಹೊತ್ತು ತಿರುಗಾಡಿಕೊಂಡು ಬರುತ್ತೀರಿ. ಒಂದೊಂದು ದಿನ ಕಾಫಿ ತಿಂಡಿ ಮಾಡಿಕೊಂಡು ಊರಿನಿಂದ ದೂರವೆಲ್ಲಾದರೂ ಹೋಗಿ ಮರದ ಕೆಳಗೊ ಹುಲ್ಲಿನ ಮೇಲೋ ಕುಳಿತು ಫಲಾಹಾರ. ಬೆಳದಿಂಗಳಿನಲ್ಲಿ ಊಟವಾದ ಮೇಲೆ ಸ್ವಲ್ಪಹೊತ್ತು ಸುತ್ತಾಡುವುದು. ಒಂದೊಂದು ದಿನ ಬೆಳದಿಂಗಳೂಟ. ಇವೆಲ್ಲ ಚೆನ್ನಾಗಿವೆ. ಹೌದು, ಹೌದು, ಮಾತುಗಳಲ್ಲಿ ಹೇಳುವುದಕ್ಕಾಗದ ಎಷ್ಟೋ ಸಣ್ಣ ಸಣ್ಣ ಮಿತಿಮಿಾರಿದ ಆನಂದದ ರಸ ನಿಮಿಷಗಳು ದಿನದಿನವೂ ಎಷ್ಟೊ ಬರಬಹುದು.

ನಿನ್ನ ಕಾಗದ ಓದಿದರೆ, ಜಾತ್ರೆಗೆ ಹೋಗಿಬಂದ ನಂಜಿ ಮುಖ ಜ್ಞಾಪಿಸಿಕೊಂಡರೆ, ಮದುವೆ ಮಾಡಿಕೊಂಡವರೆಲ್ಲ ಹುಚ್ಚರಲ್ಲ ಅಂತ ಅನ್ನಿಸುತ್ತದೆ.

ಇಂತು ನಿನ್ನ ಗೆಳತಿ.

೧೭

ಕಮಲು,

ಒಂದು ಹೊಸ ವಿಷಯ ನಿನಗೆ ಬರೆಯುತ್ತೇನೆ. ಆದರೆ ಈಗಲೇ ಯಾರಿಗೂ ಹೇಳಬೇಡ. ನಿನ್ನ ಗಂಡನಿಗೂ ಹೇಳಕೂಡದು. ಎಲ್ಲ ಸರಿ ಹೋದರೆ—ಮುಂದಿನ ವಾರದೊಳಗೆ ಯಾವುದೂ ಗೊತ್ತಾಗುವುದು — ಆಮೇಲೆ ಹೇಳುವೆಯಂತೆ.

ಇವತ್ತು ತೊಟ್ಟಿಯಲ್ಲಿ ನಾನು ಯಾವುದೊ ಪುಸ್ತಕವನ್ನು—ಹೊಸದಲ್ಲ ಹಳೆಯದನ್ನೇ—ಓದುತ್ತಾ ಕುಳಿತಿದ್ದೆ. ಅಮ್ಮ ಹೂಬತ್ತಿ ಮಾಡುತ್ತ ಗೋಡೆಯೊರಗಿಕೊಂಡು ಕುಳಿತಿದ್ದಳು. ಆಗ ನನ್ನ ತಂದೆ "ಏನಮ್ಮ, ನಿನ್ನನ್ನು ಒಂದು ಮಾತು ಕೇಳಬೇಕೆಂದಿದ್ದೇನೆ" ಎಂದರು.

ನಾನು ಓದುವುದನ್ನು ನಿಲ್ಲಿಸಿ ಅವರ ಕಡೆ ನೋಡಿದೆ. "ಬೆಂಗಳೂರಿಂದ ಮೂರ್ತಿ (ಮೂರ್ತಿ ನನ್ನ ಸೋದರಮಾವ) ವರನೊಬ್ಬನಿದ್ದಾರೆಂದು

ಕಾಗದ ಬರೆದಿದ್ದ. ನಿನ್ನ ಜಾತಕ ಕಳುಹಿಸಿದ್ದೆ. ಸರಿ ಹೋಗುತ್ತದಂತೆ. ಅವನು ಎಲ್ಲವನ್ನೂ ಹೇಳಿದ್ದಾನಂತೆ. ನನ್ನನ್ನು ಬಾಯೆಂದು ಬರೆದಿದ್ದಾನೆ. ನೀನು ಏನು ಹೇಳುವೆ ? "

ನಾನು ಸುಮ್ಮನಿದ್ದೆ.

" ನೀನೇನು ತಿಳಿಯದ ಹುಡುಗಿಯಲ್ಲ. ನೀನು ಬೇಡವೆಂದರೆ, ನೀನು ಒಪ್ಪುವುದಿಲ್ಲವೆಂದು ಕಾಗದ ಬರೆದುಬಿಡುತ್ತೇನೆ. ಒಪ್ಪಿದರೆ, ಹೋಗಿ ಅವರನ್ನು ಇಲ್ಲಿಗೆ ಕರೆದುಕೊಂಡು ಬರುತ್ತೇನೆ. ಆಮೇಲೆ ದೇವರ ದಯವಿದ್ದ ಹಾಗಾಗಲಿ.''

ನಾನು ಮೆಲ್ಲಗೆ ' ಹೂಂ ' ಎಂದೆ.

ನನ್ನ ತಂದೆಮುಖ ಗೆಲುವಾಯಿತು. ಹೂಬತ್ತಿ ಮಾಡುವುದನ್ನು ನಿಲ್ಲಿಸಿ ನಮ್ಮ ಮಾತು ಕೇಳುತ್ತಿದ್ದ ನನ್ನ ತಾಯಿ ಒಂದು ನಿಟ್ಟುಸಿರುಬಿಟ್ಟು ಮತ್ತೆ ಹೂಬತ್ತಿ ಮಾಡಲು ಪ್ರಾರಂಭಿಸಿದಳು.

ನಂಜಿ ಆಗ ಒಳಕ್ಕೆ ಬಂದಳು. ನನ್ನ ತಾಯಿ, " ನಂಜಿ, ಗಂಡನ್ನು ಕರೆದುಕೊಂಡು ಬರಲು ಬೆಂಗಳೂರಿಗೆ ಹೋಗುತ್ತಾರೆ '' ಎಂದಳು.

ನಂಜಿ ನನ್ನಕಡೆ ನೋಡಿದಳು. ನಾನು ಪುಸ್ತಕ ತೆಗೆದು ನೋಡುತ್ತಿದ್ದೆ. ನನಗೆ ಪುಸ್ತಕವನ್ನು ಮುಂದಕ್ಕೆ ಓದಲೂ ಆಗಲಿಲ್ಲ. ಆದರೆ ಕೆಳಗೂ ಇಡಲಿಲ್ಲ.

ನಡೆದ ವಿಷಯ ಹೇಳಿದ್ದೇನೆ. ನೀನೇನು ಹೇಳುವೆ? ಗುಟ್ಟಾಗಿರಲಿ.

ಇಂತು ನಿನ್ನ ಗೆಳತಿ.

## ೧೮

ಕಮಲು,

ನೀನು ಹೇಳಿದುದನ್ನು ಜ್ಞಾಪಕದಲ್ಲಿಟ್ಟುಕೊಂಡಿರುತ್ತೇನೆ. ನಾನು ಎಚ್ಚರಿಕೆಯಿಂದಿರಬೇಕೆಂದು ಎಚ್ಚರಿಸಿದ್ದೀಯೆ. ಪರೀಕ್ಷೆಮಾಡಿ ನೋಡಿ ಒಪ್ಪಿಕೊಳ್ಳಬೇಕು ಅಲ್ಲವೆ ? ನೀನು ನಿನ್ನ ಗಂಡನನ್ನು ಒಪ್ಪಿಕೊಂಡಾಗ ಏನೇನು ಪರೀಕ್ಷೆ ನಡೆಸಿದ್ದೆ ?

ಇರಲಿ, ನೀನು ಹೇಳಿದಂತೆಯೇ ಮಾಡುತ್ತೇನೆ. ನಡೆಯುವುದ

ನ್ನೆಲ್ಲಾ ಬರೆಯುತ್ತೇನೆ. ನಿನ್ನ ಅಭಿಪ್ರಾಯ ಕೊಡು. ಇನ್ನೇನು, ನಾಳೆ ಯಿಲ್ಲ, ನಾಡಿದ್ದು. ಇದೇನು ? ವರಪರೀಕ್ಷೆಯೋ ? ವಧುಪರೀಕ್ಷೆಯೋ ?

ಇಂತು ನಿನ್ನ ಗೆಳತಿ.

೧೯

ಕಮಲು,

ನೀನು ನನ್ನ ಕಾಗದವನ್ನು ಬಹಳ ಕುತೂಹಲದಿಂದ ನಿರೀಕ್ಷಿಸುತ್ತಿರ ಬಹುದು. ನಿನಗೆ ತಿಳಿಸಬೇಕಾದದ್ದನ್ನು ತಿಳಿಸಿಬಿಡಬೇಕೆಂದು ನನ್ನ ಮನಸ್ಸೂ ಆತುರಪಡುತ್ತಿರುವುದು. ಆದ್ದರಿಂದ ಈ ಕಾಗದದಲ್ಲಿ ಯಾವ ವಿಷಯ ಬರೆಯುತ್ತೇನೆಂಬುದು ನಿನಗೆ ಗೊತ್ತೇ ಇದೆ.

ಮೊನ್ನೆ ಮಧ್ಯಾಹ್ನ ನನ್ನ ತಂದೆ, ಮಾವ (ಮೂರ್ತಿ), 'ಅವರು' ಬಂದರು. ಅವರನ್ನು ನಿರೀಕ್ಷಿಸುತ್ತ ಅಮ್ಮ, ನಂಜಿ, ನಾನು ಮೂವರೂ ಬೀದಿಯ ಬಾಗಿಲ ಬಳಿ ಕುಳಿತಿದ್ದೆವು. ಅವರು ದೂರದಲ್ಲಿ ಬರುವುದನ್ನು ಕಂಡು ಒಳಕ್ಕೆ ಎದ್ದುಹೋದೆವು.

ಸರಿ, ಊಟ ಉಪಚಾರಗಳೆಲ್ಲ ಮುಗಿದವು. ನಮ್ಮ ಮನೆಯಲ್ಲಿ ಬೇರೆ ಯಾರೂ ಇಲ್ಲ. ಆದ್ದರಿಂದ ಮಣೆಹಾಕಿ, ಎಲೆಹಾಕಿ, ನೀರಿಡುವುದು ; ಎಲೆ ಎತ್ತಿ ಗೋಮ ಹಚ್ಚುವುದು ಎಲ್ಲ ನನ್ನ ಪಾಲಿಗೇ ಬಿತ್ತು. ತೊಟ್ಟಿ ಯಲ್ಲಿ ಗಂಡಸರೆಲ್ಲ ಕುಳಿತಿದ್ದಾಗ ನಾನು ಓಡಾಡಲೇಬೇಕಾಯಿತು. ಅವ ರೆಲ್ಲರೂ ಊಟ ಮಾಡುತ್ತಿದ್ದಾಗ ನಾನು ಹೊರಗೆ ಬಂದೆ. ನಂಜಿ ಎಲ್ಲಿ ದ್ದಳೋ ನಗುತ್ತಾ ಬಂದಳು.

"ನೋಡಿದ್ರೇನವ್ವ ಚಂದಾಗವ್ರಾ ?" ಎಂದು ಕೇಳಿದಳು.

"ನಿನಗಿನ್ನೇನು ಕೆಲಸವಿಲ್ಲ. ಸುಮ್ಮನೆ ಮನೆಗೆ ಹೋಗು. ನಿನ್ನ-'ಗೌಡರು' ಜಾತ್ರೆಗೆ ಕರೆದುಕೊಂಡು ಹೋಗಲು ಬಂದಿದ್ದಾನಂತೆ."

"ಅವೆಲ್ಲ ಕಂಡಿದ್ದೀನಿ ಬಿಡಿ. ಈಗ ನಾ ಕೇಳಿದ್ದಕ್ಕೆ ಏನು ಹೇಳ್ತೀರಿ ?"

ಅಷ್ಟರಲ್ಲೆ ಅಮ್ಮ ಏತಕ್ಕೋ ಕೂಗಿದಳು ; ಒಳಕ್ಕೆ ಹೋದೆ.

ಮಧ್ಯಾಹ್ನ ಕಾಫಿಯಾದ ಮೇಲೆ ಮೂರ್ತಿ ಮಾತು ಮೊದಲು ಮಾಡಿದ. "ಹೆಣ್ಣು ನೋಡಿದಿರಾ ? ಉಳಿದದ್ದೆಲ್ಲಾ ಮೊದಲೇ ಹೇಳಿ

ದ್ದೇನೆ. ಒಪ್ಪಿಗೆತಾನೆ'' ಎಂದು ಕೇಳಿದ. ನನ್ನ ತಂದೆ 'ಅವರ' ಬಾಯಿಂದ ಏನು ಉತ್ತರ ಬರುತ್ತದೊ ಎಂದು ಆತುರವಾಗಿ ಮೌನದಿಂದ ಕುಳಿತಿದ್ದರು. ನನ್ನ ತಾಯಿ ಬಹಳ ಕಾತರಳಾಗಿದ್ದಳು.

"ಸರಿ, ಹುಡುಗಿಯೊಡನೆ ಒಂದೆರಡು ಮಾತಾಡಲು ಅವಕಾಶ ವುಂಟೋ ?'' ಎಂದು ಕೇಳಿದರು ಅವರು.

ಇದನ್ನು ನನ್ನ ತಾಯಾಗಲಿ ತಂದೆಯಾಗಲಿ ನಿರೀಕ್ಷಿಸಿರಲಿಲ್ಲ. ಅವರಿಗೆ ಏನು ಹೇಳಬೇಕೆಂಬುದು ತೋಚಲಿಲ್ಲ. ಮೂರ್ತಿ ಅಷ್ಟರಲ್ಲೆ, "ಆಗಬಹುದು. ಅದಕ್ಕೇನಂತೆ'' ಅಂದ.

ಅವರು ರೂಮಿನೊಳಕ್ಕೆ ಹೋದರು. ಮೂರ್ತಿ ನನ್ನ ಬಳಿ ಬಂದು "ಏನಮ್ಮ ನಿನ್ನೊಡನೆ ಒಂದೆರಡು ಮಾತನಾಡಬೇಕಂತೆ, ರೂಮಿನಲ್ಲಿದ್ದಾರೆ. ಅದರಲ್ಲೇನು ?" ಎಂದರು.

ಈಗ ಯೋಚನೆಮಾಡಿದರೆ ಇದೇನು ಮಹಾ ದೊಡ್ಡ ವಿಷಯವೆನ್ನಿಸುತ್ತದೆ. ಯೂನಿಯನ್ನಿನ ಚುನಾವಣೆಯಲ್ಲಿ ಓಟು ಕೇಳಲು ಬಂದಿದ್ದ ಹುಡುಗನನ್ನು ಹತ್ತು ನಿಮಿಷ ಕಿರುಗುಟ್ಟಿಸಿ 'ಆಗಲಿ ನೋಡೋಣ' ಎಂದು ಹೇಳಿಕಳುಹಿಸಿದ್ದು ನಿನಗೆ ಜ್ಞಾಪಕವಿರಬಹುದು. ಆದರೆ ಈಗ ಏಕೋ ಧೈರ್ಯ ಬರಲಿಲ್ಲ. ಕೊನೆಗೆ ಹೇಗೋ ಮನಸ್ಸು ಗಟ್ಟಿಮಾಡಿಕೊಂಡೆ. ಅವರು ಬಾಗಿಲೆದುರಿಗೆ ಹಾಸಿಗೆಯ ಮೇಲೆ ಕುಳಿತುಕೊಂಡಿದ್ದರು. ಒಳಗೆ ಹೋಗಿ ಒಂದು ಕಡೆ ಗೋಡೆ ಒರಗಿಕೊಂಡು ನಿಂತುಕೊಂಡೆ.

"ಕುಳಿತುಕೊಳ್ಳಿ" ಎಂದು ಹೇಳಿದರು.

ನಾನು ಕುಳಿತುಕೊಳ್ಳಲಿಲ್ಲ. ಹಾಗೆ ನಿಂತಿದ್ದೆ. ಹಾಗೆ ತಲೆ ಬಗ್ಗಿಸಿಕೊಂಡೇ ಅವರ ಕಡೆ ನೋಡಿದೆ. ಅವರೂ ನನ್ನನ್ನೇ ನೋಡುತ್ತಿದ್ದರು. ಮುಂಚೆ ಇಷ್ಟು ಚೆನ್ನಾಗಿ ನೋಡಿರಲಿಲ್ಲ. ನನಗೆ ಒಪ್ಪಿತು. ಅವರಿಗೂ ಒಪ್ಪಿಗೆಯಾಗಿರಬೇಕು.

"ನನ್ನನ್ನು ಮದುವೆಯಾಗಲು ಸಮ್ಮತಿಸುವಿರಾ ?

ನಾನು ಸುಮ್ಮನಿದ್ದೆ.

"ಗಂಡು ಹೆಣ್ಣನ್ನೊಪ್ಪುವಂತೆ, ಹೆಣ್ಣು ಗಂಡನ್ನೊಪ್ಪಬೇಕೆಂಬುದು ನನ್ನ ಇಷ್ಟ. ಅದಕ್ಕೋಸ್ಕರ ಕೇಳುತ್ತಿದ್ದೇನೆ !"

ಮೊದಲು ನಿಮ್ಮ ಅಭಿಪ್ರಾಯ ತಿಳಿಸಿಯೆಂದು ಕೇಳಬೇಕೆನ್ನಿಸಿತು.

ಅಷ್ಟರಲ್ಲೆ, 'ನಾನು ನಿಮ್ಮನ್ನು ಒಪ್ಪಿದ್ದೇನೆ. ಎಲ್ಲ ವಿಷಯಗಳನ್ನು ನಿಮ್ಮ ಮಾವ ಹೇಳಿದ್ದರು. ನಿಮ್ಮನ್ನು ನೋಡುವುದೊಂದು ಉಳಿದಿತ್ತು. ಅದೂ ಆಯಿತು, ಅಂದರು.

ನಾನು ಹಾಗೇ, 'ಮಾವನು ಅಪ್ಪನಿಗೆ ಬರೆದ ಕಾಗದದಿಂದ ನಿಮ್ಮ ವಿಷಯವೆಲ್ಲ ಗೊತ್ತಾಗಿತ್ತು; ನೋಡುವುದು ಮಾತ್ರ ಉಳಿದಿತ್ತು. ಅದೂ ಆಯಿತು' ಅಂದುಕೊಂಡೆ.

"ನೀವು ಹೇಳಿದ್ದೆಲ್ಲಾ ತಿಳಿಯಿತು. ಒಪ್ಪಿಕೊಂಡಿದ್ದೇನೆ" ಎಂದೆ. "ಬಿಸಿನೆಸ್ ಮೀಟಿಂಗ್" ಅಲ್ಲಿಗೆ ಮುಗಿಯಿತು. ಕೊನೆಗೆ ಇಬ್ಬರಿಗೂ ನಗು ಬಂತು, ನಕ್ಕುಬಿಟ್ಟೆವು.

ಮಾರನೆ ದಿನ ನನ್ನ ಮಾವ, 'ಅವರು' ಬೆಂಗಳೂರಿಗೆ ಹಿಂತಿರುಗಿದರು.

ಮಧ್ಯಾಹ್ನ ಮನೆಯ ಹಿಂದಿನ ಆಲದಮರದ ನೆರಳಿನಲ್ಲಿ ನಂಜೀ ನಾನು ಸೇರಿದೆವು.

"ನಿಮ್ಮ ರಾಯರು ರೂಮಿನಲ್ಲಿ ಅದೇನು ಗುಟ್ಟು ಹೇಳಿದರವ್ವ?" ಎಂದು ಕೇಳಿದಳು.

"ರೂಮು ಬಾಗಿಲು ತೆಗೆದು, ಹೊರಗೆ ದೊಡ್ಡವರೆಲ್ಲ ಕುಳಿತಿರುವಾಗ ಏನಾದರೂ ಗುಟ್ಟು ಮಾತಾಡುತ್ತಾರೇನೆ ಹುಚ್ಚಿ?"

"ಹಾಗಾದರೆ ಒಬ್ಬರ ಮುಖ ಒಬ್ಬರು ನೋಡುತ್ತಾ ಕೂತಿದ್ದಿರಾ? ಬಿಡಿ ಸರಿಯಾಯ್ತು ಬಿಡಿ" ಎಂದು ನಕ್ಕಳು.

"ಅಲ್ಲ ನಂಜಿ ನಿನ್ನ ಗಂಡ, ನಿನಗೆ ಮದುವೆಗೆ ಮುಂಚೆ ಗೊತ್ತಿದ್ದನೆ?"

"ಹೇಳಬೇಕಾ? ನಾನು ಒಂದು ಮಾತು ಕೇಳುತ್ತೇನೆ. ಅದಕ್ಕೆ ಉತ್ತರ ಹೇಳಿದರೆ ಹೇಳುತ್ತೇನೆ."

"ಏನು ಕೇಳು."

"ಇವ್ರ ಕಂಡು ಮದ್ವೆ ಆಗೋಣಾನ್ನಿಸ್ತಾ? ಇಲ್ಲ ಮುಂಚೇಲೆ ಮದ್ವೆ ಮಾಡ್ಕೊಬೇಕೂಂತ ಮನಸ್ಸುಮಾಡಿದ್ದರಾ?"

" ನಿನಗೆ ಹೇಗೆ ಕಾಣುತ್ತೆ ಹೇಳು."

" ಇವ್ರ ನೋಡಿದ ಮ್ಯಾಗೆ ನಿಮಗೆ ಮನಸ್ಸು ಹಂಗಂಗೆ ಅನ್ನಿಸಿರ ಬೇಕು ಅಂತ ಅನ್ನಿಸ್ತದೆ ನನಗೆ."

" ಸರಿ ನೀನು ತಿಳಿದುಕೊಂಡಿರುವುದು. ಇನ್ನು ನಾನು ಕೇಳಿದ್ದಕ್ಕೆ ಹೇಳು."

" ನಮ್ಮೂರಿಗೆ ನಮ್ಮ 'ಗೌಡರ' ಅಕ್ಕನ್ನ ಕೊಟ್ಟದೆ. ಅವರು ಆಗಾಗ್ಗೆ ಬರ್ತಿದ್ರು; ನೋಡಿದ್ದೆ. ಮದ್ವೆ ಮಾತು ಬಂದವ್ಯಾಗೆ ಒಂದು ದಿನ ನಾನು ಬಾವಿಗೆ ನೀರು ಮೊಗೆಯಾಕೆ ಹೋಗಿದ್ದೆ. ಬಾವಿತಾವು ಯಾರೂ ಇರಲಿಲ್ಲ. ನೀರು ಹೊತ್ತುಕೊಂಡು ಹಿಂತಿರುಗಿ ಬರುತ್ತಾ ಇದ್ದೆ. ಗೌಡರು ಎದುರಿಗೆ ಬಂದರು. ದಾರಿ ಓಣಿ. ಎರಡುಪಕ್ಕದಾಗು ಬೇಲಿ ಇತ್ತು. ಹತ್ತಿರ ಬಂದು ನಿಂತರು. ನಾನೂ ನಿಂತುಕೊಂಡೆ. ಎದೆ ಹೊಡ್ಕೊಂತಿತ್ತು.

" ನಂಜಿ ನನ್ನ ಮದ್ವೆ ಆದಿಯಾ?' ಎಂದು ಕೇಳಿದರು. ನಾನು ಸುಮ್ಕೆ ಇದ್ದೆ. ನೋಡು ಒಲ್ಲೆ ಅಂದರೆ ನಾನು ಹಿಂಸೆ ಮಾಡಾಕಿಲ್ಲ. ಒಪ್ಕೊಂಡರೆ ನನ್ನಂತ ಪುಣ್ಯವಂತ ಇಲ್ಲಾಂದುಕೊಂತೀನಿ' ಅಂದರು. ನನಗೆ ಅವರ ಮುಖ ನೋಡಿ ಸುಮ್ಕಿರೋಕಾಗಲಿಲ್ಲ. 'ಆಯ್ತಾನಿ' ಅಂದೆ. 'ಬುಡು ಗೆದ್ದೆ' ಅಂದುಕೊಂಡು ಅವರು ಹೋದರು. ಸದ್ಯಕ್ಕೆ ಯಾರೂ ಕಾಣಲಿಲ್ಲವಲ್ಲ ಅಂದುಕೊಂಡು ನಾನೂ ಮನೆಗೆ ಹೋದೆ."

ಇಷ್ಟು ಹೇಳಿ, 'ಏನ್ರವ್ವಾ ಮದ್ವೇಲಿ ನನ್ನ ಮರ್ತಿರಾ?' ಅನ್ನುತ್ತಾ ಕೆಲಸವಿದೆ ಬರುತ್ತೇನೆಂದು ಹೊರಟುಹೋದಳು.

ನಡೆದದ್ದನ್ನೆಲ್ಲಾ ಬರೆದಿದ್ದೇನೆ. ಕಾಗದ ಉದ್ದವಾಯಿತು.

ಇಂತು ನಿನ್ನ ಗೆಳತಿ.

## ೨೦

ಕಮಲು,

ನಾನು ನಿನ್ನನ್ನು ಹಾಸ್ಯಮಾಡುತ್ತಿದ್ದುದಕ್ಕೆ ಈಗ ಮುಯ್ಯಿ ತೀರಿಸಿಕೊಳ್ಳುವಂತೆ ಕಾಣುತ್ತದೆ. ನನಗೆ ಹಳ್ಳಿಯೇ ಸರಿಯಾದ ಸ್ಥಳವೆಂದು ನಿನ್ನ ಅಭಿಪ್ರಾಯ. ಏಕೆ ಹೀಗೆ ಹೇಳುವೆಯೋ ನನಗೆ ಅರ್ಥವಾಗುವುದಿಲ್ಲ.

ಏನು, ಆಗಲೆ ‘ ಅವರು ’ ‘ ಅವರು ’ ಅಂತ ಆರಂಭಿಸಿಬಿಟ್ಟಿದೀಯೆ ಎಂದು ಕೇಳಿದ್ದೀಯೆ. ಇದೂ ನೀನು ಹೇಳಿಕೊಟ್ಟದ್ದೇ. “ ನಿನ್ನ ಯಜಮಾನರು—ಯಜಮಾನರೆನ್ನಬಹುದೆಂದು ಕಾಣುತ್ತದೆ—ನಿನ್ನನ್ನು ಬಹುವಚನದಲ್ಲಿ ಮಾತನಾಡಿಸುತ್ತಾರೆ. ಬಹಳ ಒಳ್ಳೆಯ ಸೂಚನೆ.”

ಹೀಗೆ ಉದ್ದಕ್ಕೂ ಬರೆದಿದ್ದೀಯೆ. ಹೋಗಲಿ ಕೊನೆಗಾದರೂ ನಿನ್ನ ಅಭಿಪ್ರಾಯ ಕೊಟ್ಟೆಯಲ್ಲ. ಹೌದು, ನಾನು ಹಾಗಿದ್ದಾರೆ, ಹೀಗಿದ್ದಾರೆಯೆಂದು ಬಣ್ಣಿಸಿರಲಿಲ್ಲ. ಅದರಿಂದ ನಿನಗೇನು ನಿರಾಶೆಯಾಗಲಿಲ್ಲ. ಯಾಕೆಂದರೆ ನಾನು ಒಪ್ಪಿದೆನೆಂದು ಬರೆದ ಮೇಲೆ ಉಳಿದುದನ್ನೆಲ್ಲ ಹೇಳಿದ ಹಾಗೆ ಆಯಿತು. ಹೇಳದಿದ್ದರೂ ಚಿಂತೆಯಿಲ್ಲ. ಹೌದು ನೀನು ಹೇಳಿದುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಪ್ಪಿದುದೇ ಚೆನ್ನ. ಒಪ್ಪದಿದ್ದುದೆಲ್ಲ ಹೇಗಿದ್ದರೂ ಚೆನ್ನಲ್ಲ.

ನಾನು ಕರೆಯುವುದಕ್ಕೆ ಮುಂಚೆ ನೀನೇ ಅಕ್ಷತೆ ಕೊಟ್ಟುಕೊಂಡು ಮದುವೆಗೆ ಬಂದುಬಿಡುತ್ತೇನೆಂದು ಬರೆದೆಯಲ್ಲ, ಅದೇ ನಿಜವಾದ ಸ್ನೇಹದ ಗುರುತು. ಅದಕ್ಕೆ ನಾನು ಕೃತಜ್ಞಳಾಗಿದೇನೆ.

ಇಂತು ನಿನ್ನ ಗೆಳತಿ.

೨೧

ಕಮಲು,

ನಾನು ಕಳುಹಿಸಿದ ಲಗ್ನಪತ್ರಿಕೆ ತಲಪಿರಬಹುದು. ನೀನು ಉಳಿದವರಂತೆ ಅಲ್ಲ. ಆದ್ದರಿಂದ ಮುಂಚೆ ಬರುವೆಯೆಂದು ತಿಳಿದುಕೊಂಡಿದ್ದೇನೆ. ಅಮ್ಮ, ಮತ್ತೆ ಮತ್ತೆ ತಾನು ಹೇಳಿದೆನೆಂದು ನಿನಗೆ ಬರೆಯೆಂದು ಹೇಳಿದ್ದಾಳೆ. ತಪ್ಪದೆ ಬರಬೇಕು. ಮುಂದಾಗಿಯೇ ಬರಬೇಕು.

ಇಂತು ನಿನ್ನ ಗೆಳತಿ.

೨೨

ಕಮಲು,

ಹೌದು, ನಿನ್ನ ಮೇಲೆ ಬಹಳ ಕೋಪ ಬಂದಿತು. ಇನ್ನುಮೇಲೆ ನಿನಗೆ ಕಾಗದ ಬರೆಯಲೇ ಬಾರದೆಂದುಕೊಂಡಿದ್ದೆ. ನೀನು ಮದುವೆಗೂ ಬರಲಿಲ್ಲ. ಕಾಗದವನ್ನೂ ಬರೆಯಲಿಲ್ಲ. ಸಿಟ್ಟು ಬರುವುದು ಸರಿಯಲ್ಲವೆ ?

ಆದರೆ ನಿನ್ನ ಕಾಗದ ನೋಡುತ್ತಲೂ ಮೊದಲಿನಂತೆ ಆದೆ. ನೀನು ಯೋಚಿಸಿದುದು ಸರಿಯೆಂದು ಕಾಣುತ್ತದೆ. "ಮದುವೆಯ ಸಮಯದಲ್ಲಿ ಮಗುವಿಗೆ ಕಾಯಿಲೆಯೆಂದು ಬರೆಯುವುದು ಸರಿಯಲ್ಲವೆಂದು ಸುಮ್ಮನಿದ್ದೆ." ದೇವರ ದಯದಿಂದ ಮಗು ಬದುಕಿಕೊಂಡಿತಲ್ಲ ಅಷ್ಟೇ ಸಾಕು.

ನೀನು ನನಗೆ ನನ್ನ ಮದುವೆ ವಿಷಯವಾಗಿ ಕಾಗದ ಬರೆಯುವ ಕಷ್ಟ ಕೊಡುವುದಿಲ್ಲವೆಂದುಕೊಂಡಿದ್ದೆ. ಆದರೇನು ಮಾಡುವುದು? ನಾನು ನಿನ್ನನ್ನು ನಿಂದಿಸುವಂತೆಯೂ ಇಲ್ಲ; ನೀನು ವ್ಯಥೆಪಟ್ಟುಕೊಳ್ಳಲೂ ಕೂಡದು.

ನಾವು ಓದುತ್ತಿದ್ದಾಗ ಅನೇಕ ಪ್ರಬಂಧಗಳನ್ನು ಬರೆಯಬೇಕಾಗಿತ್ತು. ಅದರಂತಹ ಕಷ್ಟವಾದ ಬೇಸರಗೊಳಿಸುವ ಮತ್ತೊಂದು ಪಾಠವಿಲ್ಲವೆಂದು ಕೊಂಡಿದ್ದೆ; ಆದರೆ ಈ ಪ್ರಬಂಧ ಬರೆಯಲು ಬೇಸರವಿಲ್ಲದಿದ್ದರೂ ಅದಕ್ಕಿಂತಲೂ ಹೆಚ್ಚು ಕಷ್ಟವೆಂದು ತೋರುತ್ತದೆ.

ನಿನಗೆ ಗೊತ್ತಿದ್ದಂತೆಯೇ ಮದುವೆ ಒಂದೇ ದಿನದಲ್ಲಿ ಮುಗಿಯಿತು, ಅಷ್ಟೇನು ಗಲಾಟೆಯಿರಲಿಲ್ಲ. ಇದರ ಮೇಲೆ 'ಅವರ' ಇಷ್ಟ ಹೆಚ್ಚು ಆಡಂಬರವಿರಬಾರದೆಂದು. ನಮಗೆ ಸಿಕ್ಕಿದ ಪುರೋಹಿತರು ಸರಿಯಾದವರೆ. ಅವರು ಮೊದಲೇ ಹೇಳಿದರು: ಮದುವೆ ಕೆಲಸಗಳಲ್ಲಿ ಆಚಾರಪದ್ಧತಿಗಳಿಗೆ ಸಂಬಂಧಪಟ್ಟ ಭಾಗಗಳೇ ಹೆಚ್ಚು; ಶಾಸ್ತ್ರೀಯವಾಗಿ ನಡೆಯಬೇಕಾದ ಭಾಗ ಸ್ವಲ್ಪ. ಅಷ್ಟನ್ನು ಎರಡು ಮೂರು ಘಂಟೆಗಳಲ್ಲಿ ಮುಗಿಸಬಹುದು" ಎಂದರು. ಹಾಗೆ ಮಾಡಿಸಿದರು.

ನಾನೂ ಮದುವೆಗಳನ್ನು ನೋಡಿದ್ದೇನೆ. ಆದರೆ ಈ ಮದುವೆ ಹಾಗಿರಲಿಲ್ಲ. ಅಳಿಯನ ಮುನಿಸಿಲ್ಲ ಇಲ್ಲಿ, ಬೀಗರ ಜಗಳವಿಲ್ಲ, ಉರಟಣೆ ಉಯ್ಯಾಲೆಗಳ ಉತ್ಸಾಹವಿಲ್ಲ. ಗಂಡು ಹೆಣ್ಣು ಚಿಕ್ಕವರಾಗಿದ್ದು, ದೊಡ್ಡವರು ಅವರನ್ನು ಬೊಂಬೆಗಳಾಗಿ ಮಾಡಿಕೊಂಡರೆ ಇವೆಲ್ಲ ನಡೆಯುವುವು. ಅದೂ ಚೆನ್ನವೇ.

ಈ ಮದುವೆಯಲ್ಲಿ ಅಂತಹ ಸಂಭ್ರಮಗಳೇನು ಇರಲಿಲ್ಲ. ಏನೋ ಒಂದು ಬಗೆಯ ಗಾಂಭೀರ್ಯ ಇದ್ದಹಾಗೆ ಕಂಡಿತು. ಮುಂದೆ ಜೀವನವೆಲ್ಲ ಚಿನ್ನದ ಕನಸು; ಮದುವೆಯೆಂದರೆ ಆ ಕನಸಿನ ಪ್ರಪಂಚಕ್ಕೆ

ಕಾಲಿಡುವುದು ಎಂದು ನಾವು ತಿಳಿದುಕೊಂಡಿರಲಿಲ್ಲ. ಜೀವನದಲ್ಲಿ ಸುಖವೂ ಇದೆ ದುಃಖವೂ ಇದೆ. ದುಃಖವನ್ನು ಆದಷ್ಟು ಕಡಿಮೆಮಾಡಿಕೊಂಡು ಆದಷ್ಟು ಸುಖದಿಂದ ನಾವಿಬ್ಬರೂ ಒಟ್ಟಿಗೆ ಜೀವನ ನಡೆಸುತ್ತೇವೆಂಬ ಪ್ರತಿಜ್ಞೆ ತೆಗೆದುಕೊಳ್ಳುವ ಸಮಾರಂಭ-ಇದಕ್ಕೆ ಹಿರಿಯರು-ಹೋದವರು, ಇರುವವರು—ದೇವರು, ಮಹಾಜನರು ಎಲ್ಲರೂ ಸಾಕ್ಷಿಯೆಂದು ತಿಳಿದು ಕೊಂಡಂತಿತ್ತು. ಅದಕ್ಕೆ ಒಂದು ಬಗೆಯ ಗಾಂಭೀರ್ಯ ಏಕಾಗ್ರತೆ ಇದ್ದವೆಂದು ನನ್ನ ಭಾವ.

ಇದಲ್ಲದೆ ಈ ಕಾಗದದಲ್ಲಿ ಇನ್ನೊಂದು ವಿಷಯ ಬರೆಯಬೇಕಾಗಿದೆ. ನಂಜಿಯ ಗಂಡ ಇನ್ನುಮುಂದೆ ನಮ್ಮ ಊರಿನಲ್ಲೇ ಇರುತ್ತಾನೆ. ಅವನ ಸಾಲ ತೀರಿಸಿದ ಹಣ ನನ್ನ ಮದುವೆ ವೆಚ್ಚದೊಳಗೆ ಸೇರಬೇಕೆಂದು ನಾನೇ ನನ್ನ ತಂದೆಯನ್ನು ಕೇಳಿಕೊಂಡೆ. ಆದ್ದರಿಂದ ಮದುವೆಗೆ ಆಗ ಬೇಕಾದಷ್ಟು ವೆಚ್ಚವೂ ಆಗಿದೆ.

ಇಂತು ನಿನ್ನ ಗೆಳತಿ.

## ೨೩

ಕಮಲು,

ಅಂತು ನೀವು ನಮಗಿಂತ ಹೆಚ್ಚು ಅನ್ನುವುದನ್ನು ತೋರಿಸಿಕೊ ಡಲು ಪ್ರಯತ್ನಪಡುತ್ತಿರುವಂತೆ ಕಾಣುತ್ತದೆ. ಗಂಡುಹೆಣ್ಣು ಚಿಕ್ಕದಾಗಿ ರುವಾಗ ಮದುವೆಯಾದರೆ ಒಂದು ಬಗೆಯ ಸೌಂದರ್ಯವಿದೆ. ದೊಡ್ಡವ ರಾದಮೇಲೆ ಆದರೆ ಆಗ ಒಂದು ಬಗೆಯ ಗಾಂಭೀರ್ಯವಿದೆ. ಅವೆರಡು ನಿಮ್ಮ ಪಾಲಿಗಿದೆಯಲ್ಲವೆ? ಜೀವನವೆಲ್ಲ ಚಿನ್ನದ ಕನಸೆಂದು ತಿಳಿದು, “ಆಕಾಶದಲ್ಲಿ ಬಣ್ಣ ಬಣ್ಣದ ಮೋಡಗಳನ್ನು ಕಾಣುತ್ತ ಅವುಗಳೊಡನೆ ತೇಲಿದ್ದೇವೆ. ಹಾಗೆಯೇ ಕನಸು ಮುಗಿದು ನೆಲದಕಡೆ ದೃಷ್ಟಿ ತಿರುಗಿಸಿ ಅಲ್ಲಿ ಕಲ್ಲುಮುಳ್ಳು, ಹೂಬಳ್ಳಿ ಹಸುರುಗಿಡ ಇರುವುದನ್ನು ಕಂಡಿದ್ದೇವೆ” ಎಂದು ಬರೆದಿದ್ದೀಯೆ.

ನಾನು ‘ಅವರಿಗೆ’ ನೀನು ನಿನ್ನ ಮದುವೆಯ ವಿಷಯ ಬರೆದಿರುವು ದನ್ನು ತೋರಿಸಿದೆ. ಅವರು ನೀನು ಹೇಳಿರುವುದು ಸರಿಯೆಂದು ಒಪ್ಪಿ ಕೊಂಡರು. “ಆತಂಕವಿಲ್ಲದ ನಿಷ್ಕಲ್ಮಷವಾದ ಸಂಸಾರಸುಖ ಈಗತಾನೆ

ಮದುವೆಯಾದ, ತಂದೆತಾಯಿಗಳ ಪೋಷಣೆಯಲ್ಲಿರುವ ಸಣ್ಣ ವಯಸ್ಸಿನ ದಂಪತಿಗಳಿಗೆ ಸಿಕ್ಕುವುದು ನಿಜ" ಎಂದರು. ಮೇಜಿನ ಮೇಲಿದ್ದ ಒಂದು ಪುಸ್ತಕ ತೆಗೆದರು. ಅದು ಭವಭೂತಿಯ "ಉತ್ತರ ರಾಮಚರಿತೆ." ರಾಮ ಸೀತೆಯರಿಬ್ಬರೂ ಚಿತ್ರಕಾರನೊಬ್ಬನು ಬರೆದಿರುವ ತಮ್ಮ ಬಾಲ್ಯದ ಚಿತ್ರಗಳನ್ನು ನೋಡುತ್ತಿದ್ದಾರೆ. ಸೀತೆಯನ್ನು ಮದುವೆಯಾಗಿ ಮನೆಗೆ ಕರೆತಂದ ಚಿತ್ರವನ್ನು ನೋಡಿ ಶ್ರೀರಾಮನು, "ತಂದೆಯು ಬದುಕಿದ್ದರು. ಹೊಸದಾಗಿ ಮದುವೆಯಾಗಿತ್ತು. ತಾಯಿಯರಿಗೆ ನಮ್ಮ ಸುಖವೇ ಬೇಕಾಗಿತ್ತು" ಎಂದು ಆಗಿನ ದಿನಗಳನ್ನು ಜ್ಞಾಪಿಸಿಕೊಳ್ಳುತ್ತಾನೆ.

ಆಗ ನಾನು ಕೇಳಿದೆ. "ಹಾಗಾದರೆ ನಿಮ್ಮ ಪಾಲಿಗೆ ಅಂತಹ ಸುಖ ವಿಲ್ಲದೆಹೋಯಿತಲ್ಲ. ಅದಕ್ಕೆ ವ್ಯಥೆಪಡುತ್ತೀರೇನು?"

"ಇಲ್ಲ. ನನಗೆ ವ್ಯಥೆಯಿಲ್ಲ. ಸೌಂದರ್ಯ ಪ್ರೇಮ ಇವುಗಳಿಗೆ ಗಣಿತದ ಲೆಕ್ಕಕ್ಕಿದ್ದಹಾಗೆ ಒಂದೊಂದೇ ಉತ್ತರವಲ್ಲ. ಒಬ್ಬೊಬ್ಬರ ಭಾವನೆ ಒಂದೊಂದು ವಿಧವಾಗಿರುತ್ತದೆ. ಆದರೆ ನನ್ನದೇ ಸರಿ, ಒಂದೇ ಸರಿಯೆಂದು ಹೇಳಲಾಗುವುದಿಲ್ಲ. ನಾನು ನಾನಾಗಿಯೇ ಇರುವುದಕ್ಕೆ ಇಷ್ಟಪಡುತ್ತೇನೆಯೇ ಹೊರತು ಇನ್ನೊಬ್ಬನಾಗಲು ಇಷ್ಟಪಡುವುದಿಲ್ಲ. ಆದರೆ ಇನ್ನೊಬ್ಬರ ಆಶಯವನ್ನು ಅರ್ಥಮಾಡಿಕೊಳ್ಳುವಷ್ಟು ಸಹೃದಯತೆ ಇರಬೇಕೆಂದು ಆಸೆಪಡುತ್ತೇನೆ."

"ಹಾಗಾದರೆ ಅವರದು ಅವರಿಗೆ ಸರಿ. ನಮ್ಮದು ನಮಗೆ ಸರಿ. ಇದು ಒಳ್ಳೆ ನ್ಯಾಯ" ವೆಂದೆ.

ಇಂತು ನಿನ್ನ ಗೆಳತಿ.

## ೨೪

ಕಮಲು,

ಇಷ್ಟು ಮಕ್ಕಳಾದರೂ ನೀನು ಹುಡುಗಿಯಾಗಿಯೇ ಇದ್ದೀಯೆ. ಯಾವತ್ತೂ ಹಾಗೆ ಇರು. ನಾನು ಈ ಪ್ರಶ್ನೆ ಕೇಳುವೆಯೆಂದು ಎಣಿಸಿರ ಲಿಲ್ಲ. ಕೇಳದಿದ್ದರೆ ಕ್ಷೇಮವಾಗಿತ್ತು. ಕೇಳಿದಮೇಲೆ ಹೇಳಲೇಬೇಕು. ನಗಬೇಡ, ಹಾಸ್ಯಮಾಡಬೇಡ, ನೀನು ಮದುವೆಯಾದಮೇಲೆ ನಿನ್ನ ಗಂಡನಿದ್ದ ಮೊದಲನೆ ದಿನ ಜ್ಞಾಪಿಸಿಕೋ.

ಮದುವೆಯಾದ ಮೂರನೆ ದಿನ. ಅವರು ಮಧ್ಯಾಹ್ನ ನಿದ್ದೆ ಮುಗಿಸಿ ಎದ್ದು ಮುಖ ತೊಳೆದುಕೊಂಡಿದ್ದರು. ತಲೆ ಬಾಚಿರಲಿಲ್ಲ; ಕೆದರಿತ್ತು. ನಾನು ತಿಂಡಿ ಕಾಫಿ ತೆಗೆದುಕೊಂಡು ಒಳಗೆ ಹೋದೆ. ನಾನು ಬಂದದ್ದು ಗೊತ್ತಾಗಲಿಲ್ಲವೇನೋ, ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತಿದ್ದರು. ಮೇಜದ ಮೇಲೆ ಸದ್ದಾಗುವಂತೆ ತಟ್ಟೆ ಬಟ್ಟಲು ಇಟ್ಟೆ.

" ಓಹೋ ಕ್ಷಮಿಸಬೇಕು. ಕೂತುಕೊಳ್ಳಿ '' ಎಂದು ಕುರ್ಚಿ ಕಡೆ ಕೈತೋರಿಸಿದರು.

ಇಲ್ಲ ಎನ್ನುವಂತೆ ನಗುತ್ತಾ ತಲೆಯುಳ್ಳಾಡಿಸಿದೆ.

" ಏಕೆ ? " ಎಂದು ಕೇಳಿದರು.

" ನೀವು ಬಹುವಚನದಲ್ಲಿ ಮಾತಾಡಿಸಿದರೆ, ನಾನು ನಿಮ್ಮ ಮಾತು ಕೇಳುವುದಿಲ್ಲ ''

" ಗೌರವ ಬೇಡವೆ ? ''

" ಗೌರವ ಕೊಟ್ಟರೆ ಗಂಭೀರವಾಗಿ ದೂರದಲ್ಲಿ ನಿಲ್ಲಬೇಕಾಗುತ್ತದೆ. ' ನೀವು ' ಎಂದು ನನ್ನನ್ನು ಕರೆದರೆ ನಾನು ದೂರ ಹೋದ ಹಾಗನ್ನಿಸುತ್ತದೆ.''

" ನೀನು ಹತ್ತಿರ ಬರಲಿಲ್ಲ. ಹತ್ತಿರ ಬಂದರೆ ನಾನೂ ಬದಲಾಯಿಸಿ ಕೊಳ್ಳುತ್ತೇನೆ. "

ನಾನು ಹತ್ತಿರ ಹೋಗಿ ತಟ್ಟೆ ಕೈಗೆ ಕೊಟ್ಟೆ. " ಸ್ವಲ್ಪ ತೆಗೆದು ಕೊಳ್ಳಬಹುದಲ್ಲ" ಎಂದರು. ' ಉಹೂಂ ' ಎಂದೆ. " ಹೂಂ ಹೋಗಲಿ " ಎಂದು ಹೇಳಿ ತಿಂಡಿ ಮುಗಿಸಿದರು. ಕಾಫಿ ಕುಡಿದರು.

" ಇಷ್ಟೆ ತಂದಿದ್ದು " ಎಂದು ಕೇಳಿದರು.

" ಅಷ್ಟೇ " ಅಂದೆ.

" ಇಲ್ಲ ಇನ್ನೂ ಏನೋ ಇದೆ. "

" ನಿಜವಾಗಿಯೂ ಇಲ್ಲ. "

" ಇದ್ದರೆ. "

" ಇದ್ದರೆ ತೆಗೆದುಕೊಳ್ಳಬಹುದು. "

" ಇದೇ ಮಾತು ತಾನೆ. "

"ಹೂಂ" ಎಂದೆ.

"ಹಾಗಾದರೆ ಸರಿಯಾಗಿ ನಿಂತುಕೊ – ಕೈ ಕೆಳಗೆ ಬಿಡು. ಕೊಂಚ ತಲೆಯೆತ್ತು. ಹಾಗೇ ನಿಂತಿರು, ಹುಡುಕುತ್ತೇನೆ."

ನಾನು ಹಾಗೆ ಮಾಡಿದೆ. ಅವರು ಹತ್ತಿರ ಬಂದರು.

"ನೀನು ಏನು ತಂದಿರುವೆ ಅನ್ನುವುದು ಗೊತ್ತು. ಈ ಕಳ್ಳತನವೆಲ್ಲ ನಡೆಯದು. ಕಲಿತ ಗರಡಿಯಲ್ಲೆ ವರಸೆ ಆ!" ಎಂದರು. ಅವರ ಎಡದ ಕೈ ನನ್ನ ಮೈ ಬಳಸಿತು. ಏನಾಯಿತು ಎನ್ನುವುದು ನನಗೆ ಗೊತ್ತಾಗುವುದಕ್ಕಿಂತ ಮುಂಚೆಯೇ ನಾನು ಮಾತಾಡಲು ಅವಕಾಶವಿಲ್ಲದ ಹಾಗೆ ಮಾಡಿದ್ದರು."

ನನ್ನನ್ನು ಸುತ್ತಿದ ಎಡಗೈ ಸಡಲಿರಲಿಲ್ಲ. ಅವರು ನನ್ನ ಮುಖವನ್ನೇ ನೋಡುತ್ತಿದ್ದರು. ನನಗೂ ಬಿಡಿಸಿಕೊಳ್ಳಬೇಕೆನಿಸಲಿಲ್ಲ.

ಅಮ್ಮ ಕೂಗಿದಳು. "ಕಿತ್ತಲೆ ಹಣ್ಣು ತೆಗೆದುಕೊಂಡು ಹೋಗು ಯೆಂದು ಹೇಳಿದರೆ ಮರೆತುಹೋದೆಯಾ" ಎಂದಳು. ಕಿತ್ತಲೆ ಹಣ್ಣು ತೆಗೆದುಕೊಂಡು ಮತ್ತೆ ಹೋದೆ.

"ನೋಡಿದೆಯಾ ನನಗೆ ಗೊತ್ತು. ಹೀಗೆ ಅನ್ಯಾಯ ಮಾಡುತ್ತೀಯಲ್ಲ. ನಿನ್ನನ್ನು ಏನು ಮಾಡಬೇಕು ಹೇಳು!'' ಎಂದು ನನ್ನ ಕಡೆ ಬಂದರು.

ನಾನು ಆಗಲೆ ರೂಮಿನ ಹೊರಗೆ ಇದ್ದೆ.

ನಿನಗೆ ಸ್ವಲ್ಪವೂ ಬುದ್ಧಿ ಇಲ್ಲ. ಇವೆಲ್ಲ ಕಾಗದದಲ್ಲಿ ಬರೆಯಬಹುದೆ?

ಇಂತು ನಿನ್ನ ಗೆಳತಿ.

೨೫

ಕಮಲು,

ನಿನ್ನ ಅಭಿಪ್ರಾಯ ಬದಲಾಯಿಸಿತಲ್ಲ, ಅಷ್ಟೆ ಸಂತೋಷ. ಹಾಗೇ ಇದ್ದಿದ್ದರೆ ನನ್ನನ್ನೇನು ತಿಳಿದುಕೊಳ್ಳುತ್ತಿದ್ದೆ. ಅಯ್ಯೋ! ಮಂಕು, ಪಾಪ! ಅನ್ನುತ್ತಿದ್ದೆ ಅಲ್ಲವೆ. ಹಾಗಾದರೆ ಇದುವರೆಗಿನ ನನ್ನ ಕಾಗದಗಳಿಂದ ಅವರು ಪ್ರಪಂಚವನ್ನೆಲ್ಲ ತಿಳಿದ, ಗಂಭೀರವಾಗಿರುವ ದೊಡ್ಡ ಮನುಷ್ಯರು. ಮಾತು ಹೆಚ್ಚಿಗೆ ಆಡುವುದಿಲ್ಲ. ಬಾಯಿ ಬಿಟ್ಟರೆ ತತ್ತ್ವ, ಆದರ್ಶ, ವೇದಾಂತ ಅಂತ ತಿಳಿದುಕೊಂಡಿದ್ದೆಯೇನು?

ಈಗ ಪರವಾಗಿಲ್ಲ. ಇನ್ನೂ ಹೊಸದಾಗಿ ಮದುವೆ ಮಾಡಿಕೊಂಡು ಇರುವವರಲ್ಲಿ ಇರಬೇಕಾದಷ್ಟು ಹುಡುಗತನ ಇದೆ ಅನ್ನಿಸುತ್ತಲ್ಲವೆ? ನೀನು ಏನಾಯಿತು ಎಂದು ಕೇಳದೆ ನಾನು ಆದದ್ದನ್ನು ಬರೆಯದೆ ಹೋಗಿದ್ದರೆ ಎಷ್ಟು ಅನರ್ಥವಾಗುತ್ತಿತ್ತು! ಒಂದೊಂದು ದಿನವೂ ಅವರು ಮಾಡುವ ಹುಡುಗಾಟಗಳನ್ನು ನಾನು ಜ್ಞಾಪಕದಲ್ಲಿಟ್ಟುಕೊಂಡು ಬರೆದೆನಾದರೆ—ಹೇಗಾಗುತ್ತದೆ! ಮಾತಿಗೆ ಸಿಕ್ಕದ ಅಷ್ಟು ಸೂಕ್ಷ್ಮವಾದ ವಿಷಯಗಳು ಅನುಭವಕ್ಕೆ ಮಾತ್ರ ಗೋಚರ—ನಿನಗೆ ತಿಳಿಯುತ್ತಿತ್ತು.

ಈಗ ಜ್ಞಾಪಕಕ್ಕೆ ಬಂತು. ನಾನು ಇವರನ್ನು ಮದುವೆಯಾಗಲು ಒಪ್ಪಿದ್ದು ಸರಿಯೋ ಇಲ್ಲವೋ ನೀನು ಹೇಳಲೇ ಇಲ್ಲವಲ್ಲ!

ಇಂತು ನಿನ್ನ ಗೆಳತಿ.

## ೨೬

ಕಮಲು,

ನಿಜ ನನಗೆ ಗೊತ್ತಾಗಲೆ ಇಲ್ಲ. ಮದುವೆಯಾದ ಮೇಲೆ ಒಪ್ಪಿದ್ದು ಸರಿಯೋ ಅಲ್ಲವೋ ಎಂದು ಕೇಳಿ ಏನು ಪ್ರಯೋಜನ? ಹಾಗಾದರೆ ನನ್ನ ಪ್ರಶ್ನೆ ನೋಡಿ ನಿನಗೆ ನಗು ಬಂದಿರಬೇಕು.

ಆದರೂ ಒಪ್ಪಿಗೆ ವಿಷಯದಲ್ಲಿ ನೀನು ಸರಿಯಾಗಿ ಯೋಚಿಸಿ ಈ ಮಾತುಗಳನ್ನು ಬರೆದಿದ್ದೀಯೆ. ಹೌದು, ನಮಗೆ ಪೂರ್ತಿ ಸರಿ ಹೋಗುವವರು ಸಿಕ್ಕುವುದು ಕಷ್ಟ. ಅಥವಾ ಮದುವೆಗೆ ಮುಂಚೆ ಅದು ಗೊತ್ತು ಮಾಡಿಕೊಳ್ಳುವುದು ಹೇಗೆ? ಮದುವೆಮಾಡಿಕೊಂಡಮೇಲೆ ಗೊತ್ತುಮಾಡಿಕೊಂಡೇನು ಪ್ರಯೋಜನ? ಅಲ್ಲದೆ ಹಾಗೆ ಹುಡುಕುತ್ತಾ ಕೂತರೆ, ಕಥೆಗಳಲ್ಲಿ ಓದಿದ್ದೇವಲ್ಲ ಅವಳ ಹಾಗೆ ಕೂದಲು ನರೆತರೂ ಕನ್ನಿಕೆಯಾಗಿಯೇ ಇರಬೇಕಾಗುತ್ತದೆ. ಹಾಗೆಂದು ಸಿಕ್ಕಿದವರನ್ನು ಮದುವೆಯಾಗುವುದಕ್ಕೂ ಆಗುವುದಿಲ್ಲ. ರೂಪು ನೋಡುವುದು, ಒಪ್ಪಿಗೆಯಾದರೆ ಸರಿ. ಹೌದು ಮೊದಲನೇ ನೋಟದಲ್ಲೇ ಅದು ಹೇಗೋ ಇವರೇ ನಮಗೆ ಬೇಕಾದವರು ಅನ್ನುವುದು ಗೊತ್ತಾಗುತ್ತದೆ. ಆಮೇಲೆ ಅವರ ವಿಷಯವಾಗಿ ಅವರಿವರು ಹೇಳುವುದನ್ನು ಕೇಳಿ ಅವರ ಭಾವವೇನೆಂದು ಅರಿತುಕೊಳ್ಳುವುದು.

ಇಷ್ಟು ಮಾಡಿ, ಇವೆರಡರಲ್ಲೂ ಒಪ್ಪಿಗೆಯಾದರೆ, ಸರಿ ಉಳಿದುದನ್ನೆಲ್ಲಾ ಸರಿಹೋಗಿಸಿಕೊಳ್ಳಬಹುದು.

ನೀನು ಹೇಳಿರುವ ಇನ್ನೊಂದು ಮಾತೂ ನಿಜ. ಎಲ್ಲ ಮೊದಲೇ ಸರಿಹೋಗಿಬಿಟ್ಟಿದ್ದರೆ ಜೀವನದಲ್ಲೇನಿದೆ ? ತುಯ್ದಾಡಿ ಕೊನೆಗೆ ಒಂದು ಗೂಡಿದರೆ ನಿಜವಾದ ಸಂತೋಷ. ಇಲ್ಲದಿದ್ದರೆ ಜೀವನ ಅರ್ಥ ಸ್ವಾರಸ್ಯವೇ ಹೋದ ಹಾಗೆ ಕಾಣುತ್ತದೆ. ಹುಡುಗರಾಡುವ ಚೌಕಭಾರದ ಆಟದಲ್ಲಿ ಎಲ್ಲ ಕಾಯಿಗಳು ಮೊದಲೇ ಹಣ್ಣಾಗಿದ್ದರೆ ಆಟವೇನಿದೆ? ಪರೀಕ್ಷೆಯ ಪ್ರಶ್ನೆಗಳೆಲ್ಲ ಗೊತ್ತಿದ್ದೂ ಪರೀಕ್ಷೆಯಲ್ಲಿ ಪಾಸುಮಾಡಿದರೆ ಏನು ಆನಂದ ವಿದೆ? ಪ್ರಶ್ನೆಗಳು ಗೊತ್ತಿಲ್ಲದೆ ಏನು ಬರಬಹುದೆಂದು ಊಹಿಸಿ, ಸಿದ್ಧ ಮಾಡಿಕೊಂಡು, ಒದ್ದಾಡಿಕೊಂಡು ಕೊನೆಗೆ ಪಾಸುಮಾಡುವುದರಲ್ಲಿ ಎಷ್ಟು ಆನಂದ! ಭವಿಷ್ಯದಲ್ಲಿರುವ ಕುತೂಹಲ, ಅನಿರ್ಧಾರ, ಆದರೂ ಏನೋ ಸಾಧಿಸುವ ಸಾಹಸ—ಇವೇ ಜೀವನದ ಸೌಂದರ್ಯದ ಗುಟ್ಟು.

ಹಾಗಾದರೆ ನಾನು ಒಪ್ಪಿಕೊಂಡಿರುವುದು ಸರಿಯೆನ್ನಿಸಿದೆ ನಿನಗೆ. ನಾವು ಮಾಡಿರುವುದು ಸರಿಯೆಂದು ಇನ್ನೊಬ್ಬರು ಹೇಳಿದರೆ ಎಷ್ಟು ಸಂತೋಷವಾಗುವುದು ಗೊತ್ತೇ? ನನಗಂತೂ ದೊಡ್ಡ ನಿಧಿಯೇ ಸಿಕ್ಕಿತು ಅನ್ನುವಷ್ಟು ಸಂತೋಷವಾಗಿದೆ.

ಇಂತು ನಿನ್ನ ಗೆಳತಿ.

## ೨೭

ಕಮಲು,

ಹೇಗೆ ನಿನಗೆ ಈ ಪ್ರಶ್ನೆಗಳೆಲ್ಲ ಹೊಳೆಯುತ್ತವೆ? ನನ್ನನ್ನೇ ಇಷ್ಟು ಗೋಳುಹುಯ್ದುಕೊಳ್ಳುವಳು ನಿನ್ನ ಗಂಡನನ್ನೆಷ್ಟು ಗೋಳು ಹುಯ್ದು ಕೊಳ್ಳುವೆಯೋ ಕಾಣೆ. 'ಅವರು' ನನ್ನನ್ನು ಏನೆಂದು ಕರೆಯುವರು— ಎಂದು ಕೇಳಿದ್ದೀಯೆ.

ನೀನು ಊಹಿಸಿದಂತೆ ಅವರು ನನ್ನನ್ನು "Dear" ಎಂದು ಕರೆಯುವುದೂ ಇಲ್ಲ. 'My love', 'My dove' ಎಂದೂ ಕರೆಯುವುದಿಲ್ಲ. ನನ್ನ ಹೆಸರು ಹಿಡಿದೇ ಕೂಗುತ್ತಾರೆ. ಪ್ರೀತಿಗಾಗಲಿ, ಕೂಗಲು ಸುಲಭವಾಗಲಿಯೆಂದಾಗಲಿ ಮೊಟಕು ಮಾಡಿಯೂ ಇಲ್ಲ,

ವಿಕಾರಮಾಡಿಯೂ ಇಲ್ಲ. ನನ್ನ ವ್ಯಕ್ತಿತ್ವದಂತೆ ನನ್ನ ಹೆಸರೂ ಯಾವ ಬದಲಾವಣೆಯನ್ನೂ ಹೊಂದಿಲ್ಲ. ಆದರೆ ಕೂಗುವಾಗ ಪ್ರೀತಿಯಿಂದ ಮೃದುವಾಗಿ ಕೂಗುತ್ತಾರೆ ಅಷ್ಟೆ. ಪ್ರೇಮಲತೆಯೊಂದು ಬಳಸಿದೆ ಅಷ್ಟೆ. ಆದರೆ ಹುಡುಗಾಟವಾಗಿದ್ದಾಗ "ಇತ್ತಲಿತ್ತಲ್ ದೇವಿಯರ್" "ಕಿಮಾಜ್ಞಾಪಯತಿ ದೇವೀ" 'What would my sweet lady" ಹೀಗೆ ಓದಿದ ನಾಟಕಗಳ ಮಾತುಗಳ ಸುರಿಮಳೆ.

ಇದಕ್ಕೆಲ್ಲ ಸ್ವಲ್ಪ ಅವಕಾಶ ಕಡಿಮೆ. ನನ್ನ ಸೋದರಮಾವನ ಮನೆಯವರೆಲ್ಲರೂ ಮದುವೆಗೆ ಬಂದವರು ಇಲ್ಲೇ ಇದ್ದಾರೆ. ಅವರೆಲ್ಲರ ವಿಷಯ ನಿನಗೆ ಹೇಳಬೇಕಾಗಿಲ್ಲ. ಆದರೆ, ಅವರ ಎರಡು ಮಕ್ಕಳ ವಿಷಯ ಹೇಳಬೇಕು. ಮೊದಲನೆಯದು ಹತ್ತು ವರ್ಷದ ಹೆಣ್ಣು, ಕುಸುಮ ; ಎರಡನೆಯದು ಆರು ವರ್ಷದ ಗಂಡು, ಗೋಪಾಲ. ಕುಸುಮ ಯಾವಾಗಲೂ ನನ್ನೊಡನೆಯೇ ಇರುತ್ತಾಳೆ. ನಾನು ಮಾಡುವ ಪ್ರತಿಯೊಂದು ಕೆಲಸವನ್ನೂ ನಮ್ಮಿಬ್ಬರ ವರ್ತನೆಯನ್ನೂ ಬಹಳ ಕುತೂಹಲದಿಂದ ನೋಡುತ್ತಿರುತ್ತಾಳೆ. ತಲೆಹರಟೆಯಿಲ್ಲದ ಬಾಯಿಬಿಚ್ಚದ ಗೆಳತಿ ಇಂತಹ ಸಮಯದಲ್ಲಿ ಬಹಳ ಒಳ್ಳೆಯವರು. ಸದ್ಯ ನೀನು ನನ್ನನ್ನು ಗೋಳಾಡಿಸಲು ಹತ್ತಿರವಿಲ್ಲವಲ್ಲ.

ಗೋಪಾಲ ಚಿಕ್ಕ ಪೋಲಿ. ಅವನನ್ನು ಕಂಡರೆ ನನಗೆ ತುಂಬ ಹೆದರಿಕೆ. ನಾನೂ ಅವರೂ ಮಾತಾಡುತ್ತಿದ್ದಾಗ ರೂಮಿನೊಳಕ್ಕೆ ಬಂದ. "ಹೋ ಗಂಡ ಹೆಂಡತಿ ಮಾತಾಡುತ್ತಿದ್ದಾರೆ ಥೂ ಥೂ" ಎಂದು ಓಡಿ ಹೋದ. ಮನೆಯವರೆಲ್ಲರ ಹತ್ತಿರವೂ ಹೋಗಿ ಗಂಡ ಹೆಂಡತಿ ಮಾತಾಡುತ್ತಿದ್ದಾರೆ, ಎಂದು ಸಾರಿಬಿಟ್ಟ. ಸದ್ಯ ಅವನು ಬಂದಾಗ ಮಾತು ಮಾತ್ರ ಆಡುತ್ತಿದ್ದೆವಲ್ಲ, ಬದುಕಿದೆವು.

ಇಂತು ನಿನ್ನ ಗೆಳತಿ.

## ೨೮

ಕಮಲು,

"ದೇವರೇ ನನ್ನ ಸ್ನೇಹಿತರಿಂದ ನನ್ನನ್ನು ಕಾಪಾಡು" ಎಂದು ಒಬ್ಬ ಜ್ಞಾನಿ ಗೋಳಾಡಿದನಂತೆ. ದೇವರು ನಿನ್ನ ಕೈಯಿಂದ ನನ್ನನ್ನು

ಬಿಡಿಸಿಕೊಳ್ಳಬಾರದೆ ?–ಏನು ಮಾಡುವಿರಿ ? ಹೇಗೆ ಹೊತ್ತು ಕಳೆಯುವಿರಿ ಹಳ್ಳಿಯಲ್ಲಿ ? ಎಂದು ಕೇಳಿರುವೆ. ಎಲ್ಲ ಮರೆತುಹೋಯಿತೇನು ? ಏನು ಮಾಡುತ್ತೇನೆಯೆ ? ಮಾತು, ಮಾತು, ಮಾತು. ತುದಿ ಮೊದಲಿಲ್ಲದ ಮಾತು. ಗಂಟೆ ಗಂಟೆಗಳುರುಳಿದರೂ ಮಾತು ಮುಗಿಯುವುದಿಲ್ಲ; ಬೇಸರವೂ ಇಲ್ಲ. ಏನು ಮಾತಾಡಿದೆವೆಂದು ಯೋಚಿಸಿದರೆ ಏನೂ ಇಲ್ಲ.

ನಾನು ಒಂದು ದಿನ ಅವರನ್ನು ಕೇಳಿದೆ, " ನನ್ನನ್ನು ನೀವು ಒಪ್ಪಿದ್ದೇಕೆ ? ''

" ಮದುವೆಯಾಗುವುದಕ್ಕೆ'' ಎಂದು ನಗುತ್ತಾ ಹೇಳಿದರು.

'' ಮದುವೆಯಾಗಲು ಒಪ್ಪಿದ್ದೇಕೆ."

'' ಜೊತೆಯಲ್ಲಿರೋಣವೆಂದು."

'' ಹುಡುಗಾಟ ಬೇಡಿ. ಏಕೆ ಹೇಳಿ ಮತ್ತೆ ''.

" ಹುಡುಗಾಟವಿಲ್ಲದಿದ್ದರೆ ಮದುವೆಯೇಕೆ ? ''

" ಕೇಳಿದುದು ಅರ್ಥವಾಗದಿದ್ದರೆ, ಅರ್ಥವಾಗುವಂತೆ ಹೇಳಬಹುದು. ಅರ್ಥ ಮಾಡಿಕೊಳ್ಳುವುದಿಲ್ಲವೆಂದು ಮನಸ್ಸುಮಾಡಿರುವವರಿಗೆ ಅರ್ಥ ಮಾಡಿಕೊಡುವುದು ಕಷ್ಟ" ಎಂದು ನಾನು ಮುಖ ಬೇರೆ ಕಡೆ ತಿರುಗಿಸಿಕೊಂಡೆ."

" ಸಿಟ್ಟು ಬಂತೇನು ? ''

ನಾನು ಮಾತಾಡಲಿಲ್ಲ.

" ಬಂದಿರಬೇಕು. ಸಿಟ್ಟು ಬಂದಾಗ ಎಷ್ಟು ಚೆನ್ನಾಗಿ ಕಾಣುತ್ತೀ. ಅದಕ್ಕೇ ನಿನ್ನನ್ನು ನಾನು ರೇಗಿಸಿದ್ದು. ಎಲ್ಲಿ ತಿರುಗು ಈ ಕಡೆ ಇನ್ನೊಂದು ಸಲ ನೋಡೋಣ."

ನನಗೆ ನಗು ಬಂತು.

" ನಾನು ನಿನ್ನನ್ನು ಒಪ್ಪಿದ್ದೇಕೆಂದು ಕೇಳಿದೆ ಅಲ್ಲವೆ ? ಇದಕ್ಕೆ " ಎಂದು ನನ್ನನ್ನು ಹಿಡಿದುಕೊಂಡು ಹೋಗಿ ಅಲ್ಲಿದ್ದ ನಿಲುಗನ್ನಡಿಯ ಮುಂದೆ ನಿಲ್ಲಿಸಿ ತಾವೂ ನನ್ನ ಹಿಂದೆ ನಿಂತುಕೊಂಡರು. ನಾನು ಅವರ ಭುಜಕ್ಕೆ ಬರುತ್ತೇನೆ. ನನ್ನ ಹೆಗಲಮೇಲೆ ಕೈಯಿಟ್ಟು ಹಾಗೆ ಒಂದು ಗಳಿಗೆ ನಿಂತರು. ಆಮೇಲೆ ನನ್ನನ್ನು ತಮ್ಮ ಕಡೆಗೆ ತಿರುಗಿಸಿಕೊಂಡು, ಗಲ್ಲಹಿಡಿದು

ಕೊಂಡು, "ನಿನ್ನ ಪ್ರಶ್ನೆಗೆ ಉತ್ತರ ಬಂತೋ?" ಎಂದು ಕೇಳಿದರು. "ಹೂಂ" ಎಂದು ತಲೆಯಲ್ಲಾಡಿಸಿದೆ.

ಅಲ್ಲಿ ಇದ್ದ ಒಂದು ಸೋಫಾದ ಮೇಲೆ ಕುಳಿತುಕೊಂಡೆವು. ನಾನು ಒಂದು ಕೊನೆಯಲ್ಲಿ ಸೋಫಾ ಒರಗಿಕೊಂಡು ಕುಳಿತುಕೊಂಡೆ. ಅವರು ನನ್ನ ಬಳಿ ನನ್ನನ್ನೊರಗಿಕೊಂಡು ಕೂತರು. ಅವರ ಒಂದು ಕೈ ನನ್ನ ಕುತ್ತಿಗೆ ಬಳಸಿ ಭುಜದ ಮೇಲಿತ್ತು; ಇನ್ನೊಂದು ನನ್ನ ಕೈಗಳಲ್ಲಿತ್ತು.

"ನಿಮ್ಮ ತಾಯಿ ಒಪ್ಪಿದರೆ?" ಎಂದು ಕೇಳಿದೆ. ಏಕೆಂದರೆ ಅವರ ತಾಯಿ ಅಮ್ಮನಿಗಿಂತಲೂ ಮೂರು ಪಾಲು ಮಡಿ ಹೆಚ್ಚು.

"ಇಲ್ಲ, ಅವಳು ಮೊದಲು ಒಪ್ಪಲಿಲ್ಲ."

"ಏಕೆ?"

"ಓದಿದ ಹುಡುಗಿಯೆಂದು ಹೆದರಿದಳು."

"ಆಮೇಲೆ?"

"ಅದಕ್ಕೇನಮ್ಮ ಅವಳು ಓದಿದ್ದರೆ, ನಾನು ಓದಿಲ್ಲವೆ?" ಎಂದು ಕೇಳಿದೆ. "ನನ್ನ ಪಾಡು ಹೇಳಪ್ಪ" ಎಂದಳು. "ನಿನ್ನ ಪಾಡೇನು? ಅವಳ ಅಮ್ಮ ಬಿ. ಎ. ಮಾಡಿದ್ದಾರೇನು? ಅವರ ಮಾತು ಕೇಳುವವಳು ನಿನ್ನ ಮಾತೂ ಕೇಳುತ್ತಾಳೆ." ಎಂದೆ. "ಏನೋ ನಿನಗೆ ಒಪ್ಪಿದ ಹಾಗೆ ಮಾಡು" ಎಂದು ಅರೆಮನಸ್ಸಿನಿಂದ ಹೇಳಿದಳು.

ನಾನು ಓದಿದ್ದರಿಂದಲ್ಲವೆ ಹೀಗಾದದ್ದು ಎಂದು ಮುಖ ಸಪ್ಪಗೆ ಮಾಡಿಕೊಂಡೆ.

ನನ್ನ ಮುಂಗುರುಳು ಸರಿಮಾಡುತ್ತ "ಮೊನ್ನೆ ಅಮ್ಮ ಏನಂದಳು ಗೊತ್ತಾಯಿತೆ?" ಎಂದು ಕೇಳಿದರು.

ನಾನು ಕುತೂಹಲದಿಂದ ಅವರ ಮುಖ ನೋಡಿದೆ. "ಹುಡುಗಿ ಒಳ್ಳೆಯವರ ಮನೆ ಹುಡುಗಿ. ನೀನು 'ಅವಳು ಓದಿದಾಳೆ' ಯೆಂದರೆ ನಾನು ಒಪ್ಪುವುದಿಲ್ಲಪ್ಪಯೆಂದಳು."

ನನಗೆ ಈ ಮಾತು ಕೇಳಿ ಎಷ್ಟೋ ಸಮಾಧಾನವಾಯಿತು.

ಇಂತು ನಿನ್ನ ಗೆಳತಿ.

೨೯

ಕಮಲು,

ಅವರು ಇವತ್ತು ಬೆಳಿಗ್ಗೆ ಯಾವುದೋ ಕೆಲಸದ ಮೇಲೆ ಅವರೂರಿಗೆ ಹೊರಟರು. ಹೊತ್ತು ಹೋಗುವುದೇ ಕಷ್ಟ. ಅವರನ್ನು ನೋಡುವುದಕ್ಕೆ ಮುಂಚೆ ಹೇಗೆ ಹೊತ್ತು ಕಳೆಯುತ್ತಿದ್ದೆನೆಂಬುದೇ ಆಶ್ಚರ್ಯ. ನಾನು ನಂಜಿಯೊಡನೆ ಕೂತು ಹರಟೆ ಹೊಡೆಯುತ್ತಿದ್ದ ಆಲದ ಮರ—ನೀನು ಬೋಧಿವೃಕ್ಷ ಯೆಂದು ಕರೆದಿದ್ದೀಯಲ್ಲ—ಅದರ ಬಳಿ ಹೋದೆ. ಏಕೋ ಎರಡು ನಿಮಿಷವೂ ಕುಳಿತುಕೊಳ್ಳಲಾಗಲಿಲ್ಲ. ಎಲ್ಲಿ ಹೊದರೂ ಅಷ್ಟೆ. ಪುಸ್ತಕ ತೆಗೆದರೆ ಓದಲು ಮನಸ್ಸು ಬಾರದು.

ಎಷ್ಟು ಬೇಗ ಬೆಳೆಯಿತು ಈ ಗಾಢವಾದ ಗೆಳೆತನ! ಗಂಡಸು ಇಷ್ಟು ಕುತೂಹಲ, ಸ್ನೇಹ, ಪ್ರೇಮಗಳಿಗೆ ಪಾತ್ರನಾಗುವ ವ್ಯಕ್ತಿ ಎಂದು ನಾನು ಇದಕ್ಕೆ ಮುಂಚೆ ನಿರೀಕ್ಷಿಸಲೂ ಶಕ್ತಳಾಗಿರಲಿಲ್ಲ. ಕಾಲೇಜಿನಲ್ಲಿ ನಾವು ನೋಡಿದವರೆಲ್ಲ ಜಿಗುಪ್ಸೆ ಹುಟ್ಟಿಸುವಂತಹರೇ. ಹತ್ತಿರ ಬಂದು ಹಲ್ಲು ಕಿರಿಯುವವರು—ಇಲ್ಲ, ಹಿಂದೆ ಹಿಂದೆ ಹುಚ್ಚು ಹುಚ್ಚು ಹರಟುವ ಪೋಲಿಗಳು—ಇಲ್ಲ, ಸುತ್ತ ಮುತ್ತ ಸುಳಿದಾಡುವ ಜಂಭದ ಕೋಳಿಗಳು. ನಯ, ಗೌರವ, ಸ್ನೇಹವಿದ್ದವರೊಬ್ಬರನ್ನೂ ಕಾಣಲಿಲ್ಲ.

ಹೀಗೆ ಬರೆದಿರುವುದಕ್ಕೆ ನನ್ನನ್ನೂ ಹಾಸ್ಯಮಾಡಬೇಡ. ಹಾಸ್ಯ ಮಾಡಿದರೆ ಅಳಬೇಕಾಗುತ್ತೆ ಅಷ್ಟೆ. ನಿನಗೆ ಹೇಳದಿರಬಹುದಾಗಿತ್ತು. ಇಲ್ಲ, ಅದು ಸಾಧ್ಯವಾಗದಿದ್ದುದರಿಂದಲೇ ಈ ಕಾಗದವನ್ನು ಬರೆದದ್ದು.

ಇಂತು ನಿನ್ನ ಗೆಳತಿ.

೩೦

ಕಮಲು,

ನಿನ್ನ ಕಾಗದ ನೋಡಿ ಸಮಾಧಾನವಾಯಿತು. ಇವತ್ತೇನು ಅರುವತ್ತು ವರ್ಷದ ಅಡುಗೂಲಜ್ಜಿಯ ಹಾಗೆ ಮಾತಾಡುತ್ತೀಯೆ. ಈಗ ತಾನೆ ಮದುವೆಯಾದವರಿಗೆ ಹಾಗನ್ನಿಸುವುದು ಅಲ್ಲವೆ? ಮಕ್ಕಳಾದಮೇಲೆ ಹಾಗನ್ನಿಸುವದಿಲ್ಲ ಯೆಂದು ಹೇಳಲಿಲ್ಲವಲ್ಲ. ಅಂದರೆ ಮಕ್ಕಳು ಮರಿ ಅಡಿಗೆ ಈ ಗಲಾಟೆಯಲ್ಲಿ ಸ್ವಲ್ಪ ಮರೆತು ಬಿಡಬಹುದು.

ಹೌದು ಅದೂ ನಿಜ. ಅಮ್ಮನಿಗೆ ಅಂದು ಕೊಂಚ ಮೈಗೆ ಸ್ವಸ್ಥವಿರಲಿಲ್ಲ. ಕೆಲಸವೆಲ್ಲ ನನಗೆ ಬಿತ್ತು. ಅವರೂ ಕೂಡ ತಾವು ಹೇಳಿದುದಕ್ಕೆ ಒಂದು ದಿನ ಮುಂಚೆ ಬಂದುಬಿಟ್ಟರು. ನಾನು "ಪಾಪ, ದೂರದಿಂದ ಬಂದಿದಾರೆ" ಎಂದು ಒಂದು ಲೋಟ ಕಾಫಿ ಮಾಡಿಕೊಂಡು ತೆಗೆದುಕೊಂಡು ಹೋದೆ. ಕಾಫಿ ಕುಡಿಯುತ್ತಾ

"ಏನು ಬಹಳ ಸೊಗಸಾಗಿದೆಯಲ್ಲ ಕಾಫಿ."

"ಇಲ್ಲ ನಿಮಗೆಲ್ಲೋ ಹೆಚ್ಚು ಆಯಾಸವಾಗಿದೆ. ಅದಕ್ಕೆ ಹಾಗೆ ತೋರುತ್ತೆ."

"ಅಲ್ಲ ಅಲ್ಲ ಇವತ್ತಿನ ಕೈ ಬೇರೆ ಇದ್ದಂತೆ ಇದೆ."

ನಾನು ನಗುತ್ತ "ನಾನೇ ಮಾಡಿದ್ದು. ಅಮ್ಮನಿಗೆ ಮೈ ಸ್ವಸ್ಥವಿಲ್ಲ" ವೆಂದೆ.

"ಅಡಿಗೆ ಯಾರು ಮಾಡುವರು?"

"ನಾನೇ".

"ಇವತ್ತು ರಾತ್ರಿ ನಿನ್ನ ಅಡಿಗೆ?"

"ಹೌದು. ಅದೇನು ಮುಂಚೆ ಬಂದು ಬಿಟ್ಟರಲ್ಲ."

"ನೀನು ಅಡಿಗೆ ಮಾಡುತ್ತಿಯೆಂತ ನೆನ್ನೆ ಕನಸು ಬಿತ್ತು. ಅದಕ್ಕೋಸ್ಕರವೇ ಮುಂಚೆ ಬಂದು ಬಿಟ್ಟೆ."

"ಆಹಾಹಾ! ಈ ಜಾಣತನದ ಮಾತಿಗೇನು ಮುಟ್ಟೆಸಬೇಕು."

"ಸರಿ, ಹಾಗಾದರೆ ನಿಜ ಹೇಳುತ್ತೇನೆ. ಇನ್ನು ಯಾರಿಗೋ ಕೆಲಸ ಒಪ್ಪಿಸಿ ಬಂದುಬಿಟ್ಟೆ."

"ಹೀಗೋ, ಸರಿಹೋಯ್ತು"ಎಂದು ಅವರ ದೌರ್ಬಲ್ಯಕ್ಕೆ ಮರುಗುವಂತೆ ಹೇಳಿದೆ.

ರಾತ್ರಿ ಊಟವಾದ ಮೇಲೆ ಎಲೆ ಅಡಿಕೆ, ಹಾಲು ತೆಗೆದುಕೊಂಡು ರೂಮಿಗೆ ಹೋದೆ.

"ಬಾ ಬಾ ಪಾಪ ಬೆಳಿಗ್ಗೆಯಿಂದ ಕೆಲಸ ಮಾಡಿ ಸಾಕಾಗಿ ಹೋಗಿದ್ದೀಯಾ" ಎಂದರು.

"ಹುಂ, ಪರವಾಗಿಲ್ಲ."

" ಹಾಗಾದರೆ ಚೆನ್ನಾಗಿರಲಿಲ್ಲ.''

" ಅಯ್ಯೋ ! ಇಷ್ಟಕ್ಕೆಲ್ಲ ಸಿಟ್ಟೆ. ಚೆನ್ನಾಗಿತ್ತು. ತುಂಬ ಚೆನ್ನಾಗಿತ್ತು. ಮುಂಚೆಯೇ ಹೇಳಬಾರದೆ ಚೆನ್ನಾಗಿತ್ತು ಅಂತ. ಹೇಳದಿದ್ದರೆ ಸಿಟ್ಟು ಮಾಡಿಕೊಳ್ಳುತ್ತೀನೆಂದು " ಹೀಗೆನ್ನುತ್ತಾ ಕೈ ಹಿಡಿದುಕೊಂಡು ಪಕ್ಕದಲ್ಲಿ ಕೂಡಿಸಿಕೊಂಡರು.

" ನೋಡಿದೆಯಾ ಇನ್ನೂ ಸಿಟ್ಟು ಹೋಗಲಿಲ್ಲವೇ ? ನಿಜವಾಗಿಯೂ ಚೆನ್ನಾಗಿತ್ತು ಕಣೆ. ಅಯ್ಯೋ ! ಇನ್ನೇನು ಮಾಡಲಿ, ಲೇ ! ಎಷ್ಟು ಚೆನ್ನಾಗಿ ಅಡಿಗೆ ಮಾಡುತ್ತೀಯೆ ನೀನು. ನಿನ್ನ ಕಂಡರೆ ನನಗೆಷ್ಟು ಪ್ರೇಮ ಅಂತೀಯೆ. ಏನು ಮಾಡಲಿ ಹೇಳು ". ನನ್ನ ಬೆನ್ನಿನ ಮೇಲೆ ಕೈಯಿಟ್ಟರು.

" ಅಮ್ಮನಿಗೆ ನೀನು ಅಡಿಗೆ ಕೆಲಸದಲ್ಲೂ ಬುದ್ಧಿವಂತೆ ಅಂತ ಗೊತ್ತಾದರೆ ಎಷ್ಟು ಸಂತೋಷಪಡುತ್ತಾಳೋ. ಈಗ ನೀನು ಬರಿ ಗ್ರಾಜುಯೇಟ್ ಅಲ್ಲ. ಡಬ್ಬಲ್ ಗ್ರಾಜುಯೇಟ್. ಏಕೆಂದರೆ ಪೋಸ್ಟ್ ಗ್ರಾಜುಯೇಟ್ ಕೋರ್ಸ್ ಕೂಡ ಮುಗಿದಿದೆ."

" ಹಾಗಾದರೆ ನಾನು ಅಡಿಗೆ ಕೆಲಸ ಕಲಿತುಕೊಂಡುದು ಒಳ್ಳೆಯದಾಯಿತು." ಎಂದು ಅವರ ಮುಖ ನೋಡಿದೆ. ಹೌದುಯೆಂದು ನನ್ನ ಹತ್ತಿರ ಎಳೆದು ಕೂಡಿಸಿಕೊಂಡರು. ಅವರ ಎರಡು ತೋಳುಗಳೂ ನನ್ನನ್ನು ಬಳಸಿದವು. ನಾನೂ ಅವರ ಮುಖವನ್ನು ಎರಡು ಕೈಗಳಲ್ಲೂ ಹಿಡಿದು ಕೊಂಡೆ. ಅವರ ಮುಖನೋಟ ಬಹಳ ಮುದ್ದಾಗಿ ಕಂಡಿತು. ಒಂದು ಸಲ ಮುತ್ತಿಟ್ಟೆ ! ಏನು ಯೆಂದು ಇನ್ನೊಂದು ಸಲಿ ಕೇಳಬೇಡ.

ಇಂತು ನಿನ್ನ ಗೆಳತಿ.

## ೩೧

ಕಮಲು,

ನೀನು ಹಿಂದೆ ಬರೆದಿದ್ದುದರ ಅರ್ಥ ಈಗ ಪೂರ್ತಿ ಗೊತ್ತಾಗಿದೆ. ಇನ್ನು ಎಷ್ಟು ದಿನ ಹಳ್ಳಿಯಲ್ಲಿರುವೆವೆಂದು ಕೇಳಿದ್ದೀಯೆ. ನಿಮ್ಮ ಮನೆಗೂ ಬರಬೇಕೆಂದು ಅಕ್ಷತೆ ಕೊಟ್ಟಿರುವೆ. ಅವರನ್ನು ಕೇಳಿದೆ. ಅವರ ನೆಂಟರು ಸ್ನೇಹಿತರು ಅನೇಕರು ಅವರ ಮನೆಗಳಿಗೂ ಬರಬೇಕೆಂದು ಬರೆದಿದ್ದಾರಂತೆ. ಎಲ್ಲ ಕಡೆಗೂ ಒಂದು ಸಲ ಹೋಗಬೇಕಾಗಿದೆ. ಕೊನೆಗೆ ನಿಮ್ಮ

ಮನೆಗೆ ಹೋಗೋಣವೆಂದು ಹೇಳಿದ್ದಾರೆ. ನಿನಗೂ ಒಪ್ಪಿಗೆ ತಾನೆ? ನನಗೇನೋ ಅದೇ ಸರಿಯೆಂದು ಕಾಣುತ್ತದೆ. ಏಕೆಂದರೆ ಇನ್ನೆಲ್ಲಿಗೂ ಹೋಗಬೇಕೆಂಬ ಆತುರವಿರುವುದಿಲ್ಲ.

ಇಂತು ನಿನ್ನ ಗೆಳತಿ.

೩೨

ಕಮಲು,

ನಮ್ಮ 'Honey-moon' ಯಾವಾಗ ಆರಂಭವಾಗುತ್ತದೆ ಎಂದು ಕೇಳಿದ್ದೀಯ. ನಿನಗೆ ಹೇಗೆ ಇಷ್ಟ ಬರುತ್ತೋ ಹಾಗೆ ಹೇಳು.

ನಾಳೆ ಇಲ್ಲಿಂದ ಹೊರಡುತ್ತೇವೆ. ಮೊದಲು ಅವರ ಅಕ್ಕನ ಮನೆಗೆ. ಅಲ್ಲಿಂದ ಕಾಗದ ಬರೆಯುತ್ತೇನೆ. ಸಾಮಾನು ಜೋಡಿಸುವ ಅವಸರ. ಹೆಚ್ಚಿಗೆ ಬರೆಯಲಾಗಲಿಲ್ಲ. ಕ್ಷಮಿಸು.

ಇಂತು ನಿನ್ನ ಗೆಳತಿ.

೩೩

ಕಮಲು,

ನಾನು ನನ್ನ ಹಿಂದಿನ ಕಾಗದದಲ್ಲಿ ಬರೆದಿದ್ದಂತೆ ಇಲ್ಲಿಗೆ ಬಂದೆವು. ದಾರಿಯಲ್ಲಿ ನಡೆದ ಒಂದು ವಿಷಯ ನಿನಗೆ ಹೇಳಬೇಕೆನ್ನಿಸಿತು. ಒಂದು ಕಡೆ ಬಸ್ಸು ನಿಂತಿತು. ಇಬ್ಬರು ಬಸ್ಸು ಹತ್ತಿದರು. ಗಂಡ ಹೆಂಡತಿ. ಒಂದು ಮಗುವೂ ಇತ್ತು. ಸಾಮಾನು ತುಂಬ ಇತ್ತು. ಗಂಡಸು ಮೆತ್ತಗಿದ್ದ. ಹೆಂಗಸು ಗಟ್ಟಿಗಿತ್ತಿ. ಕೈಲಿದ್ದ ಮಗುವನ್ನು ಗಂಡನ ಕೈಗೆ ಕೊಟ್ಟಳು. ಸಾಮಾನುಗಳನ್ನೆಲ್ಲಾ ಆಳುಗಳ ಕೈಲಿ ಮೋಟಾರಿಗೆ ಹಾಕಿಸಿದಳು. ಕೊನೆಗೆ ಏನು ಅನುಮಾನ ಬಂತೋ ಸೀಟಿನ ಮೇಲೆ ಹತ್ತಿ ಎಗರಿ ಮೇಲಿದ್ದ ಸಾಮಾನುಗಳನ್ನೆಲ್ಲ ಎಣಿಸಿಕೊಂಡಳು. ಗಂಡ ಪಾಪ, ಮಗು ಎತ್ತಿಕೊಂಡು ನಿಂತಿದ್ದ. "ಬನ್ನಿ ಕುಳಿತುಕೊಳ್ಳಿ'' ಎಂದು ಪಕ್ಕದಲ್ಲಿ ಜಾಗ ತೋರಿಸಿದಳು. ಆಮೇಲೆ ಆತ ಕೂತುಕೊಂಡ. ಕಂಡಕ್ಟರ್ ಗಂಡಸನ್ನು ಛಾರ್ಜು ಕೇಳಿದ. ಗಂಡಸು ಹೆಂಡತಿಯ ಕಡೆ ತಿರುಗಿದ. ಆಕೆ ಚೌಕಾಸಿ ಮಾಡಿ ತನ್ನ ಮಡಲಿನಿಂದ ದುಡ್ಡು ತೆಗೆದುಕೊಟ್ಟಳು. ನೋಡುತ್ತಿದ ಹಾಗೆ ಈ ಜೋಡಿ ನಮ್ಮ ದೃಷ್ಟಿಯನ್ನು ಸೆಳೆಯಿತು. ಕೊನೆಯವರೆಗೂ ಅವರೇನು ಮಾಡುತ್ತಾ

ರೆಂಬುದನ್ನೇ ನೋಡುತ್ತಿದ್ದೆವು. ದಾರಿಯಲ್ಲಿ ಬಸ್ಸು ನಿಂತಾಗ ಏನಾದರೂ ತೆಗೆದುಕೊಳ್ಳಬೇಕಾದರೆ ಹೆಂಡತಿ ಗಂಡನಿಗೆ ದುಡ್ಡು ಕೊಟ್ಟು ಏನು ತರ ಬೇಕು, ಎಷ್ಟು ದುಡ್ಡು ಕೊಡಬೇಕು ಎಲ್ಲವನ್ನು ತಿಳಿಸುತ್ತಿದ್ದಳು. ಒಂದು ಸ್ಥಳದಲ್ಲಿ ಗಂಡಸು ಏನೋ ಕೊಳ್ಳುವುದಕ್ಕೆ ಹೋದಾಗ ಬಸ್ಸು ಹೊರಟು ಬಿಟ್ಟಿತು. ಆಗ ಆ ಹೆಂಗಸು ' ಡ್ರೈವರ್ ಸಾಬು, ನಮ್ಮ ಮನೆಯವರು ಹೋಗಿದ್ದಾರೆ, ಬಸ್ಸು ನಿಲ್ಲಿಸು ' ಎಂದು ಕೂಗಿ ಬಸ್ಸು ನಿಲ್ಲಿಸಿ, ತಡವಾಗಿ ಬಂದ ಗಂಡನನ್ನು ಬೈದು ಕೂತುಕೊಳ್ಳಿ ಎಂದಳು.

ನಮಗೆ ನಗುಬರುತ್ತಿತ್ತು. ಹಾಗೆ ಬಾಯಿ ಮುಚ್ಚಿಕೊಂಡು ನಗು ತ್ತಿದ್ದೆವು. ಬಸ್ಸಿಳಿದು ಮನೆಗೆ ಬರುವಾಗ " ವಿಚಿತ್ರ ಗಂಡ ಹೆಂಡತಿಯರು " ಎಂದೆ.

" ಯಾರು ಗಂಡ ಯಾರು ಹೆಂಡತಿ ? "

" ಹೆಂಗಸು ಗಂಡ ; ಗಂಡಸು ಹೆಂಡತಿ."

" ಹೌದು ನಿಜ "

ಮುಂದಿನ ಕಾಗದದಲ್ಲಿ ಅವರ ಅಕ್ಕನ ಮನೆಯ ವಿಷಯಗಳನ್ನು ಬರೆಯುತ್ತೇನೆ.

ಇಂತು ನಿನ್ನ ಗೆಳತಿ.

೩೪

ಕಮಲು,

ಅವರ ಅಕ್ಕನ ಹೆಸರು ಸೀತಮ್ಮ. ಅವಳ ಗಂಡನ ಹೆಸರು ಗೊತ್ತಿಲ್ಲ. ಗೊತ್ತಿಲ್ಲದಿದ್ದರೇನು ? ಸೀತಮ್ಮನ ಗಂಡ ಅನ್ನುವುದು ಗೊತ್ತಿ ಲ್ಲವೆ ? ನಾಲ್ಕು ಮಕ್ಕಳು. ಮೊದಲನೆಯದು ಕೊನೆಯದು ಹೆಣ್ಣು. ಮಧ್ಯದೆರಡು ಗಂಡು. ಒಂದೊಂದಕ್ಕೂ ಎರಡೆರಡು ವರ್ಷ ವ್ಯತ್ಯಾಸ. ಗಂಡ ಹೆಂಡತಿ ಮಕ್ಕಳಲ್ಲದೆ ಇನ್ನೊಬ್ಬರಿದ್ದಾರೆ. ಅವರು ಸೀತಮ್ಮನ ಅತ್ತೆ. ಐಶ್ವರ್ಯವಂತರೂ ಅಲ್ಲ, ಬಡವರೂ ಅಲ್ಲ. ಸಾಮಾನ್ಯವಾಗಿ ದ್ದಾರೆ. ಆಳುಗಳು ಯಾರೂ ಇಲ್ಲ. ಮನೆಗೆಲಸಗಳನ್ನೆಲ್ಲಾ ಮನೆಯ ವರೇ ಮಾಡಿಕೊಳ್ಳುತ್ತಾರೆ. ಅದರಲ್ಲೂ ಸೀತಮ್ಮನ ಅತ್ತೆ—ಅವರನ್ನು ಅಜ್ಜಿ ಯೆನ್ನು ತ್ತೇವೆ—ಅವರ ಮಡಿ ಹೆಚ್ಚು.

ಬೆಳಿಗ್ಗೆಯಿಂದ ರಾತ್ರಿಯವರೆಗೂ ಇಬ್ಬರಿಗೂ ಪುರುಸತ್ತಿಲ್ಲ. ಬೆಳಗಾಯ್ತೆಂದರೆ ಬಚ್ಚಲಮನೆ ಒಲೆ ಹೊತ್ತಿಡುವುದು, ಅಡಿಗೆ ಮನೆ ಕಸ ಮುಸುರೆ ತೆಗೆದುಕೊಂಡು ಒಲೆ ಸಾರಿಸಿಕೊಂಡು ಪಾತ್ರೆ ಬೆಳಗಿಕೊಳ್ಳುವುದು. ಆ ಮೇಲೆ ಮಡಿ, ಮಕ್ಕಳ ಮಡಿ, ಕಾಫಿ. ಇದಾದ ಮೇಲೆ ಅಡಿಗೆ ಸಮಾರಂಭ. ಊಟದ ಗಲಾಟೆ. ಇವೆಲ್ಲ ಆಯ್ತು ಎನ್ನುವ ವೇಳೆಗೆ ಮಧ್ಯಾಹ್ನ ಒಂದು ಘಂಟೆ. ಒಂದು ಸ್ವಲ್ಪ ಹೊತ್ತು ಪುರುಸತ್ತು ಸಿಕ್ಕುತ್ತೊ ಇಲ್ಲವೊ ಕಾಣೆ. ಮತ್ತೆ ಮಕ್ಕಳಿಗೆ ಜಡೆ ಹೆಣೆದು ಮುಖ ತೊಳೆಯುವುದು. ಮಧ್ಯಾಹ್ನದ ಕಾಫಿ. ಬಟ್ಟೆ ಒಗೆಯುವುದು. ಬಚ್ಚಲಮನೆಗೆ ನೀರು ತುಂಬುವುದು. ಅಷ್ಟು ಹೊತ್ತಿಗೆ ಸಾಯಂಕಾಲವಾಗುತ್ತದೆ. ಅಜ್ಜಿ ಪುರಾಣಕ್ಕೆ ಹೋಗುತ್ತಾರೆ. ಸೀತಮ್ಮ ರಾತ್ರಿಗೆ ಅಡಿಗೆ ಮಾಡಲು ಒಲೆ ಹಚ್ಚುತ್ತಾಳೆ ಸರಿ ಮತ್ತೆ ಒಂಬತ್ತು ಹೊಡೆಯುವವರೆಗೂ ಪುರುಸತ್ತಿಲ್ಲ.

ಸಾಯಂಕಾಲ ಸೀತಮ್ಮ ಒಳಗೆ ಅಡಿಗೆ ಮಾಡುತ್ತಿದ್ದಳು. ನಾನೂ. ಅವರೂ ಹೊರಗಡೆ ಮನೆಯ ಜಗುಲಿಯ ಮೇಲೆ ಕೂತಿದ್ದೆವು. ಸೀತಮ್ಮನ ಸಣ್ಣ ಮಗು ನಮ್ಮ ಹತ್ತಿರ ಆಡುತ್ತಿತ್ತು.

"ಅಜ್ಜಿ ಇಲ್ಲದಿದ್ದರೆ ಸೀತಮ್ಮನ ಗತಿ ನೆಟ್ಟಗೆ" ಅಂದೆ ನಾನು.

"ಅವಳು ಗಂಡನ ಮನೆಗೆ ಬಂದಾಗ ಕೆಲಸ ಸ್ವಲ್ಪವೂ ಬರುತ್ತಿರಲಿಲ್ಲ. ನಮ್ಮ ಅಮ್ಮ ಅವಳನ್ನು ನಿತ್ಯ ಬಯ್ಯುತ್ತಿದ್ದಳು".

"ಈಗ ಎಲ್ಲ ಕೆಲಸ ಕಲಿತುಕೊಂಡಿದಾಳೆ. ಅಚ್ಚುಕಟ್ಟಾಗಿ ಅಡಿಗೆ ತಿಂಡಿ ಎಲ್ಲ ಮಾಡುತ್ತಾಳೆ".

"ಎಲ್ಲ ಅಜ್ಜಿ ಕಲಿಸಿಕೊಟ್ಟಿದಾರೆ. ಮನೆಗೆ ಅತ್ತೆಯೊಬ್ಬಳಿರುವುದು ಒಳ್ಳೆಯದಲ್ಲವೆ?"

"ಎಲ್ಲ ಅಜ್ಜಿಯಷ್ಟೆ ಒಳ್ಳೆಯವರಾದರೆ ಒಳ್ಳೆಯದು".

"ಅಲ್ಲದೆ ಹೋದರೆ".

"ಆ ಕಷ್ಟ ಗಂಡಸರಿಗೇನು ಗೊತ್ತಾಗುತ್ತದೆ. ಅನುಭವಿಸುವ ಸೊಸೆಗೇ ಗೊತ್ತು."

"ಒಬ್ಬರೇ ಇದ್ದರೆ ಕೆಲಸವೆಲ್ಲ ಮಾಡಿಕೊಳ್ಳುವುದಕ್ಕಾಗುತ್ತದೊ? ಎಷ್ಟಾಗಲಿ ತಿಳಿದವರ ಕೈಕೆಳಗೆ ಸ್ವಲ್ಪ ತರಪೇತಾದರೆ ಒಳ್ಳೆಯದಲ್ಲವೆ?

ಅಲ್ಲದೆ ಇನ್ನೊಂದು ಯೋಚಿಸಬೇಕಾದ ವಿಷಯವಿದೆ. ಅವರು ತಾನೆ ನಮ್ಮ ಜೊತೆಯಲ್ಲಿರುವುದು ಸ್ವಲ್ಪ ದಿನವಲ್ಲವೆ? ನಮಗೆ ಸ್ವಲ್ಪ ಕಷ್ಟ ವಾದರೂ ಸಹಿಸಿಕೊಳ್ಳುವುದು ಒಳ್ಳೆಯದಲ್ಲವೆ?"

ನಾನು ಮತ್ತೆ ಮಾತಾಡಲಿಲ್ಲ. ನಮ್ಮ ಹತ್ತಿರ ಆಡುತ್ತಿದ್ದ ಮಗು ವಿಗೆ ಏನಾಯಿತೋ ಏನೋ ಇದ್ದಕ್ಕಿದ್ದ ಹಾಗೆ ರಗಳೆ ಮಾಡಲು ಪ್ರಾರಂಭಿ ಸಿತು. ಅವರ ಅಮ್ಮ ಬಂದು ಎತ್ತಿಕೊಂಡು ಸಮಾಧಾನಮಾಡಿದರೂ ಅಳು ನಿಲ್ಲಿಸಲಿಲ್ಲ. ನಮಗೆ ಏನು ಮಾಡಬೇಕೆಂಬುದೇ ಗೊತ್ತಾಗಲಿಲ್ಲ. ಅಷ್ಟು ಹೊತ್ತಿಗೆ ಅಜ್ಜಿ ಪುರಾಣದಿಂದ ಬಂದರು. "ಏಕ್ರೆ ನನ್ನ ಚಿನ್ನನನ್ನು ಹಾಗೆ ಅಳಿಸುವುದು?" ಎಂದು ಎತ್ತಿಕೊಂಡರು. ಮಗುವನ್ನು ನಾವೆಲ್ಲ ಬೈದೆ ವೆಂದು ಹೊಡೆದೆವೆಂದು ನಮಗೆಲ್ಲ ಅನ್ನ ಹಾಕುವುದಿಲ್ಲವೆಂದು ಅದಕ್ಕೆ ಹೇಳಿ, ತಟ್ಟಿ ಲಾಲಿಹೇಳಿ ಮಲಗಿಸಿದರು. ರಚ್ಚೆ ಹಿಡಿದ ಮಗುವನ್ನು ಸಮಾಧಾನಗೊಳಿಸುವುದು ಎಷ್ಟು ಕಷ್ಟವೆಂದು ನನಗೆ ಆಗ ಗೊತ್ತಾಯಿತು. ಅಜ್ಜಿ ಇದರಲ್ಲಿ ನಮ್ಮೆಲ್ಲರಿಗಿಂತ ಹೆಚ್ಚು ನಿಪುಣೆ ಎನ್ನುವುದು ಸಿದ್ಧ ವಾಯಿತು.

ನಾವು ಇನ್ನೇನು ಮಲಗಿಕೊಳ್ಳಬೇಕು ಎನ್ನುವಷ್ಟರಲ್ಲಿ ಪಕ್ಕದ ಮಹಡಿ ಮನೆಯಾಕೆ ಅಳುತ್ತಿದ್ದ ತಮ್ಮ ಮಗುವನ್ನು ಎತ್ತಿಕೊಂಡು ಬಂದು, "ನೋಡಿ ಅಜ್ಜಮ್ಮ, ಏಕೋ ಮಗು ಸಾಯಂಕಾಲದಿಂದ ಹಟ ಮಾಡು ತ್ತಿದೆ. ಎಷ್ಟು ಸಮಾಧಾನಮಾಡಿದರೂ ಸುಮ್ಮನಾಗುವುದಿಲ್ಲ" ಎಂದರು. ಅಜ್ಜಿ ಮಗು ಕರೆದುಕೊಂಡು ಸಮಾಧಾನ ಮಾಡಲು ಯತ್ನಿಸಿದರು. ಏನು ಪ್ರಯೋಜನವಾಗಲಿಲ್ಲ. ಆ ಮೇಲೆ ಹೊಟ್ಟೆ ಮುಟ್ಟಿ ನೋಡಿದರು, ಕಲ್ಲಾ ಗಿತ್ತು. ಎಲ್ಲೋ ಹೊಟ್ಟೆ ನೋಯುತ್ತಿದೆ, ಅದಕ್ಕೆ ಅಳುತ್ತದೆ ಎಂದರು. ಸ್ವಲ್ಪ ಹರಳೆಣ್ಣೆ ಹೊಟ್ಟೆಗೆ ತಿಕ್ಕಿದರು. ಮಗು ಅಳು ನಿಲ್ಲಿಸಿತು. ಬೆಳಿಗ್ಗೆ ಮಗುವಿಗೆ ಭೇದಿ ಹಾಕುವಂತೆ ಹೇಳಿ ಅವರನ್ನು ಕಳುಹಿಸಿದರು. ಸೀತಮ್ಮ ನನ್ನ ಕಿವಿಯಲ್ಲಿ ಹೇಳಿದಳು, "ಆಕೆ ತುಂಬ ಓದಿದಾಳೆ, ಗಂಡನೊಡನೆ ಇಂಗ್ಲಿಷಿನಲ್ಲೆ ಮಾತಾಡುವುದು" ಎಂದು. "ಏನಾದರೇನು ಮಗು ಏಕೆ ಅಳುತ್ತದೆ ಅನ್ನುವುದು ಗೊತ್ತಾಗಲಿಲ್ಲ" ಎಂದೆ ನಾನು.

ಮಲಗಿಕೊಳ್ಳುವ ವೇಳೆಯಲ್ಲಿ ಅವರು ಕೇಳಿದರು, "ಏನು, ಈಗ

ಲಾದರೂ ಒಪ್ಪಿಕೊಳ್ಳುವೆಯಾ ಮನೆಯಲ್ಲಿ ದೊಡ್ಡವರಿರುವುದು ಕ್ಷೇಮ ವೆಂಬುದನ್ನು.''

ಇಂತು ನಿನ್ನ ಗೆಳತಿ.

೩೫

ಕಮಲು,

ಸೀತಮ್ಮನ ಊರಿನಿಂದ ನೆನ್ನೆ ಇಲ್ಲಿಗೆ ಬಂದೆವು. ಇಲ್ಲಿ ಅವರ ಸ್ನೇಹಿತರೊಬ್ಬರ ಮನೆಯಲ್ಲಿದ್ದೇವೆ. ಇಲ್ಲಿಂದ ನಾಳೆಯೇ ಹೊರಡುತ್ತೇವೆ. ತುಮಕೂರಿನಲ್ಲಿರುವ ಒಬ್ಬ ಅಸಿಸ್ಟೆಂಟ್ ಕಮಿಷನರ್ ಅವರ ಸ್ನೇಹಿತರಂತೆ. ಅವರ ಅತಿಥಿಗಳಾಗಿ ಕೆಲವು ದಿನ.

ಇಲ್ಲಿಂದ ಇಷ್ಟು ಬೇಗ ಹೊರಡುವುದಕ್ಕೆ ಕಾರಣವಿಷ್ಟೆ. ಗಂಡಹೆಂಡತಿ ಇಬ್ಬರೂ ಕೆಲಸದಲ್ಲಿದ್ದಾರೆ. ಇಬ್ಬರೂ ಮೇಷ್ಟರು. ಬೆಳಿಗ್ಗೆ ಎದ್ದರೆ ಇಬ್ಬರಿಗೂ ಸ್ಕೂಲಿಗೆ ಹೋಗುವ ಆತುರ. ಸ್ಕೂಲು ಮುಗಿದು ಮನೆಗೆ ಬರುವ ವೇಳೆಗೆ ಅರ್ಧ ಜೀವವಾಗಿರುತ್ತಾರೆ. ನಮಗೋಸ್ಕರ ಇಬ್ಬರೂ ಒಂದು ದಿನ ರಜ ತೆಗೆದುಕೊಳ್ಳಲು ಪ್ರಯತ್ನಪಟ್ಟರು. ಸಾಧ್ಯವಾಗಲಿಲ್ಲ. ಇಬ್ಬರು ಫ್ಯಾಕ್ಟರಿ ಕೂಲಿಗಳು ಒಟ್ಟಿಗೆ ವಾಸಿಸುತ್ತಿರುವಂತಿದೆ ಅವರ ಸಂಸಾರ. ಸದ್ಯ ದೇವರು ಮಕ್ಕಳನ್ನೇನು ಇವರಿಗೆ ಕರುಣಿಸಿಲ್ಲವಲ್ಲ. ಅಷ್ಟೆ ಸಂತೋಷ. ಮಕ್ಕಳಾದರೆ, ಪಾಪ! ಅವುಗಳೇನೋ ದೊಡ್ಡ ಪಾಪ ಮಾಡಿರಬೇಕು ಹಿಂದಿನ ಜನ್ಮದಲ್ಲಿ.

ಇಂತು ನಿನ್ನ ಗೆಳತಿ.

೩೬

ಕಮಲು,

ಕಾಗದ ಬರೆಯುತ್ತಿರುವುದು ಅಸಿಸ್ಟೆಂಟ್ ಕಮಿಷನರ ಬಂಗಲೆಯ ಒಂದು ಕೋಣೆಯಲ್ಲಿ. ಒಬ್ಬ ಆಳು ಇದನ್ನು ಅಂಚೆಗೆ ಹಾಕಲು ಕಾದು ನಿಂತಿದ್ದಾನೆ.

ಸಾಹೇಬರಿಗೆ ಆಫೀಸು, ಕ್ಲಬ್ಬು, ಆ ಸಭೆ ಈ ಸಭೆಗಳ ಅಧ್ಯಕ್ಷತೆ, ಓಡಾಟ ಇಲ್ಲ ಸರ್ಕೀಟು. ಅಮ್ಮಾವರಿಗೆ ಸಮಾಜ, ಉಳಿದ ಸಾಹೇಬರುಗಳ ಹೆಂಡತಿಯರನ್ನು ನೋಡಲು ಅವರ ಮನೆಗಳಿಗೆ ಹೋಗುವುದು, ಅವರನ್ನು ಮನೆಗೆ ಕರೆದುಕೊಂಡು ಬರುವ ಓಡಾಟ. ಆಗ ಈಗ ಜವಳಿ

ಅಂಗಡಿಗೋ ಬೆಳ್ಳಿ ಚಿನ್ನದ ಅಂಗಡಿಗೊ ಭೇಟಿ. ಆದರೇನು ಊರಿನವರೆಲ್ಲ ತಲೆಯೆತ್ತಿ ಬಾಯಿಬಿಟ್ಟುಕೊಂಡು ಇವರ ಕಡೆ ನೋಡುತ್ತಿರುತ್ತಾರೆ. ನಾನು ಹೀಗೆ ಹೇಳಲು ಏನೋ ಕಾರಣವಿರಬೇಕು ಎಂದೆನಿಸಿರಬೇಕು ನಿನಗೆ.

ಈಗತಾನೆ ಒಂದು ಸಮಾರಂಭದಿಂದ ಹಿಂತಿರುಗಿ ಬಂದಿದ್ದೇನೆ. ಸಾಹೇಬರು ಹಳ್ಳಿಯಲ್ಲಿ ಒಂದು ಶಾಲೆಯ ಆರಂಭೋತ್ಸವ ನಡೆಸಲು, ಗ್ರಾಮಸ್ಥರ ಪ್ರಾರ್ಥನೆಯನ್ನು ದೊಡ್ಡ ಮನಸ್ಸು ಮಾಡಿ ಅಂಗೀಕರಿಸಿ, ತಮ್ಮ ಅನಂತ ಕಾರ್ಯಗಳ ನಡುವೆ ಬಿಡುವು ಮಾಡಿಕೊಂಡು, ದಯ ಮಾಡಿಸಿದ್ದರು. ನಾವು ಅವರೊಡನೆ ಕಾರಿನಲ್ಲಿ ಹೊರಟೆವು. ಊರಿಗೆ ಹೋಗುವ ರಸ್ತೆ, ದೊಡ್ಡ ರಸ್ತೆಯನ್ನು ಸೇರುವ ಕಡೆ ಜನಗಳು ಸೇರಿದ್ದರು. ಮುಖಂಡರು ಒಬ್ಬಳು ಹೆಂಗಸನ್ನು ಸಾಹೇಬರೆದುರಿಗೆ ನಿಲ್ಲಿಸಿದರು. ಈಕೆಯೇ ಶಾಲೆಯನ್ನು ಕಟ್ಟಿಸಿಕೊಟ್ಟಿರುವಾಕೆಯೆಂದು ಪರಿಚಯ ಮಾಡಿಸಿ ಕೊಟ್ಟರು. ಸಾಹೇಬರು ಸಂತೋಷ ಯೆಂದರು. ಅಮ್ಮಾವರು ಸುಮ್ಮನೆ ಕೂತಿದ್ದರು. ಊರಿಗೆ ದಯಮಾಡಿಸಬೇಕೆಂದು ಹಳ್ಳಿಯವರು ವಿಜ್ಞಾಪಿಸಿ ಕೊಂಡರು. ಸಾಹೇಬರ ಕಾರು ಹಳ್ಳಿಯ ಕಡೆಗೆ ಹೊರಟಿತು. ಜನರು ಹಿಂದೆ ಓಡಿಯೋಡಿಬಂದರು. ಆ ಹೆಂಗಸೂ ಓಡಿಬಂದಳು. ಹಳ್ಳಿಯಲ್ಲಿ ಕೆಲವರಿಗೇ ಸೊಗಸಾದ ಉಪಾಹಾರದ ವ್ಯವಸ್ಥೆಯಾಗಿತ್ತು. ನಮ್ಮ ಉಪಾ ಹಾರವೂ ಆಕೆಯ ಔದಾರ್ಯದ್ದೇಯಂತೆ. ಉಪಾಹಾರವಾದ ಮೇಲೆ ಹೊರಗೆ ಶಾಲೆಯ ಮುಂದೆ ಹಾಕಿದ್ದ ಚಪ್ಪರದಲ್ಲಿ ಸಭೆ. ಸಾಹೇಬರು ಪುಟ್ಟಭಾಷಣವೊಂದನ್ನು ತಡವರಿಸುತ್ತ ಮಾಡಿ ತಮ್ಮ ಅಮೃತ ಹಸ್ತದಿಂದ ಶಾಲೆಗೆ ಹಾಕಿದ್ದ ಬೀಗ ತೆಗೆದು ಬಾಗಿಲು ತೆರೆದರು. ಜನಗಳೆಲ್ಲ ಚಪ್ಪಾಳೆ ಹೊಡೆದರು. ಸಾಹೇಬರು ಇಷ್ಟು ದಯೆ ತೋರಿಸಿದುದು ಸುಮ್ಮನೆಯೆ? ಅಮ್ಮಾವರು ಪ್ರೆಸಿಡೆಂಟಾಗಿರುವ ಸಮಾಜಕ್ಕೆ ಈ ಹಳ್ಳಿಯ ಹೆಂಗಸು ನೂರು ರೂಪಾಯಿಗಳ ಗಂಟೊಂದನ್ನು ಸಮರ್ಪಿಸಿದಳು. ಅಮ್ಮಾವರು ತೆಗೆದುಕೊಂಡರು. ಹೊರಡುವಾಗ ಸಾಹೇಬರು ಅಮಲ್ದಾರರಿಗೆ "ಬುದ್ಧಿ ಉಪಯೋಗಿಸಿ ಚೆನ್ನಾಗಿ ವ್ಯವಸ್ಥೆ ಮಾಡಿದ್ದೀರಿ. ಸಂತೋಷ" ಅಂದರು. ಅಮಲ್ದಾರರು ಹಲ್ಲು ಕಿರಿದರು.

ಕಮಲು, ಇದೆಲ್ಲ ನೋಡಿ ನನಗೆ ನಮ್ಮಲ್ಲೇ ಬಹಳ ಬೇಸರವಾ

ಯಿತು. ಮನೆಗೆ ಬಂದ ಮೇಲೆ ಒಂದು ಪ್ರಶ್ನೆ ತೋರಿತು. ಹಳ್ಳಿಯವಳು ಹೆಚ್ಚೋ? ಸಾಹೇಬರ ಹೆಂಡತಿ ಹೆಚ್ಚೋ? ಕಾಸಿಗೆ ಕಾಸು ಕೂಡಹಾಕಿ—ಯಾರ ಮಾತನ್ನಾದರೂ ಕೇಳಿರಲಿ—ದಾನಮಾಡಿದ ತಿಳಿಯದ ಹೆಂಗಸು ಹೆಚ್ಚು ಸಂಸ್ಕೃತಳೊ? ತಿಳಿದವಳೆಂದುಕೊಂಡು, ಬಣ್ಣ ಬಣ್ಣದ ಪಟ್ಟೆ ಸೀರೆಗಳನ್ನುಟ್ಟುಕೊಂಡು, ತನ್ನನ್ನು ಸತ್ಕರಿಸಿ ಗೌರವಿಸಿದ ಹೆಣ್ಣನ್ನು ಜೊತೆಯಲ್ಲಿ ಕೂಡಿಸಿಕೊಳ್ಳುವುದು ಹೋಗಲಿ-ಮಾತುಕೂಡ ಆಡಿಸದ, ಮೆರೆಯುವ ಹೆಣ್ಣು ಹೆಚ್ಚು ಸಂಸ್ಕೃತಳೊ?

ಮುಂದೆ ಬೆಂಗಳೂರಿಗೆ ಪ್ರಯಾಣ.

ಇಂತು ನಿನ್ನ ಗೆಳತಿ.

## ೩೭

ಕಮಲು,

ಇಲ್ಲಿ ಅವರ ಸೋದರಮಾವನ ಮಗಳ ಮನೆಯಲ್ಲಿ ತಂಗಿದ್ದೇವೆ. ಇಲ್ಲಿ ಇನ್ನೂ ಕೆಲವು ದಿನಗಳಿರುತ್ತೇವೆ. ಏಕೆಂದರೆ ನಮ್ಮ ಮನಸ್ಸಿಗೆ ಇರಬೇಕೆನ್ನಿಸಿದೆ.

ಮನೆ ಇರುವುದು ಮಲ್ಲೇಶ್ವರದಲ್ಲಿ. ದೊಡ್ಡ ಮನೆಯ ಒಂದು ಭಾಗ. ಈ ಬಂಗಲೆ ಎರಡು ಕಡೆಯೂ ರಸ್ತೆಗಳಿವೆ. ಮುಂದೆ ಸ್ವಲ್ಪ ಜಾಗ ಕಾಂಪೌಂಡಿನೊಳಗಿದೆ. ಅವರ ಸೋದರ ಮಾವನ ಮಗಳ ಹೆಸರು ಶಾರದಮ್ಮ ಎಂದು. ಅವಳ ಯಜಮಾನರು ಕಮಿಷನ್ ಏಜಂಟ್. ಬಹಳ ಬುದ್ಧಿವಂತನಂತೆ. ಹೆಚ್ಚು ಓದಿಲ್ಲ. ಆದರೂ ವ್ಯಾಪಾರ ಚೆನ್ನಾಗಿ ಗೊತ್ತಿದೆ. ಕಾಸಿಲ್ಲದೆ ವ್ಯಾಪಾರ ಪ್ರಾರಂಭಿಸಿ, ಈಗ ವ್ಯಾಪಾರದಲ್ಲಿ ಹಾಕಿರುವ ಹಣವಲ್ಲದೆ ಬ್ಯಾಂಕಿನಲ್ಲಿ ಹತ್ತು ಸಾವಿರ ರೂಪಾಯಿಗಳನ್ನಿಟ್ಟಿದ್ದಾನಂತೆ. ಶಾರದಮ್ಮನೂ ಜಾಣೆ. ಮನೆಯ ವಿಶಿಷ್ಟ ಕೆಲಸವೂ ಅವಳದೆ. ತಿಂಗಳ ಮೊದಲನೆ ತಾರೀಖು ಅವಳ ಗಂಡ ಅವಳಿಗೆ ನೂರು ರೂಪಾಯಿಗಳನ್ನು ಕೊಡುತ್ತಾನೆ. ಮನೆಗೆಂದು ಮತ್ತೇನನ್ನೂ ಕೇಳುವ ಹಾಗಿಲ್ಲ.

ಎರಡು ಮಕ್ಕಳಿವೆ. ಒಂದು ಕೈಯಿನ ಮಗು ಗಂಡು. ಇನ್ನೊಂದು ಎಂಟು ವರ್ಷದ ಹೆಣ್ಣು. ಮನೆಯಲ್ಲಿ ಒಬ್ಬಳು ಶೂದ್ರರ ಹುಡುಗಿಯನ್ನು

ಕೆಲಸಕ್ಕಿಟ್ಟುಕೊಂಡಿದಾಳೆ. ಅವಳು ಕೆಲಸ ಮಾಡುವಾಗ ಮಗುವನ್ನು ಮಗಳೋ ಕೆಲಸದ ಹುಡುಗಿಯೋ ನೋಡಿಕೊಳ್ಳುತ್ತಾರೆ. ಮಗುವಿನ ಗಲಾಟೆ ಸ್ವಲ್ಪವೂ ಇಲ್ಲ. ಒಂದಕ್ಕಿಂತ ಹೆಚ್ಚಾಗಿ ಸಣ್ಣ ಮಕ್ಕಳಿದ್ದರೆ ಅವಕ್ಕೂ ಸುಖವಿಲ್ಲ, ನೋಡಿಕೊಳ್ಳುವವರಿಗೂ ಕಷ್ಟ ಅಂತ ಅನ್ನಿಸುತ್ತದೆ ನನಗೆ.

ಅಂಗಡಿಯಿಂದ ಮನೆಗೆ ಸಾಮಾನು ತರುವವಳೂ ಶಾರದಮ್ಮನೇ. ಸಾಯಂಕಾಲ ಮಗು ಎತ್ತಿಕೊಂಡು, ಮಗಳನ್ನು ಕರೆದುಕೊಂಡು ಮಾರ್ಕೆಟ್ಟಿಗೆ ಹೋಗುತ್ತಾಳೆ. ಕೆಲಸದ ಹುಡುಗಿ ಬುಟ್ಟಿ ಹಿಡಿದು ಹಿಂದೆ ಬರುತ್ತಾಳೆ. ಬೇಕಾದ ಹಣ್ಣು ವೀಳೆಯದೆಲೆ ತರಕಾರಿ ತೆಗೆಸಿಕೊಂಡು ತರುತ್ತಾಳೆ. ತಿಂಗಳಿಗೊಂದು ಬಾರಿ ಮನೆಗೆ ಬೇಕಾದ ಅಕ್ಕಿ ಮುಂತಾದ ಸಾಮಾನುಗಳನ್ನು ಒಂದು ಆಳು ಗೊತ್ತುಮಾಡಿಕೊಂಡು ತೆಗೆಸಿಕೊಂಡು ಬರುತ್ತಾಳೆ. ಹಬ್ಬಕ್ಕೆ ಜವಳಿ ತೆಗೆಯಲು ಅಂಗಡಿಗೆ ಹೋಗುವಾಗ ಮಾತ್ರ ಅವಳ ಗಂಡ ಜೊತೆಯಲ್ಲಿ ಬರುತ್ತಾನೆ.

ಗಂಡ ಬೆಳಿಗ್ಗೆ ಹತ್ತು ಘಂಟೆಗೆ ಊಟ ಮಾಡಿಕೊಂಡು ಹೋದರೆ, ಸಾಯಂಕಾಲ ನಾಲ್ಕು ಘಂಟೆಗೆ ಟೀ ಕುಡಿಯಲು ಮನೆಗೆ ಬರುತ್ತಾನೆ. ಮುಂದಿನ ಹಜಾರದಲ್ಲಿ ಸೋಫಾ, ಬೆತ್ತದ ಕುರ್ಚಿಗಳಿವೆ; ಅಲ್ಲಿ ತಿಂಡಿತಿಂದು ಟೀ ಕುಡಿಯಲು ಗಂಡ ಹೆಂಡತಿ ಮಕ್ಕಳು ಸೇರುತ್ತಾರೆ. ರೇಡಿಯೋ ಹಾಡುತ್ತಿರುತ್ತದೆ. ಸುಮಾರು ಒಂದು ಘಂಟೆ ಹೊತ್ತಿದ್ದು ಅವಳ ಗಂಡ ಆಫೀಸಿಗೆ (ಅವನ ಅಂಗಡಿ ಅಂಗಡಿಯಂತಿಲ್ಲ, ಆಫೀಸಿನಂತಿದೆ) ಹೋಗುತ್ತಾನೆ.

ಮತ್ತೆ ರಾತ್ರಿ ೯ ಘಂಟೆಗೆ ಬರುತ್ತಾನೆ. ಬೆಳಿಗ್ಗೆ ಊಟಕ್ಕಿಂತ ರಾತ್ರಿ ಊಟ ಹೆಚ್ಚು ಅಚ್ಚುಕಟ್ಟು. ಊಟವಾದಮೇಲೆ ಗಂಡ ಹೆಂಡಿರು ಮುಂದಿನ ಹಜಾರದಲ್ಲಿ ಎಲೆ ಅಡಿಕೆ ಹಾಕಿಕೊಳ್ಳುತ್ತಾ ಹರಟೆ ಹೊಡೆಯುತ್ತಾ ಕುಳಿತಿರುತ್ತಾರೆ.

ಮಧ್ಯೆ ಮಧ್ಯೆ ಒಂದೊಂದು ದಿನ ಆತನಿಗೆ ಪೂರ್ತಿ ಬಿಡುವಿರುತ್ತದೆ. ಆಗ ಸ್ನೇಹಿತರ ಮನೆಗೋ ನಂಟರ ಮನೆಗೋ ಹೋಗುವುದು, ಅಥವಾ ಯಾರನ್ನಾದರೂ ಕರೆದುಕೊಂಡು ಬರುವುದು, ಸಿನಿಮಾಕ್ಕೆ ಹೋಗುವುದು.

ನನಗೇನೋ ಇವರ ಸಂಸಾರ ಬಹಳ ಅಚ್ಚುಕಟ್ಟಿನ ಸಂಸಾರ ಅನ್ನಿಸಿದೆ.

ಇನ್ನೊಂದು ವಿಷಯ. ಶಾರದಮ್ಮನ ಮಗು ಅದೇನೋ ನನ್ನನ್ನು ಬಹಳ ಹೊಂದಿಕೊಂಡುಬಿಟ್ಟಿದೆ. ಅವರಮ್ಮನನ್ನು ಕೂಡ ಬಿಟ್ಟು ನನ್ನ ಹತ್ತಿರ ಇರುತ್ತದೆ. ಇನ್ನೂ ಮಾತು ಚೆನ್ನಾಗಿ ಬರುವುದಿಲ್ಲ. ನನ್ನ 'ಅತ್ತೆ' ಎಂದು ಕರೆಯುತ್ತದೆ. ಮಕ್ಕಳೇ ಚೆನ್ನ. ಹೊಂದಿಕೊಂಡು ಬಿಟ್ಟರಂತೂ ಕೇಳಬೇಕಾಗಿಯೇ ಇಲ್ಲ. ನನಗೇನೋ ದೇವರು ಮನುಷ್ಯನಿಗೆ ಕೊಟ್ಟಿರುವುದರಲ್ಲಿ ಮಕ್ಕಳಿಗಿಂತ ಮಿಗಿಲಾದ ವಸ್ತುವಿನ್ನೊಂದಿಲ್ಲವೆನ್ನಿಸುತ್ತದೆ.

ಇಂತು ನಿನ್ನವಳು.

೩೮

ಕಮಲು,

ನೀನು ಹೇಳುವುದು ನಿಜವಿರಬಹುದು ಅನ್ನಿಸುತ್ತದೆ. ಕಂಡವರ ಮಕ್ಕಳನ್ನು ಕಂಡರೆ ಇಷ್ಟು ಆನಂದವಾದರೆ, ನಮ್ಮ ಮಕ್ಕಳನ್ನೇ ಅಪ್ಪಿಕೊಂಡು ಮುದ್ದಿಡುವುದರಲ್ಲಿ ಇನ್ನೂ ಹೆಚ್ಚಿನ ಆನಂದವಿರಬೇಕು. ಮಕ್ಕಳು ದೇವರು ಕೊಟ್ಟಿರುವ ಅಮೋಘ ವರವಾದರೆ ಆ ವರದ ಫಲ ಗಂಡಸಿನ ಪಾಲಿಗಿಂತ ಹೆಂಗಸಿನ ಪಾಲಿಗೆ ಹೆಚ್ಚಾಗಿದೆ.

ನಾನು ಮತ್ತೆ ಶಾರದಮ್ಮನ ವಿಷಯ ಬರೆಯುತ್ತೇನೆಂದು ನೀನು ಊಹಿಸಿರಬಹುದು. ಶಾರದಮ್ಮನ ಮನೆಗೆ ಬಂದವರಿಗೆ ಥಟ್ಟನೆ ಒಂದು ವಿಷಯ ಗೊತ್ತಾಗುವುದು. ಅವಳ ಹತ್ತಿರ ಹೆಚ್ಚು ಒಡವೆಗಳಿಲ್ಲ. ಕಿವಿಯಲ್ಲೊಂದು ಬಿಳಿಹರಳಿನ ಓಲೆ, ಮೂಗಿನಲ್ಲೊಂದು ಬೇಸರಿ, ಕೈಗಳಲ್ಲೆರಡು ಬೆಳ್ಳಿಬಳೆ, ಕತ್ತಿನಲ್ಲೊಂದು ಬೆಳ್ಳಿ ತಂತಿಯಲ್ಲಿ ಸುತ್ತಿದ ಕರಿಮಣಿ ತಾಳಿಸರ ಬಿಟ್ಟು ಬೇರೆಯೇನೂ ಒಡವೆಯಿಲ್ಲ. ಮಗಳಿಗೂ ಅಷ್ಟೆ, ಕಿವಿಯಲ್ಲಿ ಲೋಲಾಕು, ಕೈಯಲ್ಲೊಂದು ಜೊತೆ ಬೆಳ್ಳಿಬಳೆ. ಮನೆಯಲ್ಲೂ ಅಷ್ಟೇನು ಬೆಳ್ಳಿ ಪಾತ್ರೆಗಳಿಲ್ಲ. ಅವಳನ್ನು ನಾನು ಕೇಳುತ್ತಲು, " ಕೊಳ್ಳಬೇಕೆಂದರೆ ಪಾತ್ರೆ ಒಡವೆ ಕೊಂಡುಕೊಳ್ಳಬಹುದು. ಅವರನ್ನು ದುಡ್ಡು ಕೇಳಬೇಕಾಗಿಲ್ಲ. ಮನೆಗೆಂದು ಕೊಡುವ ಹಣದಲ್ಲೆ ಪ್ರತಿ ತಿಂಗಳೂ ಸ್ವಲ್ಪ

ಉಳಿಯುತ್ತದೆ. ಬೆಳ್ಳಿ ಚಿನ್ನಕ್ಕೆ ಹಾಕಿ ಸವೆಸುವುದಕ್ಕಿಂತ ಸೊಸೈಟಿ ಬ್ಯಾಂಕುಗಳಲ್ಲಿ ಹಾಕಿ ಬೆಳಸುವುದನ್ನು ಅವರು ಹೇಳಿ ಕೊಟ್ಟಿದ್ದಾರೆ" ಯೆಂದಳು. ಆದರೆ ಬಟ್ಟೆಗಳು ಬೇಕಾದಷ್ಟಿವೆ. ಎಲ್ಲ ಹೊಸ ಹೊಸ ನಮೂನೆಯುವೇ. ಬಹಳ ಚೊಕ್ಕಟ, ಶುಭ್ರ. ಸಾಬೂನಿಗೋಸ್ಕರ ತಿಂಗಳಿಗೆ ಸುಮಾರಾಗಿ ಖರ್ಚುಮಾಡುವಂತೆ ಕಾಣುತ್ತದೆ.

ಇನ್ನೊಂದು ಹೊಗಳಬೇಕಾದ ವಿಷಯವೆಂದರೆ, ಅವಳು ಹೆಚ್ಚು ಆಯಾಸವಿಲ್ಲದ ಹಾಗೆ ಮನೆಗೆಲಸ ನಿರ್ವಹಿಸುವುದು. ಕೆಲಸದ ಹುಡುಗಿಯ ಕೈಲಿ ಏನೇನು ಮಾಡಿಸಬಹುದೊ ಅದೆಲ್ಲವನ್ನೂ ಮಾಡಿಸುತ್ತಾಳೆ. ಅವಳು ಎಷ್ಟೆಷ್ಟು ಬೇಗ ಕೆಲಸ ಮಾಡುತ್ತಾಳೆಂಬುದನ್ನು ನೋಡಿದರೆ ನನಗೇ ಆಶ್ಚರ್ಯವಾಗುತ್ತದೆ.

ಹೀಗೆ ಬಿಡುವು ಮಾಡಿಕೊಂಡ ಕಾಲದಲ್ಲಿ ಸಣ್ಣ ಸಣ್ಣ ಬಟ್ಟೆಗಳನ್ನು ಹೊಲಿಯುತ್ತಾಳೆ. ಬಟ್ಟೆ ಹೊಲಿಯುವ ಒಂದು ಕೈಮಿಷಿ ಇದೆ. ಕಸೂತಿ ಹಾಕುತ್ತಾಳೆ. ಹಳೆಯ ಗಟ್ಟಿ ಬಟ್ಟೆಗಳೆಲ್ಲ ರೂಪಾಂತರ ಹೊಂದಿ ಕಸೂತಿ ಹಾಕಿಸಿಕೊಂಡು ಹೊಸವಾಗುತ್ತವೆ.

ಗಂಡ ಹೆಂಡತಿ ಬಹಳ ಚೆನ್ನಾಗಿ ಹೊಂದಿಕೊಂಡಿದ್ದಾರೆ. ಗಂಡ ಮನೆಯೋಚನೆಯಿಲ್ಲದೆ ತನ್ನ ಕೆಲಸವೇನೋ ಅದನ್ನು ಮಾಡಿಕೊಳ್ಳುತ್ತಾನೆ. ಹೆಂಡತಿ ಮನೆಯನ್ನು ಒಪ್ಪವಾಗಿಟ್ಟುಕೊಂಡು ಗಂಡ ಮನೆಗೆ ಬಂದರೆ, ಯಾರನ್ನಾದರೂ ಸ್ನೇಹಿತರನ್ನು ಕರೆದುಕೊಂಡು ಬಂದರೆ, ಮನಸ್ಸಿಗೆ ಒಂದುಸ್ವಲ್ಪವೂ ಬೇಜಾರಾಗದಂತೆ ನೋಡಿಕೊಳ್ಳುತ್ತಾಳೆ. ಸಂಸಾರದಲ್ಲಿ ಮತ್ತೇನು ಬೇಕು ?

ನವರಾತ್ರಿಗೆ ಮೈಸೂರಿನಲ್ಲಿರುತ್ತೇವೆ. ಈಚೆಗೆ ನಮ್ಮ ಮೂರ್ತಿ ಅಲ್ಲಿಗೆ ಬಂದಿದ್ದಾನೆ.

ಇಂತು ನಿನ್ನ ಗೆಳತಿ.

೩೯

ಕಮಲು,

ನಾನು ಬರೆಯುವುದು ನಿನಗೆ ಬೇಸರವಾಗಬಹುದೆಂದು ತಿಳಿದಿದ್ದೆ. ಹಾಗಾಗದಿದ್ದರೆ ಸಂತೋಷ.

ನವರಾತ್ರಿಯ ವೇಳೆಗೆ ಮೈಸೂರಿನಲ್ಲಿರುತ್ತೇನೆಂದು ಬರೆದಿದ್ದೆ. ಅದರಂತೆ ಇಲ್ಲಿಗೆ ಬಂದಿದ್ದೇವೆ. ನೆನ್ನೆ ಎಗ್ಜಿಬಿಷನ್ಗೆ ಹೋಗಿದ್ದೆವು. ನಾವು ಏನೂ ಕೊಳ್ಳಲಿಲ್ಲ. ಬರುವವರನ್ನು ನೋಡಲು ಹೋಗಿದ್ದೆವು. ಒಂದು ಕಡೆ ನಿಂತು ಹೋಗಿಬರುವವರನ್ನೆಲ್ಲಾ ನೋಡುತ್ತಿದ್ದೆವು. ಇನ್ನೂ ಹೊಸದಾಗಿ ಮದುವೆಯಾದ ಗಂಡು ಹೆಣ್ಣು ಬಂದರು. ಗಂಡು ಎಲ್ಲೋ ಕಾಲೇಜಿನಲ್ಲಿ ಓದುತ್ತಿರಬಹುದು. ಹೆಣ್ಣು ಇನ್ನೂ ಸಣ್ಣ ಹುಡುಗಿ. ಆ ಹುಡುಗಿ "ಅದೇನು ಇದೇನು" ಎಂದು ಕೇಳುತ್ತಿತ್ತು. ಗಂಡು ಎಲ್ಲ ಎಲ್ಲ ಬಿಡಿಸಿ ಹೇಳುತ್ತಿದ್ದ.

ಇವರನ್ನು ನೋಡಿ "ಇದೊಂದು ಬಗೆಯ ವಿಷಮ ವಿವಾಹ. ಗಂಡಿಗೂ ಹೆಣ್ಣಿಗೂ ಬಹಳ ಅಂತರ. ಹೆಣ್ಣು ತಿಳಿವಳಿಕೆಯಲ್ಲಿ ಇನ್ನೂ ಮಗು. ಗಂಡು ಬಹಳ ಮುಂದೆ ಹೋಗಿದ್ದಾನೆ" ಎಂದುಕೊಂಡೆವು.

ಇನ್ನು ಸ್ವಲ್ಪ ಹೊತ್ತು ನಿಂತಿದ್ದೆವು. ಇನ್ನೊಂದು ಜೋಡಿ ಬಂತು. ಕ್ರಿಶ್ಚಿಯನ್ನರಿದ್ದಹಾಗಿತ್ತು. ಹೆಂಗಸು ಸ್ವಲ್ಪ ಹೆಚ್ಚು ವಯಸ್ಸಾದವಳಂತಿತ್ತು. ಡಾಕ್ಟರೋ ನರ್ಸೋ ಇರಬಹುದು. ಕೈಯಲ್ಲೊಂದು ಚೀಲವಿತ್ತು—ಈ ಚೀಲವನ್ನು ಅವರು 'Vanity bag' ಅನ್ನುತ್ತಾರೆ.—ಗಂಡು ಇನ್ನೂ ಹುಡುಗ. ಅವರನ್ನು ನೋಡಿ "ಇದು ಇನ್ನೊಂದು ವಿಪರೀತ, ಹೆಂಡತಿ ಗಂಡ ಅನ್ನುವುದಕ್ಕಿಂತ ತಾಯಿ ಮಗ ಎಂದರೆ ಸರಿಹೋಗುತ್ತದೆ" ಅಂದರು.

ಹೀಗೆ ಹಾಗೆ ಸುತ್ತಾಡಿ ರಾತ್ರಿ ೯ ಘಂಟೆಗೆ ಮನೆಗೆ ಬಂದೆವು.

ಇಂತು ನಿನ್ನ ಗೆಳತಿ.

## ೪೦

ಕಮಲು,

'ಹೆಣ್ಣಾಗಿ ಹುಟ್ಟಬಾರದು' ಎಂದು ಅನೇಕರು ಹೇಳಿದ್ದನ್ನು ಕೇಳಿದ್ದೆ. ಅದರಲ್ಲಿ ಸತ್ಯವಿಲ್ಲೆಂದು ಅದು ಕಿವಿಗೆ ಬಿದ್ದಾಗಲೆಲ್ಲ ನಗುತ್ತಿದ್ದೆ. ಆದರೆ ಈಗ ಅದರಲ್ಲಿ ನಿಜವಿದೆ ಅನ್ನಿಸಿದೆ.

ನಮ್ಮ ಮನೆಯ ಔಟ್ಹೌಸಿನಲ್ಲಿ ಒಂದು ರೂಮಿನಲ್ಲಿ ಒಬ್ಬ ಮುದಿ ಹೆಂಗಸು (ವಿಧವೆ), ಅವಳ ಮಗ ಇದ್ದಾರೆ. ಮಗನಿಗೆ ೧೪-೧೫ ವಯಸ್ಸಿರಬಹುದು. ಹೈಸ್ಕೂಲು ಎರಡನೆ ತರಗತಿಯಲ್ಲಿದ್ದಾನೆ. ಈಕೆ ಕೂಲಿಮಾಡಿ

ಅವನನ್ನು ಓದಿಸುತ್ತಿದ್ದಾಳೆ. ಅವರ ಕಷ್ಟ ದೇವರಿಗೇ ಪ್ರೀತಿ. ಅವರನ್ನೇ ಅವರ ಕಥೆ ಕೇಳಿದೆ. ಅವರ ಗಂಡ ಆಕೆಯನ್ನೂ ಮೂರು ವರ್ಷದ ಮಗುವನ್ನೂ ಬಿಟ್ಟು ಸತ್ತುಹೋದರಂತೆ. ಮನೆ, ಆಸ್ತಿ, ದುಡ್ಡು ಕಾಸು ಎಲ್ಲ ಇತ್ತಂತೆ. ಅವರ ಮೈದುನ ಮನೆಗೆ ಕರೆದುಕೊಂಡು ಹೋಗಿ ಸ್ವಲ್ಪ ದಿವಸ ಇಟ್ಟುಕೊಂಡಿದ್ದು ಒಳ್ಳೆಯಮಾತಾಡಿ ಎಲ್ಲ ಕಿತ್ತುಕೊಂಡು ಮೋಸಮಾಡಿ ಹೊರಗಟ್ಟಿದನಂತೆ. ಪಾಪ! ಹುಡುಗ ದೊಡ್ಡವನಾಗಿ ಸಂಪಾದಿಸುವವರೆಗೂ ಆಕೆಗೆ ಕಷ್ಟ.

ನನಗೆ ಬಹಳ ಕನಿಕರವುಂಟಾಯಿತು. ಯಾರದು ತಪ್ಪು? ಏಕೆ ಈ ಕಷ್ಟ ಬಂತು? ಎಂತ ಯೋಚಿಸಿದೆ. ಈಕೆ ಸ್ವಲ್ಪ ಓದಿ ಲೋಕ ವ್ಯವಹಾರ ತಿಳಿದುಕೊಂಡಿದ್ದರೆ ಈ ಕಷ್ಟಬರುತ್ತಿತ್ತೆ? ತಮ್ಮನ್ನು ನೋಡಿಕೊಳ್ಳುವವರು ಇರುವಾಗ ಹೆಂಗಸರು ಅವರ ಮರೆಯಲ್ಲಿದ್ದರೂ, ಇಂತಹ ಸಂದರ್ಭವೊದಗಿದಾಗ ತಮ್ಮ ಶ್ರೇಯಸ್ಸನ್ನು ತಾವು ಸಾಧಿಸಿಕೊಳ್ಳುವಷ್ಟು ಶಕ್ತರಾಗಿರಬೇಕಲ್ಲವೆ?

ಇಂತು ನಿನ್ನ ಗೆಳತಿ.

## ೪೧

ಕಮಲು,

ನೆನ್ನೆ ನನಗೂ ಅವರಿಗೂ ಚರ್ಚೆ ಬಂತು, ಕಾಲೇಜಿನಲ್ಲಿ ಓದುವ ಹುಡುಗ ಹುಡುಗಿಯರ ವಿಷಯವಾಗಿ. ನಾನು ನಮ್ಮ ಅಭಿಪ್ರಾಯ ಹೇಳಿದೆ, ಹೆಂಗಸರನ್ನು ಕಂಡರೆ ಗೌರವದಿಂದ ಸರಳತೆಯಿಂದ ನಡೆದುಕೊಳ್ಳುವವರು ಕಡಿಮೆಯೆಂದು. ಅವರೂ ಕಾಲೇಜಿನ ಹುಡುಗಿಯರು ವಿಚಿತ್ರಪ್ರಕೃತಿಯವರು, ಎಂದರು. ನಾವು ಉಳಿದ ಹೆಂಗಸರ ಹಾಗೆ ಎಂಬುವುದನ್ನು ಮರೆತುಬಿಟ್ಟಿದ್ದೇವಂತೆ! ಆಮೇಲೆ ಅವರ ಸ್ನೇಹಿತನೊಬ್ಬನು ಹುಡುಗಾಟಕ್ಕಾಗಿ ಬರೆದಿದ್ದ ಒಂದು ಕಾಗದ ತೋರಿಸಿದರು. ಕಾಗದವನ್ನು ಯಾರಿಗೆ ಬರೆದಿದ್ದರೊ ಅವರಿಗೆ ತಲಪಿಸಬೇಕೆಂದು ಅವನ ಉದ್ದೇಶವಲ್ಲ.–ಸಾಮಾನ್ಯವಾಗಿ, ಕಾಲೇಜು ಹುಡುಗಿಯರು ಇಟ್ಟುಕೊಂಡಿರುವ ಭಾವನೆಗಳನ್ನು ಹಾಸ್ಯ ಮಾಡುವುದಕ್ಕಾಗಿ. ಕಾಗದ ಇಲ್ಲಿ ಕಳುಹಿಸಿದ್ದೇನೆ:

ಕಾರಿನಲ್ಲಿ ಬರುವ ಹುಡುಗಿಯ ತಂದೆಯವರ ಸ॥ ಕ್ಕೆ.

ಮಾನ್ಯರೇ,

ಈ ಕಾಗದ ತಮಗೆ ಆಶ್ಚರ್ಯವನ್ನುಂಟು ಮಾಡಬಹುದು. ಗತ್ಯಂತರವಿಲ್ಲ ದುದರಿಂದ ಹೀಗೆ ತೊಂದರೆ ಕೊಡಬೇಕಾಯಿತು.

ತಮ್ಮ ಮಗಳ ಸಹಪಾಠಿ ನಾನು. ಮುಂದಿನ ವರ್ಷ ಸಹಪಾಠಿಯಾಗಿರು ವೆನೋ ಇಲ್ಲವೋ ತಿಳಿಯದು. ಏಕೆಂದರೆ ಈಗ ಕಾಲೇಜಿಗೆ ನಾನು ತಪ್ಪಿಸಿಕೊಳ್ಳದೆ ಬರುತ್ತಿದ್ದರೂ ಓದಿನ ಮೇಲೆ ಗಮನವಿಲ್ಲ. ನನಗೆ ಕಾಲೇಜಿಗೆ ಬರಲು ಬಹಳ ಉತ್ಸಾಹ. ನಿಮ್ಮ ಮಗಳು ಕುಳಿತುಕೊಳ್ಳುವ ಕೋಣೆಯಲ್ಲೇ ಕುಳಿತುಕೊಳ್ಳಲು ಅವಕಾಶ ಸಿಕ್ಕುವುದೇ ಅದಕ್ಕೆ ಕಾರಣ. ಅದಕ್ಕಾಗಿಯೇ ನಾನು ಫೀಜು ಕೊಡುತ್ತಿ ರುವುದು. ಇಂತಹ ಅಪಾರವಾದ ಆನಂದಕ್ಕೆ ಎಷ್ಟು ಕಡಿಮೆ ಶುಲ್ಕ ತೆಗೆದುಕೊಳ್ಳು ತ್ತಾರೆ ಕಾಲೇಜಿನವರು. ಹೆಚ್ಚು ಬರೆದು ತಮ್ಮನ್ನು ಬೇಸರಗೊಳಿಸಲು ನನಗೆ ಇಷ್ಟ ವಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, ನಿಮ್ಮ ಮಗಳನ್ನು ನೋಡಿದ ದಿನವೇ ನಾನು ಪ್ರೇಮಸಾಗರದಲ್ಲಿ ಮುಳುಗಿದೆ. ಆಕೆ ಭುವನ ಮೋಹಿನಿ. ಎರಡು ಜಡೆ ಹಾಕಿಕೊಂಡು ಬಂದರಂತು ತ್ರಿಭುವನ ಮೋಹಿನಿ. ದಿನ ದಿನವೂ ಹೆಚ್ಚು ಹೆಚ್ಚಾಗಿ ಮುಳುಗುತ್ತಿದ್ದೇನೆ. ನನ್ನನ್ನು ಉದ್ಧರಿಸುವುದು ತಮ್ಮಿಂದ ಮಾತ್ರ ಸಾಧ್ಯ.

ಇಲ್ಲಿ, ನಿಮ್ಮ ಮಗಳನ್ನು ಮದುವೆಯಾಗಲು ತಕ್ಕ ಯೋಗ್ಯತೆಯಿದೆಯೆಂಬು ದನ್ನು ಹೇಳಿಕೊಳ್ಳುವುದು ಅನುಚಿತವಾಗಲಾರದು. ತಾವು ಕೂಡ ನನ್ನ ಯೋಗ್ಯತೆ ತಿಳಿಯದೆ ನನ್ನನ್ನು ನಿಮ್ಮ ಮಗಳಿಗೆ ಹೇಗೆ ತಂದುಕೊಳ್ಳುವಿರಿ ? ನೀವು ನಿಮ್ಮ ಮಗಳ ಅಂದರೆ ಮದುವೆಯಾದಮೇಲೆ ನಮ್ಮಗಳ ಮುಂದಿನ ಯೋಗಕ್ಷೇಮಕ್ಕೆ ತಕ್ಕ ಏರ್ಪಾಡು ಮಾಡಿದ್ದೀರಿ. ಆದ್ದರಿಂದ ಆ ವಿಷಯವಾಗಿ ನಾನು ಏನೂ ಹೇಳು ವುದಿಲ್ಲ.

ನಾನು ಚೆನ್ನಾಗಿ ಬಟ್ಟೆ ಹಾಕಿಕೊಳ್ಳಬಲ್ಲೆ—ಬಟ್ಟೆಗಳಿದ್ದರೆ. ವಿನಯವಾಗಿ ನಡೆದುಕೊಳ್ಳಬಲ್ಲೆ. ಎಂತಹ ಪರಿಸ್ಥಿತಿಯಲ್ಲಾದರೂ ಮಾತನಾಡದೆ ಇರಬಲ್ಲೆ. ಮಾತನಾಡಬೇಕಾದಾಗಲೂ ಮೆಲ್ಲಗೆ ಉದ್ವೇಗವಿಲ್ಲದೆ ಮಾತನಾಡಬಲ್ಲೆ. ಅವಮಾನ ವನ್ನು ಅವಮಾನವೆಂದು ತಿಳಿಯುವುದಿಲ್ಲ. ಕಾರಿನಲ್ಲಿ ಹೋಗಬೇಕಾದಾಗ ಕಾರಿನ ಬಾಗಿಲು ತೆಗೆದು ನನ್ನ ಹೆಂಡತಿಯನ್ನು ಮೊದಲು ಕೂಡಿಸಿ ಆಮೇಲೆ ಕುಳಿತುಕೊಳ್ಳುತ್ತೇನೆ. ಆಕೆಗೆ ಬೇಕಾದವರು ಯಾರಾದರೂ ಬಂದರೆ ಮುಂದಿನ ಸೀಟಿನಲ್ಲಿ ಡ್ರೈವರ್ ಪಕ್ಕದಲ್ಲಿ ಕುಳಿತುಕೊಳ್ಳುತ್ತೇನೆ. ನನ್ನ ಎಡಗೈ ಮೇಲಿರುವ

ರೈನುಕೋಟು ಅಥವಾ ಓವರ್‌ಕೋಟಿನ ಜೊತೆಗೆ ಆಕೆಯ ಶಾಲನ್ನಾಗಲಿ, ಸಿಲ್ಕ್ ಮಫ್ಲರನ್ನಾಗಲಿ, ಛತ್ರಿಯನ್ನಾಗಲಿ ಇಟ್ಟುಕೊಳ್ಳುವುದು ನನಗೆ ಭಾರವಾಗಿ ಕಾಣು ವುದಿಲ್ಲ. ಎಲ್ಲಾದರೂ ಸ್ನೇಹಿತರ ಮನೆಗೆ ಅಥವಾ ಮೀಟಿಂಗಿಗೆ ಆಕೆ ಹೋದರೆ ಸಮಾಧಾನವಾಗಿ ಕಾರಿನಲ್ಲಿ ಕಾಯಬಲ್ಲೆ.

ನಾನು ಸ್ನೇಹಿತರನ್ನು ಮಾಡಿಕೊಳ್ಳುವುದಿಲ್ಲ. ಆಕೆಯು ಒಳಗಿದ್ದಾಗ ಆಕೆಯ ಸ್ನೇಹಿತರು ಬಂದರೆ ಅವಳು ಬರುವವರೆಗೂ ಅವರಿಗೆ ಬೇಸರ ಕಳೆಯಲು ಅಂದಿನ ಪೇಪರು ಕೊಡುವುದು, ಹವ ಹೇಗಿದೆಯೆಂದು ವಿಚಾರಿಸುವುದು ಇಂತಹ ಒಬ್ಬರಿಗೂ ಸಂಬಂಧವಿಲ್ಲದ, ಹೊತ್ತು ಕಳೆಯುವ ಮಾತುಗಳನ್ನಾಡುವ ಚತುರತೆ ನನಗಿದೆ. ಆಕೆ ಬಂದಮೇಲೆ, ನಾನಿರುವುದು ಆಕೆಗಿಷ್ಟವಿಲ್ಲವೆಂದು ಕಂಡುಬಂದರೆ ಆಕೆ ಹೇಳು ವುದಕ್ಕೆ ಮುಂಚೆಯೇ ರೂಮು ಬಿಟ್ಟುಹೋಗುತ್ತೇನೆ. ಅಡಿಗೆಯವನಿಗೆ ಹೇಳಿ ಉಪಾಹಾರ ಕಳುಹಿಸಿಕೊಡುತ್ತೇನೆ. ಒಂದುವೇಳೆ ಅವನು ಮನೆಯಲ್ಲಿಲ್ಲದಿದ್ದರೆ, ಟ್ರೇ ನಾನೇ ತೆಗೆದುಕೊಂಡು ಹೋಗಿ ಇಟ್ಟು ಗೌರವ ತೋರಿಸಲು ಒಂದುಸಲ ತಲೆ ಬಗ್ಗಿಸಿ ವಾಪಸು ಬರುತ್ತೇನೆ.

ಮಕ್ಕಳಾದರೆ—ಅವುಗಳನ್ನು ಆಡಿಸುವುದನ್ನೂ ಕಲಿತುಕೊಳ್ಳುತ್ತೇನೆ. ತಾಯಿಗೆ ಅವು ಹೆಚ್ಚು ತೊಂದರೆ ಕೊಡದ ಹಾಗೆ ನನ್ನ ಜೊತೆಯಲ್ಲೇ ಇರುವಂತೆ ಅವರನ್ನು ನನ್ನ ಸ್ನೇಹಿತರನ್ನಾಗಿ ಮಾಡಿಕೊಳ್ಳುತ್ತೇನೆ.

ನನ್ನ ಅಭಿಪ್ರಾಯದಲ್ಲಿ, ನಾನೇ ನಿಮ್ಮ ಹುಡುಗಿಗೆ ತಕ್ಕವನೆಂದು ತಿಳಿದು ಕೊಂಡಿದ್ದೇನೆ. ಆಕೆಯಂತಹವರಿಗೆ ಕೆಲವು ವೇಳೆ ಮಾತ್ರ ಗಂಡನಿರಬೇಕು; ಉಳಿದ ವೇಳೆ ಬೇಡ. ನಾನು ಬೇಕಾದಾಗ "Yes madam, at your service" ಅನ್ನುತ್ತಾ ಹಾಜರಾಗುತ್ತೇನೆ. ಬೇಡವಾದಾಗ ಮಾತಿಲ್ಲದೆ ಅದೃಶ್ಯ ವಾಗುತ್ತೇನೆ.

ಇದು ಬಹಳ ಮುಖ್ಯವಾದ ವಿಷಯ. ತಾವು ಯೋಚಿಸಬೇಕು. ಎರಡು ಪ್ರಾಣಗಳು ತಮ್ಮ ಕೈಲಿವೆ. ತಾವು ಒಪ್ಪದಿದ್ದರೆ—ಹಾಗಾಗುವುದಿಲ್ಲವೆಂದು ತಿಳಿದು ಕೊಂಡಿದ್ದೇನೆ—ಒಂದು ಜೀವವಂತೂ ಕೊನೆಯಾಗುವುದು. ತಾವು ಈ ಕಾಗದ ದಿಂದ ತಮಗೆ ಅವಮಾನವಾಗಿದೆಯೆಂದು ಭಾವಿಸಬಾರದು. ಎಲ್ಲ ಕೇಳಿಕೆಗಳಿಗೂ ಎರಡು ಉತ್ತರಗಳಿವೆ. ಸಮಾಧಾನವಿದ್ದರೆ 'ಹೂಂ' ಎನ್ನಿ, ಇಲ್ಲದಿದ್ದರೆ ಇಲ್ಲವೆನ್ನಿ ಅಷ್ಟೆ.

ಇಂತು ತಮ್ಮಗಳವನಾಗಲು ಹಾತೊರೆಯುತ್ತಿರುವ......

೪೨

ಕಮಲು,

ಈ ಕಾಗದ ಓದಿದ ಮೇಲೆ ಸಿಟ್ಟು ಬರಲಿಲ್ಲವೆ? ಎಂದು ಕೇಳಿದ್ದೀಯೆ. ಯಾರಿಗೆ ತಾನೆ ಸಿಟ್ಟು ಬಾರದು? ಕಾಗದವನ್ನು ಅವರ ಕಡೆ ಎಸೆದೆ. "ಕಾಲೇಜು ಹುಡುಗರು ನಮ್ಮನ್ನು ಹೀಗೆ ಭಾವಿಸುವರೆಂದು ನಾನು ತಿಳಿದಿರಲಿಲ್ಲ" ಎಂದೆ.

"ನೀನೂ ಹಾಗೆ ಅಂತ ನಾನು ಹೇಳಿದೆನೆ? ಯಾರೋ ಹುಡುಗಾಟಕ್ಕೆ ಬರೆದಿದ್ದ ಕಾಗದ ಕೊಟ್ಟೆ. ಎಲ್ಲದಕ್ಕು ಹೊರ ಅಚ್ಚಾದವರು ಒಬ್ಬೊಬ್ಬರಿರುತ್ತಾರೆ. ನೀನೂ ನಿನ್ನ ಗೆಳತಿಯರೂ ಈ ಗುಂಪಿನಿಂದ ಬೇರೆಯಿರಬಹುದು. ನಾನೂ ಉಳಿದ ಕಾಲೇಜು ಹುಡುಗರಂತೆಯೆಂದು ಭಾವಿಸಿರುವೆಯೇನು ?"

ನನಗೆ ಸಿಟ್ಟು ಕಡಿಮೆಯಾಗಲಿಲ್ಲ—"ಇಂತಹ ಬಿನ್ನಾಣದ ಮಾತುಗಳಿಗೇನು ?"

ಅವರು ನನ್ನ ಹತ್ತಿರ ಬಂದು ನನ್ನ ಎರಡು ಕೈಗಳನ್ನು ತಮ್ಮ ಕೈಗಳಲ್ಲಿ ಹಿಡಿದುಕೊಂಡರು.

"ಹಾಗಾದರೆ ನನ್ನ ಮೇಲೆ ನಿನಗೆ ಸಿಟ್ಟು?" ಅವರ ಮಾತಿನಲ್ಲಿ ದೈನ್ಯವಿತ್ತು. ನನ್ನ ಸಿಟ್ಟು ಮಾಯವಾಯಿತು.

"ಇಲ್ಲ" ಎಂದೆ.

ಅವರು ನನ್ನ ಕೈಗಳನ್ನು ಮೃದುವಾಗಿ ಅಮುಕಿ "ನಾನು ನಿನ್ನನ್ನೇಕೆ ಪ್ರೀತಿಸಿದೆ. ಏಕೆ ಪ್ರೀತಿಸುತ್ತೇನೆ ಗೊತ್ತೆ?"

ನಾನು ಅವರ ಮುಖವನ್ನೇ ನೋಡುತ್ತಿದ್ದೆ.

"ನೀನು ಚೆಲುವೆ; ನೀನೂ ನನ್ನನ್ನು ಒಲಿದೆ." ನನ್ನ ಮುಖವನ್ನೇ ನೋಡುತ್ತ ನಿಧಾನವಾಗಿ ಮಾತಾಡುತ್ತಿದ್ದರು.

"ನೀನು ಓದಿರುವೆ. ಆದರೂ ಓದಿದ ಉಳಿದ ಹುಡುಗಿಯರಂತಿಲ್ಲ. ಮನೆಗೆಲಸಗಳನ್ನು ಕಲಿತಿರುವೆ, ಮನೆ ನೋಡಿಕೊಳ್ಳಬಲ್ಲೆ. ಅದಕ್ಕೋಸ್ಕರವೇ ನಿನ್ನನ್ನು ಕಂಡರೆ ನನಗೆ ಮೆಚ್ಚು. ನಿಮ್ಮ ಅಮ್ಮನನ್ನು ತುಂಬ ಪ್ರೀತಿಸುತ್ತೀಯೆ. ಹಿಂದಿನ ಕಾಲದವರೆಂದು ಅವರಲ್ಲಿ ಉದಾಸೀನವಿಲ್ಲ.

ನನಗೆ ಗೊತ್ತು ನನ್ನ ಅಮ್ಮನಿಗೂ ಅಚ್ಚುಮೆಚ್ಚಾಗುವೆಯೆಂದು. ಅದಕ್ಕೇ ನಿನ್ನನ್ನು ಕಂಡರೆ ನನಗೆ ಹುಚ್ಚು".

ನನ್ನ ಭುಜಗಳ ಮೇಲೆ ಕೈಗಳನ್ನಿಟ್ಟರು.—

"ಆದರೇನು ಹೊಸ್ತಿಲಿಂದಾಚೆ ಹೆಂಗಸು ಹೋಗಕೂಡದೆಂದು ನಿಮ್ಮ ಅಭಿಪ್ರಾಯ."

"ಇಲ್ಲ ಇಲ್ಲ. ಹೊಸ್ತಿಲಿಂದೊಳಗಿರುವುದನ್ನು ಮರೆತು ಹೋಗ ಕೂಡದೆಂದು ನನ್ನ ಇಷ್ಟ. ಮೊದಲು ಮನೆ, ಆಮೇಲೆ ಹೊರಗಿನ ಪ್ರಪಂಚ. ಗಂಡಸಿನ ವಿಷಯದಲ್ಲೂ ಅದೇ ಅಭಿಪ್ರಾಯ ನನ್ನದು. ಮೊದಲು ಹೆಂಡತಿ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಬೇಕು. ಆಮೇಲೆ ಉಳಿದುದು. ಈ ವಿಷಯವನ್ನು ತಿಳಿಯದ ಹೆಂಗಸಾಗಲಿ ಗಂಡಸಾಗಲಿ ಸಂಸಾರಿಯಾಗಲು ಯೋಗ್ಯನಲ್ಲ."

ನಮನಮಗೆ ಏನೂ ಭಿನ್ನಾಭಿಪ್ರಾಯವಿಲ್ಲವೆಂದು ತಿಳಿಯಿತು. ನಾವು ಒಬ್ಬರನ್ನೊಬ್ಬರು ಪೂರ್ತಿಯಾಗಿ ಅರ್ಥಮಾಡಿಕೊಂಡೆವು. ಇಬ್ಬರ ಹೃದಯಗಳೂ ಒಂದಾದವು. ನಾನು ನನ್ನ ಮುಖವನ್ನು ಅವರ ಭುಜದ ಮೇಲೊರಗಿಸಿದೆ. ಅವರ ಒಂದು ಕೈ ನನ್ನ ಸೊಂಟವನ್ನು ಬಳಸಿತು; ಇನ್ನೊಂದು ನನ್ನ ತಲೆಯನ್ನು ನೇವರಿಸುತ್ತಿತ್ತು.

ಇಂತು ನಿನ್ನ ಗೆಳತಿ.

## ೪೩

ಕಮಲು,

'ನಿಮ್ಮ ಹನಿಮೂರ್ನ ಮುಗಿಯಿತೆ? ನಮ್ಮ ಮನೆಗೆಂದು ಬರುವುದು?' ಎಂದು ಬರೆದಿದ್ದೀಯೆ. ಸದ್ಯದಲ್ಲೇ. ಇಲ್ಲಿಂದ ಮುಂದೆ ನಿಮ್ಮೂರಿಗೆ. ಹೀಗೆ ಸುತ್ತಿದುದರಿಂದ ನಿನಗೆ ಸಂಸಾರದ ವಿಷಯವಾಗಿ ಬಹಳ ಗೊತ್ತಾಗಿದೆಯಲ್ಲವೆಯೆಂದು ಕೇಳಿರುವೆ. ಅನುಭವದ ಮುಂದೆ ಇವೆಲ್ಲ ಏನು ? ಇದುವರೆಗೆ ನಾನು ಯಾರನ್ನೂ ಅವರ ಅನುಭವಗಳ ವಿಷಯವಾಗಿ ಏನೂ ಕೇಳಲಿಲ್ಲ. ಯಾರಲ್ಲೂ ನನಗೆ ಹೆಚ್ಚಿಗೆ ಸಲಿಗೆಯಿರಲಿಲ್ಲ. ನೀನು ನನಗೆ ನಿನ್ನ ಅನುಭವಗಳನ್ನು ಹೇಳಬೇಕು. ಇವೆಲ್ಲಕ್ಕಿಂತಲೂ ಅದು ಹೆಚ್ಚೆಂದು ತಿಳಿದಿದ್ದೇನೆ.

ನಿನ್ನನ್ನು ನೋಡಿ ಬಹಳ ದಿನಗಳಾಯಿತು ನಿನ್ನ ಮಕ್ಕಳನ್ನು ನೋಡಬೇಕೆಂದು ಬಹಳ ಆಸೆಯಾಗಿದೆ. ಈಗಲೂ ನಿನ್ನ ಗಂಡ ನಿನ್ನನ್ನು ಮೊದಲಿನಹಾಗೆ ಎಡಬಿಡುವುದಿಲ್ಲವೇನು ? ಮತ್ತೆ ನಾನೂ ನೀನೂ ಮಾತಾಡುವುದು ಹೇಗೆ ?

ಬರುವ ದಿನ ತಿಳಿಸಿ ಕಾಗದ ಬರೆಯುತ್ತೇನೆ.

೪೪

ಕಮಲು,

ಇದೇ ನನ್ನ ಕೊನೆಯ ಕಾಗದವೆಂದು ಕಾಣುತ್ತದೆ. ನಾವು ನಾಳೆ ಬೆಳಿಗ್ಗೆ ಇಲ್ಲಿಂದ ಹೊರಡುವ ಬಸ್ಸಿನಲ್ಲಿ ಬರುತ್ತೇವೆ. ಯಾರನ್ನಾದರೂ ಬಸ್ ಸ್ಟಾಂಡಿಗೆ ಕಳುಹಿಸಿದರೆ ಸಾಕು.

ನಾಳೆ ರಾತ್ರಿ ನಾವಿಬ್ಬರೂ ಒಂದು ರೂಮಿನಲ್ಲಿ ಮಲಗೋಣ. ಹಿಂದೆ ಹರಟೆ ಹೊಡೆಯುತ್ತಿದ್ದ ಹಾಗೆ ಇನ್ನೊಂದುಬಾರಿ ಹರಟೆ ಹೊಡೆಯಬೇಕೆನ್ನಿಸಿದೆ. ಒಂದುರಾತ್ರಿಯಲ್ಲೇ ನಮ್ಮ ಮಾತು ಪೂರಯಿಸುವುದೋ ಇಲ್ಲವೊ ಗೊತ್ತಿಲ್ಲ. ನನಗಂತು ಪೂರಯಿಸುವುದಿಲ್ಲವೆನ್ನಿಸುತ್ತದೆ. ನಿನಗೇನೇನೋ ಹೇಳಬೇಕೆಂದಿದ್ದೇನೆ. ನೀನೂ ನನಗೆ ಹೇಳಬೇಕಾದದ್ದು ಬಹಳ ಇದೆಯಲ್ಲವೆ ?

ಇಂತು ನಿನ್ನ ಗೆಳತಿ
ಇಂದಿರಾ.

| | | |
|---|---|---|
| ಕಿಂದರಿಜೋಗಿ ಮತ್ತು ಇತರ ಕವನಗಳು | ಕುವೆಂಪು | ಮುಗಿದಿವೆ |
| ಸಂನ್ಯಾಸಿ ಮತ್ತು ಇತರ ಕಥೆಗಳು | ,, | ೧ ೪ ೦ |
| ಚಿತ್ರಾಂಗದಾ | ,, | ಅಚ್ಚಿನಲ್ಲಿ |
| ಕಾನೂರು ಸುಬ್ಬಮ್ಮ ಹೆಗ್ಗಡಿತಿ | ,, | ,, |
| ನನ್ನ ದೇವರು ಮತ್ತು ಇತರ ಕಥೆಗಳು | ,, | ೧ ೪ ೦ |
| ಅಹಲ್ಯೆ | ಪು.ತಿ.ನ | ಅಚ್ಚಿನಲ್ಲಿ |
| ಮೂರು ನಾಟಕಗಳು | ಕುವೆಂಪು | ,, |
| ರಾಕ್ಷಸನ ಮುದ್ರಿಕೆ | ತೀ.ನಂ.ಶ್ರೀ | ೧ ೪ ೦ |
| ಹಳ್ಳಿಯ ಬಾಳು | ಗೊರೂರು ರಾಮಸ್ವಾಮಿ ಐಯ್ಯಂಗಾರ್ | ೧ ೪ ೦ |
| ದೋಣಿಯ ಬಿನದ ಮತ್ತು ಕವಿ | ಪು.ತಿ.ನ | ೧ ೦ ೦ |
| ರಾಮಾಚಾರಿಯ ನೆನಪು | ,, | ೧ ೪ ೦ |
| ಶಾರದಯಾಮಿನಿ | ,, | ೧ ೦ ೦ |
| ಸಾಹಿತ್ಯಪ್ರಚಾರ ಮತ್ತು ಇತರ ಭಾಷಣಗಳು | ಕುವೆಂಪು | ೧ ೨ ೦ |
| ನಿರಂಕುಶಮತಿಗಳಾಗಿ | ,, | ೦ ೧೨ ೦ |
| ಮಲೆನಾಡಿನ ಚಿತ್ರಗಳು | ,, | ಅಚ್ಚಿನಲ್ಲಿ |
| ಪಾಂಚಜನ್ಯ | ,, | ೧ ೪ ೦ |
| ಶೈಲಿ | ಎಸ್.ವಿ.ರಂಗಣ್ಣ | ೧ ೧೪ ೦ |
| ಸ್ವಪ್ನಜೀವಿ ಮತ್ತು ಇತರ ಕಥೆಗಳು | ಆನಂದ | ೦ ೧೨ ೦ |
| ಗೋಕುಲ ನಿರ್ಗಮನ | ಪು.ತಿ.ನ | ೧ ೦ ೦ |
| ರಕ್ತಾಕ್ಷಿ | ಕುವೆಂಪು | ೧ ೧೨ ೦ |
| ರಥಸಪ್ತಮಿ ಮತ್ತು ಇತರ ಚಿತ್ರಗಳು | ಪು.ತಿ.ನ | ೧ ೦ ೦ |
| ಆಷಾಢಭೂತಿ | ಎ.ಎನ್.ಮೂರ್ತಿರಾವ್ | ೧ ೦ ೦ |
| ಹಗಲುಗನಸುಗಳು | ,, | ೧ ೪ ೦ |
| ಮಾಟಗಾತಿ | ಆನಂದ | ೧ ೪ ೦ |
| ಮುಗುದೆಯರ ಪತ್ರಗಳು | ಸಿ.ಕೃಷ್ಣ | ೧ ೮ ೦ |
| ಬಿರುಗಾಳಿ | ಕುವೆಂಪು | ೧ ೪ ೦ |
| ಕೊಳಲು | ಕುವೆಂಪು | ೧ ೮ ೦ |
| ಕೋಗಿಲೆ ಮತ್ತು ಸೋವಿಯಟ್ ರಷ್ಯಾ | ,, | ೧ ೦ ೦ |
| ಯಮುನ ಸೋಲು ಮತ್ತು ಇತರ ನಾಟಕಗಳು | ,, | ೧ |
| ಬೊಮ್ಮನ ಹಳ್ಳಿಯ ಕಿಂದರಿಜೋಗಿ | ,, | ೦ ೮ |
| ದಹನ ಚಿತ್ರ | ಆನಂದ | ೦ ೮ ೦ |
| ನನ್ನ ಅಪ್ಸರೆ | ಸಿ.ಕೃಷ್ಣ | ೦ ೬ ೦ |

---

ಕಾವ್ಯಾಲಯ * ಪ್ರಕಾಶಕರು * ಮೈಸೂರು